# ಅಧ್ಯಾಯ –II
# ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು/ಮೌಲ್ಯ ವರ್ಧಿತ ತೆರಿಗೆ

## 2.1 ತೆರಿಗೆ ನಿರ್ವಹಣೆ

ಮಾರಾಟಗಳ ಮೇಲಿನ ತೆರಿಗೆ/ಮೌಲ್ಯ ವರ್ಧಿತ ತೆರಿಗೆ (ಮೌವತೆ) ಅಧಿನಿಯಮಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಲ್ಪಟ್ಟಿರುವಂತಹ ನಿಯಮಗಳು ಸರ್ಕಾರದ ಮಟ್ಟದಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ಹಣಕಾಸು ಇಲಾಖೆ, ಇವರಿಂದ ನಿರ್ವಹಿಸಲ್ಪಡುತ್ತವೆ. ವಾಣಿಜ್ಯ ತೆರಿಗೆಗಳ ಆಯುಕ್ತರವರು (ವಾತೆಆ) ವಾಣಿಜ್ಯ ತೆರಿಗೆಗಳ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ ಹಾಗೂ ಅವರು 14 ಹೆಚ್ಚುವರಿ ಆಯುಕ್ತರವರುಗಳ ಸಹಾಯದಿಂದ ಕಾರ್ಯನಿರ್ವಹಿಸುತ್ತಾರೆ. ರಾಜ್ಯದಲ್ಲಿ 13 ವಿಭಾಗೀಯ ಮೌಲ್ಯ ವರ್ಧಿತ ತೆರಿಗೆ ಕಚೇರಿಗಳು (ವಿಭಾಗೀಯ ಮೌವತೆ ಕಚೇರಿ), 13 ಮನವಿ (ಅಪೀಲ್) ಅಧಿಕಾರಿಗಳ ಕಚೇರಿಗಳು, 13 ಜಾರಿ/ಜಾಗೃತ ದಳ ಕಚೇರಿಗಳು ಹಾಗೂ ಒಂದು ಅಪ್ರಧಾನ ಅಧಿನಿಯಮಗಳ ವಿಭಾಗವು 42 ಜಂಟಿ ಆಯುಕ್ತರವರುಗಳಿಂದ (ವಾತೆಜಂಆ) ನಿರ್ವಹಿಸಲ್ಪಡುತ್ತಿವೆ. ರಾಜ್ಯದಲ್ಲಿ 123 ಉಪ ಆಯುಕ್ತರುಗಳು (ವಾತೆಉಆ), 321 ಸಹಾಯಕ ಆಯುಕ್ತರುಗಳು (ವಾತೆಸಆ) ಹಾಗೂ 526 ವಾಣಿಜ್ಯ ತೆರಿಗೆ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವರು. ಅನುಕ್ರಮವಾಗಿ, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರುಗಳು ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುವ 118 ಸ್ಥಳೀಯ ಮೌವತೆ ಕಚೇರಿಗಳು, ಮೌವತೆ ಉಪ ಕಚೇರಿಗಳು, ವೃತಿ ತಿರಿಗೆ ಕಚೇರಿಗಳು ಹಾಗೂ ಮನೋರಂಜನೆ ತೆರಿಗೆ ಕಚೇರಿಗಳು ಕ್ಷೇತ್ರ ಮಟ್ಟದಲ್ಲಿ ಮೌವತೆಯನ್ನು ನಿರ್ವಹಿಸುತ್ತವೆ. ಇಲಾಖೆಯಿಂದ ಕರನಿರ್ಧಾರಣೆಗಳು/ಪುನರ್–ಕರನಿರ್ಧಾರಣೆಗಳನ್ನು ಅಂತಿಮ ರೂಪಕ್ಕೆ ತರಲ್ಪಡುವ 266 ಲೆಕ್ಕಪರಿಶೋಧನಾ ಕಚೇರಿಗಳ ನೇತೃತ್ವವನ್ನು ವಾಣಿಜ್ಯ ತೆರಿಗೆಗಳ ಉಪ ಆಯುಕ್ತರುಗಳು, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರುಗಳು ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿಗಳು ಹೊಂದಿರುತ್ತಾರೆ.

## 2.2 ಆಂತರಿಕ ಲೆಕ್ಕಪರಿಶೋಧನೆ

ಇಲಾಖೆಯು, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ (ಆಂತರಿಕ ಲೆಕ್ಕಪರಿಶೋಧನೆ ಮತ್ತು ಪರೀಕ್ಷಣೆ) ನೇತೃತ್ವದಲ್ಲಿರುವಂತಹ ಒಂದು ಆಂತರಿಕ ಲೆಕ್ಕಪರಿಶೋಧನಾ ಕೋಶವನ್ನು ಹೊಂದಿದೆ. ಅಧಿನಿಯಮ ಹಾಗೂ ನಿಯಮಗಳ ಅನುವುಗಳಿಗೆ ಹಾಗೂ ಅಲ್ಲದೇ ಕಾಲಾನುಕಾಲಕ್ಕೆ ನೀಡಲ್ಪಡುವ ಇಲಾಖಾ ನಿರ್ದೇಶನಗಳಿಗೆ ಬದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಈ ಕೋಶವು ಅನುಮೋದಿತ ಕ್ರಿಯಾ ಯೋಜನೆಯ ಅನುಸಾರ ಹಾಗೂ ಅಲ್ಲದೇ ಸಂಚಾಲಕ ಸಮಿತಿಯಿಂದ ನಿರ್ಧರಿಸಲ್ಪಟ್ಟಿರುವ ಮಾನದಂಡಗಳ ಅನುಸಾರ ಕರನಿರ್ಧಾರಣಾ ಪ್ರಕರಣಗಳನ್ನು ಪರೀಕ್ಷಾ–ಪರಿಶೀಲನೆ ನಡೆಸುವ ಅಗತ್ಯತೆಯಿದೆ.

ಇಲಾಖೆಯು ಒದಗಿಸಿದ ಮಾಹಿತಿಯಂತೆ, ಆಂತರಿಕ ಲೆಕ್ಕಪರಿಶೋಧನಾ ವಿಭಾಗವು 2011–12 ಸಾಲಿನಿಂದ ಕಾರ್ಯನಿರತವಾಗಿದೆ. 2015–16 ಸಾಲಿನಲ್ಲಿ, ಆಂತರಿಕ ಲೆಕ್ಕಪರಿಶೋಧನಾ ಕೋಶವು 17 ಕಚೇರಿಗಳನ್ನು ವ್ಯಾಪಿಸಿದ್ದಿತು/ಲೆಕ್ಕಪರಿಶೋಧನೆಗೆ ಒಳಪಡಿಸಿದ್ದಿತು ಹಾಗೂ ಲೆಕ್ಕಪರಿಶೋಧನೆಗೆ ಒಳಪಡಿಸಬೇಕಿದ್ದಂತಹ ಒಟ್ಟಾರೆ ಕಚೇರಿಗಳ ಸಂಖ್ಯೆಯನ್ನು ಒದಗಿಸಲಿಲ್ಲ. 2015-16 ಸಾಲಿನಲ್ಲಿ, ₹ 35.44 ಕೋಟಿ ಮೊತ್ತವು ಒಳಗೊಂಡಂತೆ 307 ಲೆಕ್ಕಪರಿಶೋಧನಾ ಆಕ್ಷೇಪಣೆಗಳನ್ನು ಮಾಡಲಾಗಿದ್ದಿತು. 31 ಮಾರ್ಚ್ 2016ರ ಅಂತ್ಯದಲ್ಲಿದ್ದಂತೆ ₹ 168.80 ಕೋಟಿ ಮೊತ್ತವು ಒಳಗೊಂಡಂತೆ 1,141 ಆಕ್ಷೇಪಣೆಗಳು ಬಾಕಿಯಿದ್ದವು.

## 2.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

2015–16ರಲ್ಲಿ ಮೌವತೆ, ಪ್ರವೇಶ ತೆರಿಗೆ, ಉದ್ಯೋಗಗಳ ಮೇಲಿನ ತೆರಿಗೆ ಹಾಗೂ ಕೃಷಿ ವರಮಾನ ತೆರಿಗೆಗೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆಗಳ ಇಲಾಖೆಯ 152 ಕಚೇರಿಗಳ ದಾಖಲೆಗಳ ಪರೀಕ್ಷಾ–ಪರಿಶೀಲನೆಯು ₹ 320.15 ಕೋಟಿ ಮೊತ್ತವು ಒಳಗೊಂಡಂತೆ 763 ಕಂಡಿಕೆಗಳಲ್ಲಿ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು ಹಾಗೂ ಇನ್ನಿತರೆ ನಿಯಮ ಬಾಹಿರತೆಗಳನ್ನು ತೋರಿಸಿಕೊಟ್ಟಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳು **ಕೋಷ್ಟಕ 2.1**ರಲ್ಲಿ ನೀಡಲಾಗಿರುವ ವಿಸ್ತೃತ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ.

**ಕೋಷ್ಟಕ 2.1**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| | **ಮೌಲ್ಯ ವರ್ಧಿತ ತೆರಿಗೆ** | | |
| 1. | ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ಪಾವತಿಸಿದ್ದುದು | 82 | 8.93 |
| 2. | ದಂಡವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 269 | 27.05 |
| 3. | ಬಡ್ಡಿಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 149 | 6.62 |
| 4. | ಮಾರಾಟಗಳ ಮೇಲಿನ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 73 | 7.50 |
| 5. | ತೆರಿಗೆ ಜಮೆಯನ್ನು ತಪ್ಪಾಗಿ/ಅಧಿಕ ಪ್ರಮಾಣದಲ್ಲಿ ಮುಂದಿನ ತೆರಿಗೆ ಅವಧಿಗೆ ತೆಗೆದುಕೊಂಡು ಹೋಗಿದ್ದುದು | 51 | 2.43 |
| 6. | ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ತಪ್ಪಾಗಿ/ಅಧಿಕ ಪ್ರಮಾಣದಲ್ಲಿ ಅನುಮೋದಿಸಿದ್ದುದು | 35 | 1.89 |
| 7. | ಸಲ್ಲಿಕೆಗಳು ಸ್ವೀಕೃತಗೊಂಡಿರುವುದನ್ನು ತಿಳಿಸದಿದ್ದುದು | 23 | 6.40 |
| 8. | ಮೂಲದಲ್ಲಿಯೇ ಕಡಿದುಕೊಳ್ಳಲಾಗಿದ್ದ ತೆರಿಗೆ ಮೊತ್ತವನ್ನು ತಪ್ಪಾಗಿ ಅನುಮೋದಿಸಿದ್ದುದು | 5 | 4.42 |
| 9. | ಇತರೆ ನಿಯಮಬಾಹಿರತೆಗಳು | 43 | 3.51 |
| | **ಒಟ್ಟು** | **730** | **68.75** |
| | **ಸರಕುಗಳ ಪ್ರವೇಶದ ಮೇಲಿನ ತೆರಿಗೆ** | | |
| 10. | ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಅಡಿಯಲ್ಲಿ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 21 | 0.94 |
| 11. | ಇತರೆ ನಿಯಮಬಾಹಿರತೆಗಳು | 2 | 0.02 |
| | **ಒಟ್ಟು** | **23** | **0.96** |
| | **ವೃತ್ತಿಗಳ ಮೇಲಿನ ತೆರಿಗೆ** | | |
| 12. | **ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಅಪ್ರಧಾನ ತೆರಿಗೆಗಳ ನಿರ್ವಹಣೆಯ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ** | 1 | 250.36 |
| 13. | ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 1 | 0.01 |
| | **ಒಟ್ಟು** | **2** | **250.37** |
| | **ಕೃಷಿ ವರಮಾನ ತೆರಿಗೆ** | | |
| 14. | ಬಡ್ಡಿಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 8 | 0.07 |
| | **ಒಟ್ಟಾರೆ ಮೊತ್ತ** | **763** | **320.15** |

2015–16 ಸಾಲಿನಲ್ಲಿ, ಲೆಕ್ಕಪರಿಶೋಧನೆಯು ₹ 3.33 ಕೋಟಿ ಮೊತ್ತವು ಒಳಗೊಂಡಂತೆ 42 ಕಂಡಿಕೆಗಳಲ್ಲಿ ಸ್ಪಷ್ಟಪಡಿಸಿದ್ದಂತಹ ಕರನಿರ್ಧರಣೆಯನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು ಹಾಗೂ ಇನ್ನಿತರೆ ಲೋಪದೋಷಗಳನ್ನು ಇಲಾಖೆಯು ಒಪ್ಪಿಕೊಂಡಿತು ಹಾಗೂ ಆರು ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿದ್ದಂತಹ ಪ್ರಕರಣಗಳಲ್ಲಿ ₹ 0.04 ಕೋಟಿ ಮೊತ್ತವನ್ನು ವಸೂಲಾತಿ ಮಾಡಿತು. ಈ ಹಿಂದಿನ ಸಾಲುಗಳಿಗೆ ಸಂಬಂಧಿಸಿದಂತೆ 499 ಕಂಡಿಕೆಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ ಪ್ರಕರಣಗಳಲ್ಲಿ ₹ 24.83 ಕೋಟಿ ಮೊತ್ತವನ್ನೂ ಸಹ ವಸೂಲಾತಿ ಮಾಡಿತು.

₹ 250.36 ಕೋಟಿ ಮೊತ್ತವು ಒಳಗೊಂಡಂತೆ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ 'ಅಪ್ರಧಾನ ತೆರಿಗೆಗಳ ನಿರ್ವಹಣೆ'ಯ ಮೇಲಿನ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಹಾಗೂ ಅನುಸರಣಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ₹ 31.23 ಕೋಟಿ ಮೊತ್ತವು ಒಳಗೊಂಡಂತೆ ಕೆಲವು ದೃಷ್ಟಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 2.4 ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಅಪ್ರಧಾನ ತೆರಿಗೆಗಳ ನಿರ್ವಹಣೆಯ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

### ಮುಖ್ಯಾಂಶಗಳು

ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿದ್ದಂತಹ ರಾಜ್ಯದಲ್ಲಿನ 2.75 ಲಕ್ಷ ಸಾರಿಗೆ ವಾಹನಗಳ ಮಾಲೀಕರುಗಳು ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡಿರಲಿಲ್ಲ. ಅವರುಗಳಿಂದ ಏಪ್ರಿಲ್ 2011ರಿಂದ ಮಾರ್ಚ್ 2016ರ ನಡುವಿನ ಅವಧಿಗೆ ₹ 137.11 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆ ಪಾವತಿಯು ಬಾಕಿಯಿದ್ದಿತು.

(ಕಂಡಿಕೆ 2.4.9.1)

ಸೇವಾ ವಲಯದಲ್ಲಿ ವಿವಿಧ ಹುದ್ದೆಗಳಲ್ಲಿ ತೊಡಗಿಸಿಕೊಂಡಿದ್ದಂತಹ 6,943 ಖಾಸಗಿ ಹಾಗೂ ಸಾರ್ವಜನಿಕ ನಿಯಮಿತ ಕಂಪನಿಗಳು, 12,316 ಪಾಲುದಾರಿಕೆ ಸಂಸ್ಥೆಗಳು ಹಾಗೂ 60,480 ವೈಯಕ್ತಿಕ ವ್ಯಕ್ತಿಗಳು ನೋಂದಣಿ ಮಾಡಿಸಿಕೊಳ್ಳದಿದ್ದುದು, ಈ ವ್ಯಕ್ತಿಗಳಿಂದ/ಸಂಸ್ಥೆಗಳಿಂದ 2011–12 ಹಾಗೂ 2015–16ರ ನಡುವಿನ ಅವಧಿಗೆ ₹ 99.67 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆಯನ್ನು ವಸೂಲಾತಿ ಮಾಡದಿರುವಲ್ಲಿ ಪರಿಣಮಿಸಿದ್ದಿತು.

(ಕಂಡಿಕೆ 2.4.9.2)

2011–16ರ ಅವಧಿಯಲ್ಲಿ ತಯಾರಿಸಲಾಗಿದ್ದಂತಹ 667 ಚಲನಚಿತ್ರಗಳಲ್ಲಿ ಕೆಲಸ ಮಾಡುತ್ತಿದ್ದಂತಹ ಹಾಗೂ ತೆರಿಗೆಯನ್ನು ಪಾವತಿಸಲು ಬಾಧ್ಯರಾಗಿದ್ದಂತಹ ಅಂದಾಜು 1,600 ವ್ಯಕ್ತಿಗಳ ಪೈಕಿ ಕೇವಲ 76 ವ್ಯಕ್ತಿಗಳು ಮಾತ್ರ ನೋಂದಣಿ ಮಾಡಿಸಿಕೊಂಡಿದ್ದುದು, ಈ ವಲಯದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮವನ್ನು ಜಾರಿಗೊಳಿಸುವಲ್ಲಿನ ಅಸಮರ್ಪಕತೆಯನ್ನು ತೋರಿಸುತ್ತದೆ.

(ಕಂಡಿಕೆ 2.4.9.4)

ದಾಖಲಿಸಿಕೊಂಡಿದ್ದಂತಹ 1.13 ಲಕ್ಷ ವ್ಯಕ್ತಿಗಳಿಗೆ ಸಂಬಂಧಿಸಿದಂತೆ PAN ಅನ್ನು ಸೆರಿಹಿಡಿಯುವಲ್ಲಿನ ವಿಫಲತೆಯು, ಓರ್ವ ವ್ಯಕ್ತಿಯು ವೃತ್ತಿ ತೆರಿಗೆಯ ಪಾವತಿಯ ಬಾಧ್ಯತೆಯು ಆದಾಯ ತೆರಿಗೆ ಪಾವತಿದಾರರೋ ಅಥವಾ ಅಲ್ಲವೋ ಎಂಬುದರ ಮೇಲೆ ಅವಲಂಬಿತವಾಗಿರುವ ಪ್ರಕರಣಗಳಲ್ಲಿ, ಬಾಕಿಯಿರುವಂತಹ ವೃತ್ತಿಗಳ ಮೇಲಿನ ತೆರಿಗೆಯ ಯಥಾರ್ಥತೆಯಿಂದ ಕೂಡಿದ ಮೊತ್ತವನ್ನು ಖಚಿತಪಡಿಸಿಕೊಳ್ಳುವಲ್ಲಿ ವಾಣಿಜ್ಯ ತೆರಿಗೆ ಇಲಾಖೆಗೆ ಸಾಧ್ಯವಾಗದಂತೆ ಮಾಡಿತು.

(ಕಂಡಿಕೆ 2.4.10)

ತಪ್ಪಾಗಿ ಮಾಡಲಾಗಿದ್ದ ವರ್ಗೀಕರಣ ಹಾಗೂ ತತ್ಪರಿಣಾಮವಾಗಿ ಕರದಾತರುಗಳು ತೆರಿಗೆ ದರಗಳನ್ನು ತಪ್ಪಾಗಿ ಅನ್ವಯಿಸಿದ್ದು ಹಾಗೂ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ತಪ್ಪುಗಳನ್ನು ಕಂಡು ಹಿಡಿಯುವಲ್ಲಿ PELSoft ನಲ್ಲಿನ ಲೋಪದೋಷಗಳು 2.81 ಲಕ್ಷ ಮಾಲೀಕರುಗಳು, 47,940 ಪಾಲುದಾರ ಸಂಸ್ಥೆಗಳು ಹಾಗೂ 17,867 ಕಂಪನಿಗಳು 2011–12ರಿಂದ 2015–16 ಸಾಲುಗಳಲ್ಲಿ ₹ 82.57 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸದಿರುವಲ್ಲಿ/ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿದ್ದಿತು.

(ಕಂಡಿಕೆಗಳು 2.4.12 ರಿಂದ 2.4.14)

ಸೇವಾ ವಲಯದಲ್ಲಿನ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದ 10,935 ವರ್ತಕರುಗಳು ₹ 4.59 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಿರಲಿಲ್ಲ ಎಂಬುದನ್ನು ಸೇವಾ ತೆರಿಗೆ ಇಲಾಖೆಯ ಜೊತೆ ಲೆಕ್ಕಪರಿಶೋಧನೆಯು ಮಾಡಿದ ಅಡ್ಡಪರಿಶೀಲನೆಯು ತೋರಿಸಿಕೊಟ್ಟಿತು

(ಕಂಡಿಕೆ 2.4.17)

### 2.4.1 ಪೀಠಿಕೆ

ವಾಣಿಜ್ಯ ತೆರಿಗೆಗಳ ಇಲಾಖೆಯು ನಿರ್ವಹಿಸುವಂತಹ ಅಪ್ರಧಾನ ತೆರಿಗೆಗಳು, ವೃತ್ತಿಗಳ ಮೇಲಿನ ತೆರಿಗೆ (ಪಿಟಿ), ಮನೋರಂಜನೆಗಳ ಮೇಲಿನ ತೆರಿಗೆ (ಇಟಿ) ಹಾಗೂ ವಿಲಾಸಗಳ ಮೇಲಿನ ತೆರಿಗೆ (ಎಲ್‌ಟಿ), ಇವುಗಳನ್ನು ಒಳಗೊಂಡಿರುತ್ತವೆ. ಕರ್ನಾಟಕ ವೃತ್ತಿಗಳು, ವ್ಯಾಪಾರವ್ಯವಹಾರಗಳು, ಕಸುಬು/ವೃತ್ತಿ ಹಾಗೂ ಉದ್ಯೋಗ (ಕೆಟಿಪಿಟಿಸಿಇ) ಅಧಿನಿಯಮ, 1976, ಕರ್ನಾಟಕ ಮನೋರಂಜನೆಗಳ ಮೇಲಿನ ತೆರಿಗೆ (ಕೆಇಟಿ) ಅಧಿನಿಯಮ, 1958, ಹಾಗೂ ಕರ್ನಾಟಕ ವಿಲಾಸಗಳ ಮೇಲಿನ ತೆರಿಗೆ (ಕೆಟಿಎಲ್) ಅಧಿನಿಯಮ, 1979, ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವಂತಹ ನಿಯಮಗಳು ಕರ್ನಾಟಕದಲ್ಲಿ ಮೇಲೆ ತಿಳಿಸಲಾದಂತಹ ತೆರಿಗೆಗಳನ್ನು ವಿಧಿಸುವಿಕೆ ಹಾಗೂ ಸಂಗ್ರಹಣೆಯನ್ನು ನಿರ್ವಹಿಸುತ್ತವೆ.

ವೃತ್ತಿ ಅಥವಾ ಕಸುಬನ್ನು ಅಥವಾ ಯಾವುದೇ ವ್ಯಾಪಾರವ್ಯವಹಾರ ಅಥವಾ ಸಾರ್ವಜನಿಕವೇ ಆಗಿರಲಿ ಅಥವಾ ಖಾಸಗಿಯೇ ಆಗಿರಲಿ ನೌಕರಿಯನ್ನು ಮಾಡುತ್ತಿರಲಿ ಅಥವಾ ರಾಜ್ಯದಲ್ಲಿ ಯಾವುದೇ ರೀತಿಯಲ್ಲಿ ಉದ್ಯೋಗವನ್ನು ಮಾಡುತ್ತಿರಲಿ ಅಂತಹ ಪ್ರತಿಯೊರ್ವ ವ್ಯಕ್ತಿಯೂ ವಾರ್ಷಿಕ[1] ಗರಿಷ್ಠ ₹ 2,500 ದರದಲ್ಲಿ ವೃತ್ತಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ.

ಮನೋರಂಜನೆಗಳ ಮೇಲಿನ ತೆರಿಗೆಯು, ವ್ಯಕ್ತಿಗಳಿಗೆ ಪಾವತಿಯ ಆಧಾರದ ಮೇರೆಗೆ ಒಳಕ್ಕೆ ಪ್ರವೇಶ ನೀಡುವಂತಹ ವಿಡಿಯೋ ಪ್ರದರ್ಶನಗಳು, ಕುದುರೆ ಓಟಗಳು, ಕೇಬಲ್ಲು ಟೆಲಿವಿಷನ್, ಯಾವುದೇ ರೀತಿಯ ಮೋಜಿನ ವಿಹಾರ, ಯಾವುದೇ ರೀತಿಯ ಮನರಂಜನಾ ಪ್ರದರ್ಶನ ಅಥವಾ ದೃಶ್ಯಾವಳಿ/ವೈಭವದ ಪ್ರದರ್ಶನ ಅಥವಾ ಒಂದು ಆಟ ಅಥವಾ ಕ್ರೀಡೆ, ಒಳಾಂಗಣದಲ್ಲಿ ನಡೆದಿರಲಿ ಅಥವಾ ಹೊರಾಂಗಣದಲ್ಲಿ ನಡೆದಿರಲಿ, ಇವುಗಳನ್ನೂ ಒಳಗೊಂಡಂತೆ ಚಲನಚಿತ್ರ ಪ್ರದರ್ಶನಗಳ ಮೇಲೆ ವಿಧಿಸಲಾಗುವಂತಹ ತೆರಿಗೆಯಾಗಿರುತ್ತದೆ. ಪ್ರವೇಶ ಶುಲ್ಕದ ಪಾವತಿಯ ಮೇಲೆ ವಿಧಿಸಲಾಗುವಂತಹ ತೆರಿಗೆಯ ದರವನ್ನು ಕಾಲಾನುಕಾಲಕ್ಕೆ ನಿಗದಿಪಡಿಸಲಾಗುವುದು.


ಕರ್ನಾಟಕ ವಿಲಾಸಗಳ ಮೇಲಿನ ತೆರಿಗೆಯ ಅಡಿಯಲ್ಲಿ ವಿಲಾಸಗಳು ಎಂದರೆ ಸುಖಾನುಭವ/ಆಹ್ಲಾದಕರ ನೆಲೆಸಿರುವಿಕೆಗಾಗಿ ಅಥವಾ ಜೀವನಾವಶ್ಯಕಗಳಿಗೆ ಮೀರಿದಂತೆ ಅಸಾಧಾರಣವಾದಂತಹ ಸುಖಕರವಾದಂತಹ ಅಥವಾ ಸೌಕರ್ಯಗಳನ್ನು ಒದಗಿಸುವಂತಹ ಸೇವೆಗಳು. ಒಂದು ಹೋಟೆಲಿನಲ್ಲಿ, ಆರೋಗ್ಯ ಕ್ಲಬ್ಬಿನಲ್ಲಿ, ಮದುವೆ ಹಾಲಿನಲ್ಲಿ, ಕ್ಲಬ್ಬು ಅಥವಾ ಒಂದು ಆಸ್ಪತ್ರೆಯಲ್ಲಿ ಒದಗಿಸಲಾಗುವ ವಿಲಾಸಿ ಸೌಕರ್ಯಗಳ ಮೇಲೆ ವಿಲಾಸಗಳ ಮೇಲಿನ ತೆರಿಗೆಯನ್ನು ನಿರ್ದಿಷ್ಟ ದರಗಳಲ್ಲಿ ವಿಧಿಸಲಾಗುವುದು.

ವೃತ್ತಿಗಳ ಮೇಲಿನ ತೆರಿಗೆ (ಪಿಟಿ), ಮನೋರಂಜನೆಗಳ ಮೇಲಿನ ತೆರಿಗೆ (ಇಟಿ) ಹಾಗೂ ವಿಲಾಸಗಳ ಮೇಲಿನ ತೆರಿಗೆ (ಎಲ್‌ಟಿ), ಇವುಗಳ ಅಡಿಯಲ್ಲಿ ಸಲ್ಲಿಕೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದನ್ನು ಹಾಗೂ ಸಲ್ಲಿಕೆಗಳಲ್ಲಿ ತೋರಿಸಿರುವಂತೆ ಪಾವತಿಸಬೇಕಾಗಿರುವ ತೆರಿಗೆಯನ್ನು ಪಾವತಿಸುವುದನ್ನು PELSoft ಎಂಬ ತಂತ್ರಾಂಶ ಅನ್ವಯದ ಮೂಲಕ ಅನುವು ಮಾಡಲಾಗಿದೆ.

ಸಲ್ಲಿಸಲು ಬಾಕಿಯಿರುವಂತಹ ಸಲ್ಲಿಕೆಯನ್ನು ಸಲ್ಲಿಸದಿರುವಂತಹ ಅಥವಾ ಸಲ್ಲಿಕೆಯನ್ನು ವಿಳಂಬವಾಗಿ ಸಲ್ಲಿಸಿರುವ ಅಥವಾ ತೆರಿಗೆ ಪಾವತಿಯನ್ನು ಮಾಡುವಲ್ಲಿ ತಪ್ಪಿತಸ್ತವಾಗಿರುವ ಅಥವಾ ಅದನ್ನು ವಿಳಂಬವಾಗಿ ಪಾವತಿಸಿರುವವರ ಪಟ್ಟಿಯನ್ನು PELSoft ಹೊರತೆಗೆಯುತ್ತದೆ.

[1] ಭಾರತದ ಸಂವಿಧಾನದ ಕಲಮು 276ರ ಅಡಿಯಲ್ಲಿನ ಷರತ್ತು (2).

## 2.4.2 ಸಾಂಸ್ಥಿಕ ರಚನೆ




## 2.4.3 ಲೆಕ್ಕಪರಿಶೋಧನೆಯ ಉದ್ದೇಶಗಳು

ಈ ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳುವುದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶಗಳಾಗಿದ್ದವು:

- ➢ ಪ್ರಸ್ತುತ ಇರುವಂತಹ ವ್ಯವಸ್ಥೆಗಳು ಹಾಗೂ ಕಾರ್ಯವಿಧಾನಗಳು ವೃತ್ತಿಗಳು, ಮನೋರಂಜನೆ ಹಾಗೂ ವಿಲಾಸಗಳ ಮೇಲಿನ ತೆರಿಗೆಗಳ ಪಾವತಿಗೆ ಬಾಧ್ಯರಿರುವ ಎಲ್ಲಾ ವ್ಯಕ್ತಿಗಳ ನೋಂದಣಿ/ದಾಖಲಾತಿಯನ್ನು ಖಚಿತಪಡಿಸಿಕೊಳ್ಳಲು ಸಮರ್ಪಕವಾಗಿರುವವೆ ಹಾಗೂ ನೋಂದಾಯಿತ ವ್ಯಕ್ತಿಗಳು ಸಲ್ಲಿಸಿರುವಂತಹ ಸಲ್ಲಿಕೆಗಳನ್ನು ಹಾಗೂ ತೆರಿಗೆ ಪಾವತಿಯನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲಾಗಿದ್ದಿತೆ?

- ➢ 2006–07 ಹಾಗೂ 2007–08 ಸಾಲುಗಳಿಗೆ ಮುದ್ರಿತ ವರದಿಗಳಲ್ಲಿ ಈ ವಿಷಯದ ಮೇಲೆ ಮಾಡಲಾಗಿದ್ದಂತಹ ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳಲ್ಲಿ ಮಾಡಲಾಗಿದ್ದಂತಹ ಶಿಫಾರಸ್ಸುಗಳಿಗೆ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೆ?

## 2.4.4 ಲೆಕ್ಕಪರಿಶೋಧನೆಯ ವ್ಯಾಪ್ತಿ

ವೃತ್ತಿಗಳ ಮೇಲಿನ ತೆರಿಗೆ (ಪಿಟಿ), ಮನೋರಂಜನೆಗಳ ಮೇಲಿನ ತೆರಿಗೆ (ಇಟಿ) ಹಾಗೂ ವಿಲಾಸಗಳ ಮೇಲಿನ ತೆರಿಗೆ (ಎಲ್‌ಟಿ), ಇವುಗಳ ಅಡಿಯಲ್ಲಿ 1 ಏಪ್ರಿಲ್ 2011 ಹಾಗೂ 31 ಮಾರ್ಚ್ 2016ರ ನಡುವಿನ ಅವಧಿಯಲ್ಲಿ ನಡೆಸಲಾದಂತಹ ನೋಂದಣಿ/ದಾಖಲಾತಿ, ಸಲ್ಲಿಕೆಗಳನ್ನು ಸಲ್ಲಿಸಿರುವುದು, ತೆರಿಗೆಗಳ ಪಾವತಿ, ಪೂರ್ಣಗೊಳಿಸಲಾದಂತಹ ಪುನರ್–ಕರನಿರ್ಧಾರಣೆ ಹಾಗೂ ಜಾರಿ ಚಟುವಟಿಕೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡಲಾಯಿತು. ಈ ನಿಟ್ಟಿನಲ್ಲಿ ತೆರಿಗೆ ನಿರ್ವಹಣೆಯ ಗಣಕೀಕರಣದ ಪರಿಣಾಮಕಾರಿತ್ವವನ್ನೂ ಸಹ ಸಮೀಕ್ಷಿಸಲಾಯಿತು. ಬೆಂಗಳೂರಿನಲ್ಲಿ, ಅಪ್ರಧಾನ ಅಧಿನಿಯಮಗಳಿಗಾಗಿ ಒಂದು ಪ್ರತ್ಯೇಕ ವಿಭಾಗವನ್ನು ಸ್ಥಾಪಿಸಲಾಗಿದೆ ಹಾಗೂ ಈ ವಿಭಾಗಗಳ ಎರಡು ಕಚೇರಿಗಳನ್ನು ಪ್ರಾಯೋಗಿಕ ಪೂರ್ವಭಾವಿ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಅಲ್ಲದೆಯೇ, ರಾಜ್ಯದಲ್ಲಿನ ಭೌಗೋಳಿಕವಾಗಿ ಎಲ್ಲಾ ಪ್ರದೇಶಗಳಿಗೂ ಸಮರ್ಪಕ ಪ್ರಾತಿನಿಧಿತ್ವವನ್ನು ನೀಡುವ ರೀತಿಯಲ್ಲಿ 11 ವಿಭಾಗಗಳ[2] ಪೈಕಿ ನಾಲ್ಕನ್ನು[3] ಆಯ್ಕೆ ಮಾಡಿಕೊಳ್ಳಲಾಯಿತು. ಯಾದೃಚ್ಛಿಕ ಮಾದರಿಯಲ್ಲಿ ಆಯ್ಕೆ ಮಾಡಲಾಗಿದ್ದಂತಹ 20[4] ಕ್ಷೇತ್ರ ಕಚೇರಿಗಳಲ್ಲಿ ನಿರ್ವಹಿಸಲಾಗಿದ್ದಂತಹ ದಾಖಲೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡಲಾಯಿತು. ಅಲ್ಲದೆಯೇ, ವಾಣಿಜ್ಯ ತೆರಿಗೆ ಇಲಾಖೆಯು ಒದಗಿಸಿದ್ದಂತಹ ದತ್ತಸಂಚಯದ ಮುನ್ನೆಲೆ ಹಾಗೂ ಹಿನ್ನೆಲೆ ಪ್ರವೇಶಗಳನ್ನು ಬಳಸಿಕೊಂಡು ಸಂಪೂರ್ಣ ರಾಜ್ಯಕ್ಕೆ ಸಂಬಂಧಿಸಿದಂತೆ PELSoft ಮತ್ತು ವಿದ್ಯುನ್ಮಾನ ಸಲ್ಲಿಕೆ ವ್ಯವಸ್ಥೆ (*eFS*)[5], ಇವೆರಡರ ದತ್ತಸಂಚಯವನ್ನು ವಿಶ್ಲೇಷಿಸಲಾಯಿತು.

## 2.4.5 ಲೆಕ್ಕಪರಿಶೋಧನೆಯ ವಿಧಾನ

ಕಂಪನಿಗಳು, ವಾಣಿಜ್ಯವ್ಯವಹಾರ ಸಂಸ್ಥೆಗಳು ಯಾವುದೇ ವ್ಯಾಪಾರ/ವೃತ್ತಿಯಲ್ಲಿ ತೊಡಗಿಸಿಕೊಂಡಿರುವಂತಹ ಇತರೆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಇತರೆ ಇಲಾಖೆಗಳು/ಸಂಸ್ಥೆಗಳಿಂದ ಸಂಗ್ರಹಿಸಲಾದಂತಹ ಮಾಹಿತಿಯನ್ನು ಆ ವ್ಯಕ್ತಿಗಳು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಣಿ/ದಾಖಲಾತಿಯನ್ನು ಮಾಡಿಸಿಕೊಂಡಿರುವರೆ ಹಾಗೂ ತೆರಿಗೆ ಬಾಧ್ಯತೆಗಳನ್ನು ಪಾವತಿಸುತ್ತಿರುವರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನಿರ್ವಹಿಸಿರುವಂತಹ ದಾಖಲೆಗಳ ಜೊತೆ ಅಡ್ಡಪರಿಶೀಲನೆ ಮಾಡಲಾಯಿತು. ಅಲ್ಲದೆಯೇ, ಲೆಕ್ಕಪರಿಶೋಧನೆಗಾಗಿ ಆಯ್ಕೆ ಮಾಡಲಾದಂತಹ ಕಚೇರಿಗಳಲ್ಲಿ ಇಲಾಖೆಯು ಅಂತಿಮ ರೂಪಕ್ಕೆ ತಂದಿದ್ದಂತಹ ಪುನರ್–ಕರನಿರ್ಧಾರಣೆಗಳ ಪರೀಕ್ಷಾ–ಪರಿಶೀಲನೆಯನ್ನು ಮಾಡಲಾಯಿತು. ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ರ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವಂತಹ ವರ್ತಕರುಗಳು ತೆರಿಗೆ ಪಾವತಿಯಲ್ಲಿ ತಪ್ಪಿತಸ್ಥರಾಗಿರುವುದು ಅಥವಾ ಕಡಿಮೆ ಪ್ರಮಾಣದಲ್ಲಿ ಪಾವತಿಸಿರುವಂತಹ ಪ್ರಕರಣಗಳು, ಯಾವುದಾದರೂ ಇದ್ದಲ್ಲಿ, ಅವುಗಳನ್ನು ಪತ್ತೆಹಚ್ಚಿ ಹಾಗೂ ಸಂಬಂಧಿತ ಅಧಿನಿಯಮಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವಂತಹ ನಿಯಮಗಳ ಅಡಿಯಲ್ಲಿ ಅನುವು ಮಾಡಲಾಗಿರುವಂತಹ ಸೂಕ್ತ ಕ್ರಮಗಳ ಜೊತೆಗೆ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಇ–ಸಲ್ಲಿಕೆ ವ್ಯವಸ್ಥೆಯಲ್ಲಿನ ದತ್ತಸಂಚಯವನ್ನು PELSoftನ ದತ್ತಸಂಚಯದೊಂದಿಗೆ ಅಡ್ಡಪರಿಶೀಲನೆ ಮಾಡಲಾಯಿತು. ವೃತ್ತಿಗಳ ಮೇಲಿನ ತೆರಿಗೆ (ಪಿಟಿ), ಮನೋರಂಜನೆಗಳ ಮೇಲಿನ ತೆರಿಗೆ (ಇಟಿ) ಹಾಗೂ ವಿಲಾಸಗಳ ಮೇಲಿನ ತೆರಿಗೆ (ಎಲ್‌ಟಿ), ಅಧಿನಿಯಮಗಳಿಗೆ ಸಂಬಂಧಿಸಿದಂತೆ ಇಲಾಖೆಯ ಜಾರಿ/ಜಾಗೃತಿ ಕಾರ್ಯಚಟುವಟಿಕೆಗಳನ್ನೂ ಸಹ ಆಯ್ಕೆ ಮಾಡಲಾದ ವಿಭಾಗಗಳಲ್ಲಿ ಸಮೀಕ್ಷಿಸಲಾಯಿತು.

## 2.4.6 ಕೃತಜ್ಞತೆಗಳು

ಪ್ರವೇಶ ಸಭೆಯು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಹಾಗೂ ವಾಣಿಜ್ಯ ತೆರಿಗೆಗಳ ಆಯುಕ್ತರವರ ಜೊತೆ ನಡೆಯಿತು (ಮಾರ್ಚ್ 2016). ಪ್ರವೇಶ ಸಭೆಯಲ್ಲಿ, ವಿಲಾಸಗಳ ಮೇಲಿನ ತೆರಿಗೆ ಹಾಗೂ ಮನೋರಂಜನೆಗಳ ಮೇಲಿನ ತೆರಿಗೆಗಳು ಮುಂಬರುವಂತಹ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ (ಜಿಎಸ್‌ಟಿ) ಅಧಿನಿಯಮದಲ್ಲಿ ಅಂತರ್ಗತಗೊಳ್ಳುತ್ತವೆ, ಆದ ಕಾರಣ

---

[2] ಸಾಂಸ್ಥಿಕ ರಚನೆಯ ರೇಖಾಚಿತ್ರದಲ್ಲಿ ತೋರಿಸಲಾಗಿರುವ 13 ಮೌವತೆ ವಿಭಾಗಗಳ ಪೈಕಿ ಎರಡು ವಿಭಾಗಗಳು ಅಪ್ರಧಾನ ತೆರಿಗೆಗಳನ್ನು ನಿರ್ವಹಿಸುವುದಿಲ್ಲ. ಆದ್ದರಿಂದ ಉಳಿದ 11 ವಿಭಾಗಗಳ ಪೈಕಿ ನಾಲ್ಕು ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು.

[3] ದಾವಾಣಗೆರೆ, ಧಾರವಾಡ, ಕಲಬುರಗಿ ಹಾಗೂ ಮೈಸೂರು ವಿಭಾಗಗಳು.

[4] ಸ್ಥಳೀಯ ಮೌವತೆ ಕಚೇರಿ-205, ಮೌವತೆ ಉಪಕಚೇರಿ-193, ಸ್ಥಳೀಯ ಮೌವತೆ ಕಚೇರಿ-300, ಮೌವತೆ ಉಪಕಚೇರಿ-191, ಸ್ಥಳೀಯ ಮೌವತೆ ಕಚೇರಿ -540, ಸ್ಥಳೀಯ ಮೌವತೆ ಕಚೇರಿ -525, ಮೌವತೆ ಉಪಕಚೇರಿ -521, ಸ್ಥಳೀಯ ಮೌವತೆ ಕಚೇರಿ-375, ಸ್ಥಳೀಯ ಮೌವತೆ ಕಚೇರಿ-373, ಸ್ಥಳೀಯ ಮೌವತೆ ಕಚೇರಿ-340, ವೃತೆಕ-48, ಸ್ಥಳೀಯ ಮೌವತೆ ಕಚೇರಿ -495, ಸ್ಥಳೀಯ ಮೌವತೆ ಕಚೇರಿ-481, ಸ್ಥಳೀಯ ಮೌವತೆ ಕಚೇರಿ -515, ಸ್ಥಳೀಯ ಮೌವತೆ ಕಚೇರಿ -465, ವೃತಿ ತೆರಿಗೆ ಕಚೇರಿ (ವೃತೆಕ) -4, ವೃತೆಕ-1, 7 & 8 ಹಾಗೂ ಮನೋರಂಜನೆ ತೆರಿಗೆ ಕಚೇರಿ-4.

[5] eFS- ವಾತೆಇ ಅಡಿಯಲ್ಲಿ ಮೌವತೆ ನಿರ್ವಹಣೆಗಾಗಿ ಸ್ಥಾಪಿಸಲಾಗಿರುವಂತಹ ತಂತ್ರಾಂಶ ಅನ್ವಯ.

ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನು ಕಾರ್ಯಗತಗೊಳಿಸಿದ ನಂತರವೂ ಪ್ರಸ್ತುತವಿರಬಹುದಾದಂತಹ ವಿಲಾಸಗಳ ಮೇಲಿನ ತೆರಿಗೆ ಹಾಗೂ ಮನೋರಂಜನೆಗಳ ಮೇಲಿನ ತೆರಿಗೆಗಳಿಗೆ ಸಂಬಂಧಿಸಿದಂತಹ ಅಂಶಗಳ ಮೇಲಷ್ಟೇ ಗಮನಹರಿಸುವಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸಲಹೆ ನೀಡಿದರು. ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಹಾಗೂ ವಾಣಿಜ್ಯ ತೆರಿಗೆಗಳ ಆಯುಕ್ತರವರ ಜೊತೆ ಮಧ್ಯಂತರ ಸಭೆಯನ್ನು ಮೇ 2016ರಲ್ಲಿ, ಆ ಅವಧಿಯವರೆಗೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದಂತಹ ಅಂಶಗಳ ಬಗ್ಗೆ ಚರ್ಚಿಸುವ ಸಲುವಾಗಿ ನಡೆಸಲಾಯಿತು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು, ವಾಣಿಜ್ಯ ತೆರಿಗೆಗಳ ಆಯುಕ್ತರವರು, ಇವರುಗಳು ನೀಡಿದ ಮಾಹಿತಿಗಳು/ಸಲಹೆಗಳಿಗಾಗಿ ಹಾಗೂ ದಾಖಲೆಗಳನ್ನು ಒದಗಿಸಿದ ಹಾಗೂ ದತ್ತಸಂಚಯವನ್ನು ಪರಿಶೀಲಿಸಲು ಅನುವು ಮಾಡಿಕೊಟ್ಟಂತಹ ವಾಣಿಜ್ಯ ತೆರಿಗೆಗಳ ಇಲಾಖೆಗೆ ಲೆಕ್ಕಪರಿಶೋಧನೆಯು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತಿದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳು ಹಾಗೂ ಶಿಫಾರಸುಗಳನ್ನು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಹಾಗೂ ವಾಣಿಜ್ಯ ತೆರಿಗೆಗಳ ಆಯುಕ್ತರವರ ಜೊತೆ ಅಕ್ಟೋಬರ್ 2016ರಲ್ಲಿ ನಡೆದಂತಹ ನಿರ್ಗಮನ ಸಭೆಯಲ್ಲಿ ಚರ್ಚಿಸಲಾಯಿತು.

## 2.4.7 ಅಪ್ರಧಾನ ತೆರಿಗೆಗಳಿಂದ ರಾಜಸ್ವ/ವರಮಾನದ ಪ್ರವೃತ್ತಿ

**2.4.7.1** ವೃತ್ತಿಗಳ ಮೇಲಿನ ತೆರಿಗೆ (ಪಿಟಿ), ಮನೋರಂಜನೆಗಳ ಮೇಲಿನ ತೆರಿಗೆ (ಇಟಿ) ಹಾಗೂ ವಿಲಾಸಗಳ ಮೇಲಿನ ತೆರಿಗೆಗಳ (ಎಲ್‌ಟಿ), ಅಡಿಯಲ್ಲಿ 2011–12ರಿಂದ 2015–16ರ ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ಸರ್ಕಾರವು ವಸೂಲಾತಿ ಮಾಡಿದ ರಾಜಸ್ವ/ವರಮಾನದ ವಿವರಗಳನ್ನು **ಕೋಷ್ಟಕ 2.2**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ :2.2**

**ಅಪ್ರಧಾನ ತೆರಿಗೆಗಳಿಂದ ರಾಜಸ್ವ/ವರಮಾನದ ಪ್ರವೃತ್ತಿ**

**(₹ ಕೋಟಿಯಲ್ಲಿ)**

| ವರ್ಷ | ವೃತ್ತಿಗಳ ಮೇಲಿನ ತೆರಿಗೆ | ಮನೋರಂಜನೆಗಳ ಮೇಲಿನ ತೆರಿಗೆ | ವಿಲಾಸಗಳ ಮೇಲಿನ ತೆರಿಗೆ | ಅಪ್ರಧಾನ ತೆರಿಗೆಗಳಿಂದ ಒಟ್ಟಾರೆ ಮೊತ್ತ |
|---|---|---|---|---|
| 2011-12 | 600.20 | 480.15 | 139.99 | 1,220.34 |
| 2012-13 | 692.89 | 136.03 | 264.77 | 1,093.69 |
| 2013-14 | 792.98 | 146.22 | 299.06 | 1,238.26 |
| 2014-15 | 868.63 | 197.61 | 345.68 | 1,411.92 |
| 2015-16* | 840.51 | 237.01 | 386.88 | 1,464.40 |

***** *ರಾಜಸ್ವ/ವರಮಾನದ ಅಂಕಿಸಂಖ್ಯೆಗಳನ್ನು 2015–16 ಸಾಲಿನ ಹಣಕಾಸು ತ:ಖ್ತೆಗಳಿಂದ ತೆಗೆದುಕೊಳ್ಳಲಾಗಿದೆ.*

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ವಸೂಲಾತಿ ಮಾಡಲಾದಂತಹ ವಾರ್ಷಿಕ ರಾಜಸ್ವ/ವರಮಾನವು ಕಳೆದ ಐದು ವರ್ಷಗಳಲ್ಲಿ (2015–16ರಲ್ಲಿ ₹ 1,464.40 ಕೋಟಿಯಿಂದ 2011–12ರಲ್ಲಿನ ₹ 1,220.34 ಯನ್ನು ಕಳೆದಲ್ಲಿ) ₹ 244.06 ಕೋಟಿ ಮೊತ್ತದಷ್ಟು ಅಧಿಕಗೊಂಡಿದ್ದಿತು. ವರ್ಷ ಒಂದರ ಸರಾಸರಿ ಹೆಚ್ಚಳವು ₹ 48.81 ಕೋಟಿ ಆಗಿದ್ದಿತು.

### 2.4.7.2 ವಸೂಲಾತಿಯ ವೆಚ್ಚ

ವೃತ್ತಿಗಳ ಮೇಲಿನ ತೆರಿಗೆ ಹಾಗೂ ಮನೋರಂಜನೆಗಳ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ವಸೂಲಾತಿಗಳಿಗೆ ಸಂಬಂಧಿತ ವೆಚ್ಚಗಳನ್ನು ಹಣಕಾಸು ತ:ಖ್ತೆಗಳಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿದೆ. ವಿಲಾಸಗಳ ಮೇಲಿನ ತೆರಿಗೆಗೆ ವಸೂಲಾತಿಗಳಿಗೆ ಸಂಬಂಧಿತ ವೆಚ್ಚಗಳನ್ನು ಪ್ರತ್ಯೇಕವಾಗಿ ತೋರಿಸಲಾಗಿರುವುದಿಲ್ಲ, ಆದರೆ 'ಲೆಕ್ಕ ಶೀರ್ಷಿಕೆ 2040 – ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು' ಇದರ ಅಡಿಯಲ್ಲಿ ಸೇರಿಸಲಾಗಿದೆ. ಕಳೆದ ಐದು ವರ್ಷಗಳ ಅವಧಿಗೆ ವೃತ್ತಿಗಳ ಮೇಲಿನ ತೆರಿಗೆ ಹಾಗೂ ಮನೋರಂಜನೆಗಳ ಮೇಲಿನ ತೆರಿಗೆಗಳ ವಸೂಲಾತಿಗಳಿಗೆ ಸಂಬಂಧಿತ ವೆಚ್ಚಗಳ ವಿವರಗಳನ್ನು **ಕೋಷ್ಟಕ 2.3**ರಲ್ಲಿ ವಿವರಿಸಲಾಗಿದೆ:

**ಕೋಷ್ಟಕ: 2.3**

**ವಸೂಲಾತಿಗಳಿಗೆ ಸಂಬಂಧಿತ ವೆಚ್ಚ**

**(₹ ಕೋಟಿಯಲ್ಲಿ)**

| ವರ್ಷ | ವೃತ್ತಿಗಳ ಮೇಲಿನ ತೆರಿಗೆ | | | ಮನೋರಂಜನೆಗಳ ಮೇಲಿನ ತೆರಿಗೆ | | |
|---|---|---|---|---|---|---|
| | ರಾಜಸ್ವ / ವರಮಾನ ವಸೂಲಾತಿ | ವಸೂಲಾತಿ ವೆಚ್ಚಗಳು | ವಸೂಲಾತಿ ವೆಚ್ಚಗಳು (ಶೇಕಡಾವಾರು) | ರಾಜಸ್ವ / ವರಮಾನ ವಸೂಲಾತಿ | ವಸೂಲಾತಿ ವೆಚ್ಚಗಳು | ವಸೂಲಾತಿ ವೆಚ್ಚಗಳು (ಶೇಕಡಾವಾರು) |
| 2011-12 | 600.20 | 4.13 | 0.69 | 480.15 | 0.86 | 0.18 |
| 2012-13 | 692.89 | 4.71 | 0.68 | 136.03 | 0.96 | 0.71 |
| 2013-14 | 792.98 | 4.84 | 0.61 | 146.22 | 1.01 | 0.69 |
| 2014-15 | 868.63 | 5.18 | 0.60 | 197.61 | 1.08 | 0.55 |
| 2015-16* | 840.51 | 5.37 | 0.64 | 237.01 | 1.13 | 0.48 |

***** *ರಾಜಸ್ವ/ವರಮಾನದ ಅಂಕಿಸಂಖ್ಯೆಗಳನ್ನು 2015–16 ಸಾಲಿನ ಹಣಕಾಸು ತ:ಖ್ತೆಗಳಿಂದ ತೆಗೆದುಕೊಳ್ಳಲಾಗಿದೆ.*

ಕಳೆದ ಐದು ವರ್ಷಗಳ ಅವಧಿಯಲ್ಲಿ, ವೃತ್ತಿಗಳ ಮೇಲಿನ ತೆರಿಗೆ ವಸೂಲಾತಿಯ ವೆಚ್ಚವು ಪ್ರತೀ ಒಂದು ನೂರು ರೂಪಾಯಿಗಳಿಗೆ ಅರವತ್ತು ಪೈಸೆಯಿಂದ ಅರವತ್ತ ಒಂಬತ್ತು ಪೈಸೆವರೆಗೆ ಆಗಿದ್ದಿತು ಹಾಗೂ ಮನೋರಂಜನೆಗಳ ಮೇಲಿನ ತೆರಿಗೆ ವಸೂಲಾತಿಯ ವೆಚ್ಚವು ಪ್ರತೀ ಒಂದು ನೂರು ರೂಪಾಯಿಗಳಿಗೆ ಹದಿನೆಂಟು ಪೈಸೆಯಿಂದ ಎಪ್ಪತ್ತ ಒಂದು ಪೈಸೆವರೆಗೆ ಆಗಿದ್ದಿತು ಎಂಬುದನ್ನು ಮೇಲಿನ ಕೋಷ್ಟಕದಿಂದ ಕಾಣಬಹುದು.

## ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳು

### 2.4.8 ಸಂಭಾವ್ಯ ತೆರಿಗೆ ಪಾವತಿದಾರರುಗಳ ದಾಖಲಾತಿಯನ್ನು ಪ್ರಸ್ತುತ ತೆರಿಗೆ ಜಾಲದಿಂದ ಹೊರಗಿಟ್ಟಿರುವುದು

ರಾಜಸ್ವ/ವರಮಾನ ಸಂಗ್ರಹಣೆಯ ಗುರಿಯನ್ನು ತಲುಪುವ ಹಾಗೂ ಪ್ರಸ್ತುತ ಇರುವಂತಹ ತೆರಿಗೆ ಪಾವತಿದಾರರ ಮೇಲೆ ಹೊರೆಯನ್ನು ಇಳಿಮುಖಗೊಳಿಸುವ ಸಲುವಾಗಿ, ಎಲ್ಲಾ ಸಂಭಾವ್ಯ ತೆರಿಗೆ ಪಾವತಿದಾರರುಗಳನ್ನೂ ಗುರುತಿಸುವುದು ಪ್ರತಿಯೋರ್ವ ತೆರಿಗೆ ನಿರ್ವಾಹಕರಿಗೂ ಪ್ರಮುಖ ಕಾರ್ಯವಾಗಿರುತ್ತದೆ. ರಾಜಸ್ವ/ವರಮಾನದ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳುವುದು ಹಾಗೂ ಅಂತರವನ್ನು ಕಡಿಮೆಗೊಳಿಸುವುದಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳುವುದು ರಾಜಸ್ವ/ವರಮಾನವನ್ನು ವೃದ್ಧಿಪಡಿಸುವಲ್ಲಿ, ತೆರಿಗೆ ಸುಧಾರಣೆಗಳನ್ನು ರೂಪಿಸುವಲ್ಲಿ, ತೆರಿಗೆ ಕ್ರಮವಿಧಾನಗಳನ್ನು ಸರಳಗೊಳಿಸುವಲ್ಲಿ, ಅನುಸರಣಾ ಕ್ರಮಗಳ ವೆಚ್ಚಗಳನ್ನು ಇಳಿಮುಖಗೊಳಿಸುವಲ್ಲಿ ಹಾಗೂ ತೆರಿಗೆ ನಿರ್ವಹಣೆಯ ದಕ್ಷತೆಯನ್ನು ಇಳಿಮುಖಗೊಳಿಸುವಲ್ಲಿ ಅತ್ಯಮೂಲ್ಯವಾಗಿರುತ್ತದೆ.

ಸಂಘಟಿತ ವಲಯ ಹಾಗೂ ಅಸಂಘಟಿತ ವಲಯಗಳ ಅಡಿಯಲ್ಲಿ ಪ್ರತ್ಯೇಕವಾಗಿ ಯಾದೃಚ್ಛಿಕ ಪದ್ಧತಿಯಲ್ಲಿ ಕೆಲವು ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಕರ್ನಾಟಕದಲ್ಲಿ ವೃತ್ತಿಗಳ ಮೇಲಿನ ತೆರಿಗೆಯ ರಾಜಸ್ವ/ವರಮಾನ ಸಂಭಾವ್ಯತೆಯನ್ನು ವಿಶ್ಲೇಷಣೆ ಮಾಡುವ ಸಲುವಾಗಿ ಲೆಕ್ಕಪರಿಶೋಧನೆಯು ಒಂದು ಪ್ರಯತ್ನವನ್ನು ಮಾಡಿತು. ಅಂತಹ ಹುದ್ದೆಗಳಲ್ಲಿ ತೊಡಗಿಸಿಕೊಂಡಿರುವಂತಹ ವ್ಯಕ್ತಿಗಳ ವಿವರಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ/ಮೂಲಗಳಿಂದ ಸಂಗ್ರಹಿಸಲಾಯಿತು ಹಾಗೂ ಅವರುಗಳ ದಾಖಲಾತಿಯನ್ನು ವೃತ್ತಿಗಳ ಮೇಲಿನ ತೆರಿಗೆ ನಿರ್ವಹಣೆಯ ದಾಖಲೆಗಳ ಪ್ರತಿಯಾಗಿ ಅಡ್ಡಪರಿಶೀಲನೆ ಮಾಡಲಾಯಿತು. ಅಂತಹ ವಿಶ್ಲೇಷಣೆಗಳ ಫಲಿತಾಂಶಗಳು ಈ ಕೆಳಗಿನಂತಿವೆ:

### 2.4.9 ಸಂಘಟಿತ ವಲಯ

ಸಂಘಟಿತ ಮೂಲಗಳ ಮುಖಾಂತರ ಸಂಘಟಿತ ವಲಯಗಳಲ್ಲಿನ ಸಂಭಾವ್ಯ ತೆರಿಗೆ ಪಾವತಿದಾರರುಗಳನ್ನು ಗುರುತಿಸುವುದು ಹಾಗೂ ಅವರುಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು ಕಾರ್ಯತಂತ್ರೀಯವಾಗಿ ತೆರಿಗೆ ಮೂಲಗಳ ವಿಸ್ತರಣೆಯಲ್ಲಿ ಕಡಿಮೆ ವೆಚ್ಚದ, ಕಡಿಮೆ ಸಂಭಾವ್ಯ ತೊಂದರೆಗಳನ್ನು ಹೊಂದಿರುವ, ಪರಿಣಾಮಕಾರಿತ್ವದಿಂದ ಕೂಡಿದ ಹಾಗೂ ಅತ್ಯಧಿಕ ಪ್ರತಿಫಲವನ್ನು ಕೊಡುವಂತಹ ಮಾರ್ಗವಾಗಿರುತ್ತದೆ.

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮದ (KTPTCE Act) ಪರಿಚ್ಛೇದ 15ರ ಪ್ರಕಾರ ರಾಜ್ಯ ಸರ್ಕಾರವು, ಯಾವುದೇ ಸರ್ಕಾರಿ ಇಲಾಖೆಯನ್ನು, ಅಥವಾ ಒಂದು ಮಹಾನಗರಪಾಲಿಕೆಯನ್ನು, ನಗರಪಾಲಿಕೆಯನ್ನು ಅಥವಾ ತಾಲ್ಲೂಕು ಮಂಡಳಿಯನ್ನು, ತನ್ನ ವಿವೇಚನೆಗೆ ಬಿಟ್ಟಂತೆ, ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಬಹುದಾದ ರೀತಿಯ ವ್ಯಕ್ತಿಗಳಿಂದ ಅಥವಾ ವ್ಯಕ್ತಿಗಳ ವರ್ಗದಿಂದ ತೆರಿಗೆ ವಸೂಲಾತಿಗಾಗಿ ಜವಾಬ್ದಾರಿಯುತರಾಗಿರುವ ತನ್ನ ಪ್ರತಿನಿಧಿಯನ್ನಾಗಿ ('ವಸೂಲಾತಿ/ಸಂಗ್ರಹಣಾ ಪ್ರತಿನಿಧಿಗಳು' ಎಂಬುದಾಗಿ ಕರೆಯಲ್ಪಡುವ) ನೇಮಿಸಲು ಅನುವು ಮಾಡಿದೆ.

ಸಾರಿಗೆ ವಾಹನಗಳ ಮಾಲೀಕರುಗಳು, ಕಂಪನಿಗಳ ಅಧಿನಿಯಮದ ಅಡಿಯಲ್ಲಿ ನೋಂದಣಿಯಾಗಿರುವಂತಹ ಕಂಪನಿಗಳು, ಪಾಲುದಾರಿಕೆ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ಪಾಲುದಾರರು ಹಾಗೂ ಸೇವಾ ತೆರಿಗೆ ಕರದಾತರುಗಳಾಗಿರುವ ವೈಯಕ್ತಿಕ ವ್ಯಕ್ತಿಗಳು, ಇವೇ ಮುಂತಾದ ವೃತ್ತಿಗಳ ಅಡಿಯಲ್ಲಿ ಮಾಡಲಾದಂತಹ ಸಂಭಾವ್ಯ ತೆರಿಗೆಯ ಲೆಕ್ಕಪರಿಶೋಧನಾ ವಿಶ್ಲೇಷಣೆಯು ವಾಣಿಜ್ಯ ತೆರಿಗೆ ಇಲಾಖೆಯು ತೆರಿಗೆ ವಸೂಲಾತಿ/ಸಂಗ್ರಹಣೆಯನ್ನು ಉತ್ತಮಗೊಳಿಸುವುದಕ್ಕಾಗಿ ಅಂತಹ ಮಾಹಿತಿ ಮೂಲಗಳನ್ನು ಸಮರ್ಪಕವಾಗಿ ಸಂಗ್ರಹಿಸಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ದೃಷ್ಟಾಂತಗಳನ್ನು ಈ ಕೆಳಗೆ ವಿವರಿಸಲಾಗಿದೆ:

#### 2.4.9.1 ಸಾರಿಗೆ ವಾಹನಗಳ ಮಾಲೀಕರುಗಳ ಮೇಲೆ ವೃತ್ತಿಗಳ ಮೇಲಿನ ತೆರಿಗೆ

ಸಾರಿಗೆ ವಾಹನಗಳ (ಆಟೋರಿಕ್ಷಾಗಳನ್ನು ಹೊರತುಪಡಿಸಿದಂತೆ) ಮಾಲೀಕರುಗಳ ಮೇಲೆ ಅವರುಗಳು ಒಂದು ವಾಹನವನ್ನು ಹೊಂದಿದ್ದಲ್ಲಿ ವರ್ಷ ಒಂದಕ್ಕೆ ₹ 1,000 ದರದಲ್ಲಿ ಹಾಗೂ ಅವರುಗಳು ಒಂದಕ್ಕಿಂತ ಹೆಚ್ಚಿನ ಸಾರಿಗೆ ವಾಹನಗಳನ್ನು ಹೊಂದಿದ್ದಲ್ಲಿ ವರ್ಷ ಒಂದಕ್ಕೆ ₹ 2,500 ದರದಲ್ಲಿ ತೆರಿಗೆ ವಿಧಿಸುವುದನ್ನು ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮ, 1976ರ ಷೆಡ್ಯೂಲಿನ ಕ್ರಮ ಸಂಖ್ಯೆ 20 ನಿರ್ದಿಷ್ಟಪಡಿಸಿದೆ.

ಕೇವಲ 4,294 ವ್ಯಕ್ತಿಗಳು ಮಾತ್ರ ಸಾರಿಗೆ ವಾಹನಗಳ ಮಾಲೀಕರುಗಳು ಎಂಬುದಗಿ ದಾಖಲಿಸಿಕೊಂಡಿದ್ದರು ಮತ್ತು ಅವರುಗಳ ಪೈಕಿ ಕೇವಲ 320 ವ್ಯಕ್ತಿಗಳು ಒಂದಕ್ಕಿಂತ ಹೆಚ್ಚಿನ ಸಾರಿಗೆ ವಾಹನಗಳನ್ನು ಹೊಂದಿದ್ದರು ಹಾಗೂ ಕಳೆದ ಐದು ಸಾಲುಗಳಲ್ಲಿ ಈ ವಲಯದಿಂದ ವೃತ್ತಿಗಳ ಮೇಲಿನ ತೆರಿಗೆ ಸಂಗ್ರಹಣೆಯು ಕೇವಲ ₹ 6.55 ಲಕ್ಷ ಆಗಿದ್ದಿತು ಎಂಬುದನ್ನು ವಾಣಿಜ್ಯ ತೆರಿಗೆ ಇಲಾಖೆಯ ದತ್ತಸಂಚಯದಿಂದ ಗಮನಿಸಲಾಯಿತು.

ವೃತ್ತಿ ತೆರಿಗೆಗಾಗಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ದಾಖಲಾತಿ ಮಾಡಿಸಿಕೊಳ್ಳದಿದ್ದಂತಹ ಮತ್ತು ಏಕೈಕ ಸಾರಿಗೆ ವಾಹನದ ಮಾಲಿಕತ್ವವನ್ನು ಹೊಂದಿದ್ದ 2,42,186 ವ್ಯಕ್ತಿಗಳು[6] ಹಾಗೂ ಎರಡರಿಂದ 160 ಸಾರಿಗೆ ವಾಹನದ ಮಾಲಿಕತ್ವವನ್ನು ಹೊಂದಿದ್ದ 32,590 ವ್ಯಕ್ತಿಗಳು ರಾಜ್ಯದಲ್ಲಿದ್ದರು ಎಂಬುದನ್ನು ಸಾರಿಗೆ ಇಲಾಖೆಯಿಂದ ಈ ವೃತ್ತಿಗೆ ಸಂಬಂಧಿಸಿದಂತೆ ಪಡೆದುಕೊಳ್ಳಲಾದಂತಹ ಮಾಹಿತಿಯನ್ನು ಲೆಕ್ಕಪರಿಶೋಧನೆಯು ಮಾಡಿದ ವಿಶ್ಲೇಷಣೆಯು ತೋರಿಸಿಕೊಟ್ಟಿತು. ಈ ವ್ಯಕ್ತಿಗಳಿಂದ ಏಪ್ರಿಲ್ 2011ರಿಂದ ಮಾರ್ಚ್ 2016ರ ನಡುವೆ ಬಾಕಿಯಿದ್ದಂತಹ ತೆರಿಗೆಯು ₹ 137.11 ಕೋಟಿ ಆಗಿದ್ದಿತು.

ಅಂತಹ ಮಾಹಿತಿಯ ಮೂಲವು ರಾಜ್ಯ ಸರ್ಕಾರದ ಮತ್ತೊಂದು ಇಲಾಖೆಯಾಗಿದ್ದಿತಾದ್ದರಿಂದ, ಸುಲಭವಾಗಿ ಲಭ್ಯವಿದ್ದಂತಹ ಸಾರಿಗೆ ವಾಹನಗಳ ಮಾಲೀಕರುಗಳ ಮಾಹಿತಿಯನ್ನು ಪಡೆದುಕೊಳ್ಳಲು ವಾಣಿಜ್ಯ ತೆರಿಗೆ ಇಲಾಖೆಯು ಯಾವುದೇ ಪ್ರಯತ್ನಗಳನ್ನೂ ಮಾಡಲಿಲ್ಲ.

ಅಲ್ಲದೆಯೇ, ಇತರೆ ರಾಜ್ಯಗಳಲ್ಲಿ ನೋಂದಣಿಯಾಗಿರುವ, ಆದರೆ ಒಂದು ವರ್ಷದಲ್ಲಿ 120 ದಿನಗಳನ್ನೂ ಮೀರಿದಂತೆ ಪರವಾನಿಗೆಗಳನ್ನು ಪಡೆದುಕೊಳ್ಳುವ ಆಧಾರದ ಮೇರೆಗೆ ಕರ್ನಾಟಕ ರಾಜ್ಯವನ್ನು ಪ್ರವೇಶಿಸುವ ಸಾರಿಗೆ ವಾಹನಗಳ ಮಾಲೀಕರುಗಳಿಂದ ವೃತ್ತಿ ತೆರಿಗೆ ಪಾವತಿಯ ಬಾಧ್ಯತೆ ಇರುತ್ತದೆ.

ಸಾರಿಗೆ ವಾಹನಗಳ ಮಾಲೀಕರುಗಳಾಗಿರುವಂತಹ ಎಲ್ಲಾ ವ್ಯಕ್ತಿಗಳ ದಾಖಲಾತಿಯನ್ನು ಹಾಗೂ ಅನ್ವಯಗೊಳ್ಳುವ ದರದಲ್ಲಿ ವೃತ್ತಿಗಳ ಮೇಲಿನ ತೆರಿಗೆಯನ್ನು ವಸೂಲಾತಿಯನ್ನು ಖಚಿತಪಡಿಸಿಕೊಂಡಲ್ಲಿ, ಅದು ವರ್ಷ ಒಂದಕ್ಕೆ ₹ 32[7] ಕೋಟಿ ಮೊತ್ತಕ್ಕೆ ಕಡಿಮೆಯಿಲ್ಲದಂತೆ ರಾಜಸ್ವ/ವರಮಾನವನ್ನು ಸಂಗ್ರಹಿಸಬಹುದು.

ಮೇ 2016ರಲ್ಲಿ ಈ ಪ್ರಕರಣಗಳನ್ನು ಸ್ಪಷ್ಟಪಡಿಸಿದನಂತರ, ಸಾರಿಗೆ ಇಲಾಖೆಯಿಂದ ಮಾಹಿತಿಯನ್ನು ಪಡೆದುಕೊಳ್ಳುವುದಕ್ಕಾಗಿ ಪ್ರಯತ್ನಗಳನ್ನು ಮಾಡಲಾಗಿದೆ ಎಂಬುದಾಗಿ ವಾಣಿಜ್ಯ ತೆರಿಗೆ ಇಲಾಖೆಯು ಅಕ್ಟೋಬರ್ 2016ರಲ್ಲಿ ಉತ್ತರಿಸಿತು. ಅಲ್ಲದೆಯೇ ಭೌತಿಕ ಸಮೀಕ್ಷೆಗಳನ್ನು ನಡೆಸಲಾಗಿದ್ದಿತು. ಈ ವರೆಗೆ 161 ವ್ಯಕ್ತಿಗಳನ್ನು ದಾಖಲಿಸಿಕೊಳ್ಳಲಾಗಿದೆ ಹಾಗೂ 33,941 ಪ್ರಕರಣಗಳಲ್ಲಿ ₹ 5.54 ಲಕ್ಷ ಮೊತ್ತದಷ್ಟು ತೆರಿಗೆ ಮತ್ತು ಬಡ್ಡಿಯನ್ನು ವಸೂಲಾತಿ ಮಾಡಲಾಗಿದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶವನ್ನು ಎಲ್ಲಾ ವಿಭಾಗೀಯ ಮೌಲ್ಯವರ್ಧಿತ ತೆರಿಗೆ ಕಚೇರಿಗಳಿಗೆ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಕಳುಹಿಸಲಾಗಿದ್ದಿತು.

ನಿರ್ಗಮನ ಸಭೆಯಲ್ಲಿ, ಸಾರಿಗೆ ಇಲಾಖೆಯಲ್ಲಿ ಸಾರಿಗೆ ವಾಹನಗಳು ಯಾವ ವಿಳಾಸದಲ್ಲಿ ನೋಂದಣಿಗೊಂಡಿರುವವೋ ಆ ವಿಳಾಸದಲ್ಲಿ ಪತ್ತೆಹಚ್ಚುವಲ್ಲಿ ತಾನು ಅನುಭವಿಸಿದಂತಹ ತೊಂದರೆಗಳನ್ನು ವಾಣಿಜ್ಯ ತೆರಿಗೆ ಇಲಾಖೆಯು ವ್ಯಕ್ತಪಡಿಸಿತು. ಈ ನಿಟ್ಟಿನಲ್ಲಿ, ಪರವಾನಿಗೆಗಳು, ಸುಸ್ಥಿತಿ ಪ್ರಮಾಣ ಪತ್ರಗಳ ನವೀಕರಣ, ತ್ರೈಮಾಸಿಕ ತೆರಿಗೆ ಪಾವತಿ, ಇತ್ಯಾದಿ ವಿವಿಧ ಸೇವೆಗಳಿಗಾಗಿ ಆ ಇಲಾಖೆಗೆ ಸಾರಿಗೆ ವಾಹನಗಳು ಪದೇಪದೇ ಹೋಗುವುದರಿಂದ ವೃತ್ತಿಗಳ ಮೇಲಿನ ತೆರಿಗೆ ಸಂಗ್ರಹಣೆಗಾಗಿ ಸಾರಿಗೆ ಇಲಾಖೆಯನ್ನು ವಸೂಲಾತಿಯ ಪ್ರತಿನಿಧಿಯನ್ನಾಗಿ ಮಾಡುವಂತೆ ಲೆಕ್ಕಪರಿಶೋಧನೆಯು ಸರ್ಕಾರಕ್ಕೆ/ವಾಣಿಜ್ಯ ತೆರಿಗೆ ಇಲಾಖೆಗೆ ಸಲಹೆ ನೀಡಿತು. ವೃತ್ತಿಗಳ ಮೇಲಿನ ತೆರಿಗೆ ವಸೂಲಾತಿಯನ್ನು ಸಾರಿಗೆ ಇಲಾಖೆಗೆ ವಹಿಸುವುದು ಕಾರ್ಯಸಾಧ್ಯ ಪರಿಹಾರವಾಗಿದೆ ಎಂಬುದನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಹಾಗೂ ವಾಣಿಜ್ಯ ತೆರಿಗೆಗಳ ಆಯುಕ್ತರವರು ಒಪ್ಪಿಕೊಂಡರು ಹಾಗೂ ಕಾರ್ಯವಿಧಾನಗಳನ್ನು ಕಂಡುಕೊಳ್ಳುವ ಆಶ್ವಾಸನೆಯನ್ನು ನೀಡಿದರು.

***ಶಿಫಾರಸ್ಸು 1: ರಾಜ್ಯದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಸಾರಿಗೆ ವಾಹನಗಳ ಮಾಲೀಕರುಗಳಿಂದ ಬಾಕಿಯಿರುವಂತಹ ವೃತ್ತಿಗಳ ಮೇಲಿನ ತೆರಿಗೆ ಬಾಕಿಗಳ ಸಂಗ್ರಹಣೆಗಾಗಿ ಸಾರಿಗೆ ಇಲಾಖೆಯನ್ನು ಸರ್ಕಾರವು ನೇಮಕ ಮಾಡಬೇಕು.***

---

[6] ಲೆಕ್ಕಪರಿಶೋಧನೆಯು ಪರಿಗಣಿಸಿದ ಸಾರಿಗೆ ವಾಹನಗಳ ಸಂಖ್ಯೆಯು ಸಾಂಪ್ರದಾಯಕ ಆಧಾರದ ಮೇರೆಗೆ ಆಗಿರುತ್ತದೆ ಹಾಗೂ ರಾಜ್ಯದಲ್ಲಿ ನೋಂದಣಿ ಮಾಡಿಸಿಕೊಂಡಿದ್ದ 17 ಲಕ್ಷ ಸಾರಿಗೆ ವಾಹನಗಳ ಒಟ್ಟಾರೆ ಸಂಖ್ಯೆಯಿಂದ ಪಡೆದುಕೊಂಡಿರುವುದಾಗಿದೆ. ಸಾರಿಗೆ ಇಲಾಖೆಗೆ ತ್ರೈಮಾಸಿಕ ತೆರಿಗೆ ಪಾವತಿ ಮಾಡುವಂತಹ ಸಾರಿಗೆ ವಾಹನಗಳನ್ನು ಮಾತ್ರ ಪರಿಗಣಿಸಲ್ಪಟ್ಟಿದ್ದವು. ಸಾರಿಗೆ ಇಲಾಖೆಯು ಜೀವಿತಾವಧಿ ತೆರಿಗೆಯನ್ನು ಸಂಗ್ರಹಿಸಿದ್ದಂತಹ ಕೆಲವು ವರ್ಗಗಳ ಸಾರಿಗೆ ವಾಹನಗಳನ್ನು ಪರಿಗಣಿಸಿಲ್ಲ. ಅದೇ ರೀತಿಯಲ್ಲಿ, ಅಖಿಲ ಭಾರತ ಪರವಾನಿಗೆಯ ಮೂಲಕ ಅಥವಾ ಅಂತರ–ರಾಜ್ಯ ಪರವಾನಿಗೆಗಳ ಮೂಲಕ ಒಂದು ವರ್ಷದಲ್ಲಿ 120 ದಿನಗಳನ್ನೂ ಮೀರಿದಂತೆ ರಾಜ್ಯದಲ್ಲಿ ಕಾರ್ಯಾಚರಣೆ ನಡೆಸುತ್ತಿರುವಂತಹ ಇತರೆ ರಾಜ್ಯಗಳ ವಾಹನಗಳು ಕೂಡ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯವಾಗಿರುತ್ತವೆ. ಈ ವಾಹನಗಳನ್ನು ಪರಿಗಣಿಸಿದಲ್ಲಿ, ಈ ಬಾಬಿನ ಅಡಿಯಲ್ಲಿ ವರ್ಷ ಒಂದಕ್ಕೆ ₹ 50 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆ ರಾಜಸ್ವ/ವರಮಾನವನ್ನು ನಿರೀಕ್ಷಿಸಬಹುದು.

[7] ಕಂಡಿಕೆಯಲ್ಲಿ ನಮೂದಿಸಲಾಗಿರುವಂತಹ ₹ 137.11 ಕೋಟಿ ಮೊತ್ತದಷ್ಟು ಬಾಕಿಯಿರುವ ರಾಜಸ್ವ/ವರಮಾನದ ಪೈಕಿ, 2015–16ನೇ ಸಾಲಿನಲ್ಲಿ ಬಾಕಿ ಇದ್ದಂತಹ ಮೊತ್ತವು ₹ 32 ಕೋಟಿ ಆಗಿದ್ದಿತು. ರಾಜ್ಯದಲ್ಲಿ ಅಧಿಕಗೊಳ್ಳುತ್ತಿರುವ ಸಾರಿಗೆ ವಾಹನಗಳ ಸಂಖ್ಯೆ ವಾರ್ಷಿಕ ಶೇಕಡ 9ರಷ್ಟು ಆಗಿರುತ್ತದೆ.

### 2.4.9.2 ಸೇವಾ ವಲಯದಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಿರುವಂತಹ ವ್ಯಕ್ತಿಗಳು/ಸಂಸ್ಥೆಗಳು

ಹಣಕಾಸಿನ ಪ್ರತಿಫಲಾಪೇಕ್ಷೆಯಿಂದ ಸೇವೆಗಳನ್ನು ನೀಡುವಂತಹ ಹಾಗೂ ಆ ರೀತಿಯ ಸೇವೆಗಳಿಂದ ಯಾರ ವಾರ್ಷಿಕ ವಹಿವಾಟು ₹ 10 ಲಕ್ಷ ಮೊತ್ತವನ್ನು ಮೀರುವುದೋ ಅಂತಹ ಎಲ್ಲಾ ವ್ಯಕ್ತಿಗಳೂ/ಸಂಸ್ಥೆಗಳು ಸೇವಾ ತೆರಿಗೆ ಇಲಾಖೆಯ ಜೊತೆ ನೋಂದಣಿ ಮಾಡಿಸಿಕೊಳ್ಳಲು ಹಾಗೂ ಸೇವಾ ತೆರಿಗೆ ಪಾವತಿಸಲು ಬಾಧ್ಯರಾಗಿದ್ದರು. ಈ ಎಲ್ಲಾ ವ್ಯಕ್ತಿಗಳು/ಸಂಸ್ಥೆಗಳು ಕಾರ್ಯಕ್ರಮಗಳು/ಸಮಾರಂಭಗಳ ನಿರ್ವಹಣೆ, ಚಲನಚಿತ್ರ ಫಿಲಂಗಳ ಸಂಸ್ಕರಣೆ, ಸಾರಿಗೆ ಗುತ್ತಿಗೆ, ವ್ಯಾಪಾರವ್ಯವಹಾರ ಸಂಬಂಧಿತ ಮಧ್ಯಸ್ಥಿಕೆ ಸಂಸ್ಥೆಗಳು, ನಿವೇಶನ–ವಸತಿಸಮೂಹಗಳು ಮುಂತಾದ ಸ್ಥಿರಾಸ್ತಿಗಳ ಅಭಿವೃದ್ಧಿ, ಅಂತರಜಾಲ ಸೇವೆಗಳನ್ನು ಒದಗಿಸುವುದು, ಇ–ವಾಣಿಜ್ಯೀಯ ವ್ಯಾಪಾರ ನಿರ್ವಹಣೆ, ಷೇರು ವಿನಿಮಯ ಮಂಡಳಿಗಳ ಮೂಲಕ ಷೇರುಗಳ ದಳ್ಳಾಳಿ ವ್ಯವಹಾರ, ಶಿಕ್ಷಣ ಸಂಸ್ಥೆಗಳು, ಚಲನಚಿತ್ರಗಳ ವಿತರಣೆ, ಶುಶ್ರುಶಾಲಯಗಳು, ಬ್ಯಾಂಕು ಸೇವೆಗಳು ಹಾಗೂ ಹಣಕಾಸು ಸಂಸ್ಥೆಗಳು, ಇತ್ಯಾದಿಗಳಂತಹ ಹುದ್ದೆಗಳ ಅಡಿಯಲ್ಲಿ ವರ್ಗೀಕರಿಸಲ್ಪಡುವ ಸೇವೆಗಳಲ್ಲಿ ನಿರತರಾಗಿದ್ದರು, ಅವರುಗಳು ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಹಾಗೂ ವರ್ಷ ಒಂದಕ್ಕೆ ₹ 2,500 ದರದಲ್ಲಿ ತೆರಿಗೆ ಪಾವತಿಸಲು ಬಾಧ್ಯರಾಗಿದ್ದರು.

ಲೆಕ್ಕಪರಿಶೋಧನೆಯು ಸೇವಾ ತೆರಿಗೆ ಇಲಾಖೆಯಿಂದ ನೋಂದಣಿಗಳ ವಿವರಗಳನ್ನು ಪಡೆದುಕೊಂಡಿತು ಹಾಗೂ ಅಂತಹ ಸೇವೆಗಳನ್ನು ಒದಗಿಸುವವರು ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವಾಣಿಜ್ಯ ತೆರಿಗೆ ಇಲಾಖೆಯ ದಾಖಲೆಗಳ ಜೊತೆ ಅಡ್ಡಪರಿಶೀಲನೆ ಮಾಡಿತು. ಇದು, 6,943 ಖಾಸಗಿ ಮತ್ತು ಸಾರ್ವಜನಿಕ ನಿಯಮಿತ ಕಂಪನಿಗಳು ಹಾಗೂ 12,316 ಪಾಲುದಾರಿಕೆ ಸಂಸ್ಥೆಗಳು ವಾಣಿಜ್ಯ ತೆರಿಗೆ ಇಲಾಖೆಯ ಜೊತೆ ನೊಂದಣಿ/ದಾಖಲಾತಿ ಮಾಡಿಸಿಕೊಂಡಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ಇದು, 2011–12ರಿಂದ 2015–16ರ ಅವಧಿಯಲ್ಲಿ ಸರ್ಕಾರಕ್ಕೆ ₹ 24.07 ಕೋಟಿ ಮೊತ್ತದಷ್ಟು ರಾಜಸ್ವ/ವರಮಾನದಿಂದ ವಂಚಿಸಿತು. ಅಲ್ಲದೆಯೇ, ಮೇಲೆ ತಿಳಿಸಲಾದಂತಹ ವೃತ್ತಿಗಳಲ್ಲಿ 60,480 ವೈಯಕ್ತಿಕ ವ್ಯಕ್ತಿಗಳು ತೊಡಗಿಸಿಕೊಂಡಿದ್ದರು, ಅವರುಗಳಿಂದ ವಸೂಲಾತಿ ಮಾಡಬಹುದಾದಂತಹ ವೃತ್ತಿಗಳ ಮೇಲಿನ ಸಂಭಾವ್ಯ ತೆರಿಗೆ ಮೊತ್ತವು ₹ 75.60 ಕೋಟಿ ಆಗಿದ್ದಿತು, ಅದೇ ಅವಧಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ ಈ ಬಗ್ಗೆ ಯಾವುದೇ ಪರಿಶೋಧನೆಯೂ ಆಗದೆಯೇ ಉಳಿದಿದ್ದಿತು.

ಏಪ್ರಿಲ್ 2011 ಹಾಗೂ ಮಾರ್ಚ್ 2016ರ ಅವಧಿಯಲ್ಲಿ ಈ ಸಂಸ್ಥೆಗಳಿಂದ ಸಂಭಾವ್ಯ ರಾಜಸ್ವ/ವರಮಾನವನ್ನು ವಸೂಲಾತಿ ಮಾಡದಿದ್ದುದು ₹ 99.67 ಕೋಟಿ ಮೊತ್ತದಷ್ಟಿದ್ದಿತು. ಈ ಸಂಸ್ಥೆಗಳ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದರಿಂದ ವರ್ಷ ಒಂದಕ್ಕೆ ₹ 19.93 ಕೋಟಿ ಮೊತ್ತದಷ್ಟು ಹೆಚ್ಚುವರಿ ರಾಜಸ್ವ/ವರಮಾನವನ್ನು ಗಳಿಸಬಹುದು.

ಈ ಪ್ರಕರಣಗಳನ್ನು ಆಗಸ್ಟ್ 2016ರಲ್ಲಿ ಸ್ಪಷ್ಟಪಡಿಸಿದನಂತರ, ಲೆಕ್ಕಪರಿಶೋಧನೆಯಿಂದ ಗಮನಿಸಲ್ಪಟ್ಟಿರುವಂತಹ ಈ ಪ್ರಕರಣಗಳನ್ನು ಸಂಬಂಧಿತ ಎಲ್ಲಾ ವಿಭಾಗೀಯ ಮೌವತೆ ಕಚೇರಿಗಳಿಗೆ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಕಳುಹಿಸಿಕೊಡಲಾಗಿದೆ ಎಂಬುದಾಗಿ ವಾಣಿಜ್ಯ ತೆರಿಗೆ ಇಲಾಖೆಯು ಅಕ್ಟೋಬರ್ 2016ರಲ್ಲಿ ತಿಳಿಸಿತು.

***ಶಿಫಾರಸ್ಸು 2: ವೃತ್ತಿಗಳ ಮೇಲಿನ ತೆರಿಗೆಯನ್ನು ವಿಧಿಸುವುದರ ಮೇಲೆ ಪರಿಣಾಮವನ್ನು ಬೀರುವಂತಹ ಕರದಾತರ ಹೆಸರು, ವಿಳಾಸ, ವೈಯಕ್ತಿಕ ವ್ಯಕ್ತಿಗಳಾದಲ್ಲಿ ಅವರುಗಳ ವಯಸ್ಸು, ವೃತ್ತಿಯಿಂದ ವಹಿವಾಟು ಅಥವಾ ವರಮಾನ, ಇತ್ಯಾದಿ ವಿವರಗಳನ್ನು ಸೆರೆಹಿಡಿಯುವ ಸಲುವಾಗಿ ಇತರೆ ಸರ್ಕಾರಿ ಇಲಾಖೆಗಳಲ್ಲಿ ಲಭ್ಯವಿರುವಂತಹ ಮಾಹಿತಿಯನ್ನು ಸಂಗ್ರಹಿಸುವ ಹಾಗೂ ಅವುಗಳನ್ನು ಇಂದಿನದಿನದನ್ನಾಗಿ ಮಾಡುವ ಒಂದು ವ್ಯವಸ್ಥೆಯನ್ನು ಇಲಾಖೆಯು ಸ್ಥಾಪಿಸಬೇಕು. ಅಲ್ಲದೆಯೇ, ಅವರುಗಳ ನಿಯಂತ್ರಣದಲ್ಲಿರುವಂತಹ ಎಲ್ಲಾ ಸಂಭಾವ್ಯ ತೆರಿಗೆ ಪಾವತಿದಾರರುಗಳಿಂದ ತೆರಿಗೆ ಸಂಗ್ರಹಣೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ, 'ಹಣಕಾಸಿನ ಸಾಲ ನೀಡುವ ಸಂಸ್ಥೆಗಳು', ಷೇರುಗಳ ದಳ್ಳಾಳಿಗಳು', 'ವ್ಯಾಪಾರವ್ಯವಹಾರ ಸಂಬಂಧಿತ ಮಧ್ಯಸ್ಥಿಕೆ ಸಂಸ್ಥೆಗಳು', ಇತ್ಯಾದಿ ಕೆಲವು ವೃತ್ತಿಗಳಿಗೆ ಸಂಬಂಧಿಸಿದಂತೆ ಪರವಾನಿಗೆಯನ್ನು ನೀಡುವ ಅಧಿಕಾರಿಗಳನ್ನು ವೃತ್ತಿ ತೆರಿಗೆ ಸಂಗ್ರಹಣೆಯ ಪ್ರತಿನಿಧಿಗಳನ್ನಾಗಿ ಮಾಡಬೇಕು.***

### 2.4.9.3 ಅಸಂಘಟಿತ ವಲಯ

ಸಂಘಟಿತ ವಲಯದ ಅಡಿಯಲ್ಲಿರುವವರಿಗೆ ಹೋಲಿಸಿದಲ್ಲಿ ಅಸಂಘಟಿತ ವಲಯದ ಅಡಿಯಲ್ಲಿರುವ ವೃತ್ತಿಗಳಲ್ಲಿನ ಸಂಭಾವ್ಯ ತೆರಿಗೆ ಪಾವತಿದಾರರುಗಳನ್ನು ಗುರುತಿಸುವಲ್ಲಿನ ತೊಂದರೆಗಳನ್ನು ಲೆಕ್ಕಪರಿಶೋಧನೆಯು ಒಪ್ಪಿಕೊಳ್ಳುತ್ತದೆ. ಆದಾಗ್ಯೂ, ಈ ವಲಯದ ಜೊತೆ ವ್ಯವಹರಿಸುವ ಸಲುವಾಗಿ ಯಾವುದೇ ಕಾರ್ಯನೀತಿಯನ್ನು ರೂಪಿಸುವಲ್ಲಿ ಇಲಾಖೆಯು ಮಾಡಿರಬಹುದಾದಂತಹ ಯಾವುದೇ ಗೋಚರಿಸಬಹುದಾದ ಪೂರ್ವಭಾವಿ ಯೋಜನೆಗಳು/ಪ್ರಯತ್ನಗಳು ಕಂಡುಬರಲಿಲ್ಲ.

ಈ ವಲಯದ ಅಡಿಯಲ್ಲಿನ ತೆರಿಗೆ ಸಂಭಾವ್ಯತೆಯನ್ನು ನಿರ್ಧಾರಣೆ ಮಾಡುವ ಸಲುವಾಗಿ ಹಾಗೂ ಅಲ್ಲದೆಯೇ ಇರುವಂತಹ ತೆರಿಗೆ ಅಂತರವನ್ನು ತೋರಿಸುವ ಸಲುವಾಗಿ, ಲೆಕ್ಕಪರಿಶೋಧನೆಯು ಈ ಕೆಳಗಿನ ವೃತ್ತಿಗಳನ್ನು ಅವುಗಳಿಗೆ ಪ್ರತಿಯಾಗಿ ತೋರಿಸಲಾಗಿರುವಂತಹ ಫಲಿತಾಂಶಗಳ ಜೊತೆಯಲ್ಲಿ ವಿಶ್ಲೇಷಣೆ ಮಾಡಿತು.

### 2.4.9.4 ಚಲನಚಿತ್ರ/ದೂರದರ್ಶನ ಕೈಗಾರಿಕೆಗಳಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವಂತಹ ವ್ಯಕ್ತಿಗಳು

(ಎ) ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮ, 1976ರ ಷೆಡ್ಯೂಲಿನಲ್ಲಿನ ನಮೂದು ಕ್ರಮ ಸಂಖ್ಯೆ 12ರ ಅಡಿಯಲ್ಲಿ, ಚಲನಚಿತ್ರಗಳ ಕೈಗಾರಿಕೆಗಳಲ್ಲಿ ಸ್ವಯಂ ಉದ್ಯೋಗಗಳನ್ನು ಮಾಡುತ್ತಿರುವ ವ್ಯಕ್ತಿಗಳು, ಅಂದರೆ, ನಿರ್ದೇಶಕರುಗಳು, ನಟರು, ನಟಿಯರು (ಕಿರಿಯ ಕಲಾವಿದರುಗಳನ್ನು ಹೊರತುಪಡಿಸಿದಂತೆ), ಹಿನ್ನೆಲೆ ಗಾಯಕರುಗಳು, ಧ್ವನಿಮುದ್ರಕರು ಹಾಗೂ ಸಂಕಲನಕಾರರುಗಳು ಆದಾಯ ತೆರಿಗೆ ಪಾವತಿದಾರರುಗಳಾಗಿದ್ದಲ್ಲಿ ವರ್ಷ ಒಂದಕ್ಕೆ ₹ 2,500 ದರದಲ್ಲಿ ಹಾಗೂ ಅಲ್ಲವಾದಲ್ಲಿ ವರ್ಷ ಒಂದಕ್ಕೆ ₹ 1,500 ದರದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿರುತ್ತಾರೆ ಎಂಬುದಾಗಿ ನಿರ್ದಿಷ್ಟಪಡಿಸಿದೆ. ಅದೇ ನಮೂದು ಕ್ರಮ ಸಂಖ್ಯೆಯ ಅಡಿಯಲ್ಲಿ ವ್ಯಾಪಿಸುವಂತಹ ಛಾಯಾಚಿತ್ರಗ್ರಾಹಿಗಳು ಹಾಗೂ ಸ್ಥಿರ ಛಾಯಾಚಿತ್ರಗ್ರಾಹಕರು ವರ್ಷ ಒಂದಕ್ಕೆ ₹ 900 ದರದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿರುತ್ತಾರೆ.

ಈ ಪ್ರವರ್ಗದ ಅಡಿಯಲ್ಲಿ ಕೇವಲ 76 ವ್ಯಕ್ತಿಗಳು ಇಲಾಖೆಯ ಜೊತೆ ದಾಖಲಾತಿ ಮಾಡಿಕೊಂಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇತ್ತೀಚಿನ ದಿನಗಳಲ್ಲಿ ತಯಾರಿಸಲಾಗಿದ್ದಂತಹ ಚಲನ ಚಿತ್ರಗಳ ಪ್ರಮಾಣವನ್ನು ಹಾಗೂ ಅನೇಕ ಸಂಖ್ಯೆಯ ಪ್ರಾದೇಶಿಕ ಚಾನಲ್ಲುಗಳು ಬಿತ್ತರಿಸುವಂತಹ ಅನೇಕ ದೈನಂದಿನ ಧಾರಾವಾಹಿಗಳನ್ನು ಪರಿಗಣಿಸಿದಲ್ಲಿ ಈ ಪ್ರವರ್ಗದ ಅಡಿಯಲ್ಲಿ ನೋಂದಾಯಿಸಿಕೊಂಡಿರುವಂತಹ ವ್ಯಕ್ತಿಗಳ ಸಂಖ್ಯೆಯು ಬಹಳಷ್ಟು ಕಡಿಮೆ ಎಂಬುದಾಗಿ ಕಂಡುಬರುತ್ತದೆ.

ಕಳೆದ ಐದು ವರ್ಷಗಳ ಅವಧಿಯಲ್ಲಿ 667[8] ಚಲನಚಿತ್ರಗಳನ್ನು ತಯಾರಿಸಲಾಯಿತು ಎಂಬುದಾಗಿ ಪರಿಗಣಿಸಿದಂತೆ, ಚಲನಚಿತ್ರ ಕಾರ್ಯಚಟುವಟಿಕೆಗಳ ಮೂರು ಪ್ರವರ್ಗಗಳ (ನಟ/ನಟಿಯರು, ನಿರ್ದೇಶಕರುಗಳು, ಸಂಗೀತ ನಿರ್ದೇಶಕರುಗಳು) ಅಡಿಯಲ್ಲಿ ಕಡೆಯ ಪಕ್ಷ 1,600[9] ತೆರಿಗೆಯನ್ನು ವಿಧಿಸಬಹುದಾದಂತಹ ವ್ಯಕ್ತಿಗಳು ಇದ್ದರು ಎಂಬುದಾಗಿ ಲೆಕ್ಕಪರಿಶೋಧನೆಯು ಅಂದಾಜು ಮಾಡಿತು. ಅದರಂತೆಯೇ, ಈ ನಮೂದು ಕ್ರಮ ಸಂಖ್ಯೆಯ ಅಡಿಯಲ್ಲಿ ತೆರಿಗೆ ಸಂಭಾವ್ಯತೆಯು ₹ 1.2 ಕೋಟಿಯಿಂದ ₹ 2 ಕೋಟಿ[10] ನಡುವೆ ಆಗಿರುತ್ತದೆ.

ಈ ವಲಯದಲ್ಲಿಯೂ ಕೂಡ ವೃತ್ತಿಗಳ ಮೇಲಿನ ತೆರಿಗೆ ವಿಧಿಸುವಿಕೆಯನ್ನು ಜಾರಿಗೊಳಿಸುವುದು ಇಲಾಖೆಯ ಅರ್ಹ ಗಮನವನ್ನು ಪಡೆದುಕೊಂಡಿರಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ, ಅದನ್ನು ಚಲನ ಚಿತ್ರ ವಾಣಿಜ್ಯ ಮಂಡಳಿ, ನಟನಟಿಯರ ಸಂಘ, ಇತ್ಯಾದಿ ಕೈಗಾರಿಕೆಗೆ ಸಂಬಂಧಿತ ವ್ಯಕ್ತಿಗಳ ಸಂಘಗಳೊಡನೆ ಪಾರಸ್ಪರಿಕ ಪತ್ರವ್ಯವಹಾರ ನಡೆಸುವ ಮೂಲಕ ನಿಭಾಯಿಸಬಹುದಾಗಿದ್ದಿತು.

ಈ ವಿಷಯವನ್ನು ಏಪ್ರಿಲ್ 2016ರಲ್ಲಿ ವಾಣಿಜ್ಯ ತೆರಿಗೆ ಇಲಾಖೆಗೆ ಸ್ಪಷ್ಟಪಡಿಸಿದನಂತರ, ವಾಣಿಜ್ಯ ತೆರಿಗೆ ಇಲಾಖೆಯು, ತಾನು ವಿವಿಧ ಮೂಲಗಳಿಂದ ಮಾಹಿತಿಯನ್ನು ಕೋರಿರುವುದಾಗಿಯೂ ಹಾಗೂ ಭೌತಿಕ ಸಮೀಕ್ಷೆಯನ್ನು ನಡೆಸಿರುವುದಾಗಿಯೂ ಹಾಗೂ ಅದರ ಮೂಲಕ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿರುವಂತಹ 419 ವ್ಯಕ್ತಿಗಳನ್ನು ಗುರುತಿಸಿರುವುದಾಗಿಯೂ ತನ್ನ ಅಕ್ಟೋಬರ್ 2016ರಲ್ಲಿ ನೀಡಿದ ಉತ್ತರದಲ್ಲಿ ತಿಳಿಸಿತು. ತದನಂತರ, ವಿವಿಧ ದೂರದರ್ಶನ ಚಾನಲ್ಲುಗಳಿಗೆ, ಅವುಗಳು ಪ್ರಸಾರ ಮಾಡುತ್ತಿರುವಂತಹ ವಿವಿಧ ಧಾರಾವಾಹಿಗಳಲ್ಲಿ ಕೆಲಸ ಮಾಡುತ್ತಿರುವಂತಹ ವ್ಯಕ್ತಿಗಳ ವಿವರಗಳನ್ನು ಒದಗಿಸುವಂತೆ ಇಲಾಖೆಯು ನೋಟೀಸುಗಳನ್ನು ನೀಡಿತು.

**(ಬಿ)** ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮ, 1976ರ ಷೆಡ್ಯೂಲಿನಲ್ಲಿನ ನಮೂದು ಕ್ರಮ ಸಂಖ್ಯೆ 12ರ ಅಡಿಯಲ್ಲಿ, ಚಲನಚಿತ್ರ ಕೈಗಾರಿಕೆಗಳಲ್ಲಿ ಉದ್ಯೋಗಗಳನ್ನು ಮಾಡುತ್ತಿರುವ ವ್ಯಕ್ತಿಗಳು, ಅಂದರೆ, ನಿರ್ದೇಶಕರುಗಳು, ನಟರು, ನಟಿಯರು, ಹಿನ್ನೆಲೆ

---

[8] 2011–12 ರಿಂದ 2015–16ರಲ್ಲಿ ಪ್ರತೀ ವರ್ಷವೂ ತಯಾರಿಸಲಾಗಿರುವಂತಹ ಚಲನಚಿತ್ರಗಳ ಸಂಖ್ಯೆಯು ಅನುಕ್ರಮವಾಗಿ 134, 106, 151, 116 ಹಾಗೂ 160 ಆಗಿದ್ದಿತು.

[9] ಕಳೆದ ಐದು ವರ್ಷಗಳಲ್ಲಿ ಬಿಡುಗಡೆಯಾಗಿರುವ ಚಲನ ಚಿತ್ರಗಳ ಪಟ್ಟಿಯನ್ನು ತಯಾರಿಸಲಾಗಿದ್ದಿತು. ಪ್ರಧಾನ ಪಾತ್ರಗಳನ್ನು ನಿರ್ವಹಿಸಿದ ನಟರು/ನಟಿಯರು ಹಾಗೂ ನಿರ್ದೇಶಕರು ಹಾಗೂ ಸಂಗೀತ ನಿರ್ದೇಶಕರ ಹೆಸರುಗಳನ್ನು ಪ್ರತಿಯೊಂದು ಚಲನಚಿತ್ರದ ಪ್ರತಿಯಾಗಿ ನಮೂದಿಸಲಾಗಿದ್ದಿತು. ಒಂದು ವರ್ಷದಲ್ಲಿ ಕಡೆಯ ಪಕ್ಷ ಒಂದು ಚಲನಚಿತ್ರದಲ್ಲಿ ನಟಿಸಿರುವ/ಕಾಣಿಸಿಕೊಂಡಿರುವ ವ್ಯಕ್ತಿಗಳ ಪಟ್ಟಿಯನ್ನು ಪಡೆಯುವುದಕ್ಕಾಗಿ ಆ ಪಟ್ಟಿಯನ್ನು ವಿಶ್ಲೇಷಿಸಲಾಯಿತು.

[10] ಆದಾಯ ತೆರಿಗೆ ಪಾವತಿದಾರರಲ್ಲದ ವ್ಯಕ್ತಿಗೆ ಸಂಬಂಧಿಸಿದಂತೆ ಅನ್ವಯಗೊಳ್ಳುವ ವಾರ್ಷಿಕ ತೆರಿಗೆ ದರವು ₹ 1,500 ಆಗಿದ್ದು, 1,600 ವ್ಯಕ್ತಿಗಳಿಗೆ 5 ವರ್ಷಗಳಿಗೆ ₹ 1.2 ಕೋಟಿ ಆಗುತ್ತದೆ. ವ್ಯಕ್ತಿಗಳು ಆದಾಯ ತೆರಿಗೆ ಪಾವತಿದಾರರಾದಲ್ಲಿ ವರ್ಷ ಒಂದಕ್ಕೆ ವ್ಯಕ್ತಿಯೊಬ್ಬರಿಗೆ ₹ 2,500 ದರದಲ್ಲಿ ಐದು ವರ್ಷಗಳಿಗೆ ₹ 2.00 ಕೋಟಿ ಆಗುತ್ತದೆ.

ಗಾಯಕರುಗಳು, ಧ್ವನಿಮುದ್ರಕರು ಹಾಗೂ ಸಂಕಲನಕಾರರುಗಳು ಆದಾಯ ತೆರಿಗೆ ಪಾವತಿದಾರರುಗಳಾಗಿದ್ದಲ್ಲಿ ವರ್ಷ ಒಂದಕ್ಕೆ ₹ 2,500 ದರದಲ್ಲಿ ಹಾಗೂ ಅಲ್ಲವಾದಲ್ಲಿ ವರ್ಷ ಒಂದಕ್ಕೆ ₹ 1,500 ದರದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿರುತ್ತಾರೆ ಎಂಬುದಾಗಿ ನಿರ್ದಿಷ್ಟಪಡಿಸಿದೆ. ಅದೇ ನಮೂದು ಕ್ರಮ ಸಂಖ್ಯೆಯ ಅಡಿಯಲ್ಲಿ ವ್ಯಾಪಿಸುವಂತಹ ಛಾಯಾಚಿತ್ರಗ್ರಾಹಿಗಳು ಹಾಗೂ ಸ್ಥಿರ ಛಾಯಾಚಿತ್ರಗ್ರಾಹಕರು, ಅವರುಗಳ ಆದಾಯ ತೆರಿಗೆ ಪಾವತಿ ಬಾಧ್ಯತೆಯನ್ನು ಹೊರತುಪಡಿಸಿದಂತೆ ವರ್ಷ ಒಂದಕ್ಕೆ ₹ 900 ದರದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿರುತ್ತಾರೆ ಎಂಬುದಾಗಿ ನಿರ್ದಿಷ್ಟಪಡಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲ ಹಾಗೂ ವಿವಾದದಿಂದ ಕೂಡಿರುವುದು ಕಂಡುಬರುತ್ತದೆ.

### 2.4.9.5 ಕೇಬಲ್ಲು ಟಿವಿ ನಿರ್ವಾಹಕರು

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮ, 1976ರ ಷೆಡ್ಯೂಲಿನಲ್ಲಿನ ನಮೂದು ಕ್ರಮ ಸಂಖ್ಯೆ 39ರ ಅಡಿಯಲ್ಲಿ, ಡಿಶ್ ಆಂಟೆನಾ ಹಾಗೂ ಕೇಬಲ್ಲು ಟಿವಿಗಳನ್ನು ಬಳಸಿಕೊಂಡು ಮನೋರಂಜನೆಯನ್ನು ಒದಗಿಸುವಂತಹ ವ್ಯಕ್ತಿಗಳು ನಿರ್ದಿಷ್ಟ ದರಗಳಲ್ಲಿ ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಬೇಕು.

ಕರ್ನಾಟಕ ಮನೋರಂಜನೆಗಳ ಮೇಲಿನ ತೆರಿಗೆ ಅಧಿನಿಯಮದ ಪರಿಚ್ಛೇದ 4–ಸಿ ಅಡಿಯಲ್ಲಿ ಕೇಬಲ್ಲು ನಿರ್ವಾಹಕರು ತಿಂಗಳು ಒಂದಕ್ಕೆ ಸಂಪರ್ಕ ಒಂದಕ್ಕೆ ₹ 15/- ದರದಲ್ಲಿ ಮನೋರಂಜನೆಗಳ ಮೇಲಿನ ತೆರಿಗೆಯನ್ನು ಪಾವತಿಸಬೇಕು. ಕೇಬಲ್ಲು ನಿರ್ವಾಹಕರು, ಕರ್ನಾಟಕ ಮನೋರಂಜನೆಗಳ ಮೇಲಿನ ತೆರಿಗೆ ಅಧಿನಿಯಮದ ಪರಿಚ್ಛೇದ 4–ಡಿ ಅಡಿಯಲ್ಲಿ ತೆರಿಗೆ ಸಂಯೋಜನೆಯನ್ನು[11] ಆಯ್ಕೆ ಮಾಡಿಕೊಳ್ಳಲು ಅರ್ಹರಿದ್ದರು. ಮುಂದುವರೆದು, ಅಧಿನಿಯಮದ ಪರಿಚ್ಛೇದ 4–ಜಿ ಅಡಿಯಲ್ಲಿ ಬಹು–ವ್ಯವಸ್ಥೆ ನಿರ್ವಾಹಕರುಗಳಿಂದ (MSOs) ಸಂಕೇತಗಳನ್ನು ಸ್ವೀಕರಿಸುವಂತಹ ಕೇಬಲ್ಲು ನಿರ್ವಾಹಕರುಗಳು ಯಾವುದೇ ಮನೋರಂಜನೆಗಳ ಮೇಲಿನ ತೆರಿಗೆಯನ್ನೂ ಪಾವತಿಸಬೇಕಾಗಿಲ್ಲ. ಸಂಕೇತಗಳನ್ನು ಕೇಬಲ್ಲುಗಳ ಮೂಲಕ ಪ್ರಸಾರ ಮಾಡುವ ಸಲುವಾಗಿ ಕೇಬಲ್ಲು ನಿರ್ವಾಹಕರುಗಳು ಸ್ಥಳೀಯ ಪ್ರಧಾನ ಅಂಚೆ ಕಚೇರಿಗಳಿಂದ ಪರವಾನಿಗೆಯನ್ನು ಪಡೆದುಕೊಳ್ಳುವರು.

ಆರು ಊರುಗಳಲ್ಲಿ ಅಧಿಕಾರ ವ್ಯಾಪ್ತಿಯ ಪ್ರಧಾನ ಅಂಚೆ ಕಚೇರಿಗಳಿಂದ ಪರವಾನಿಗೆಗಳನ್ನು ನೀಡಲ್ಪಟ್ಟಿದ್ದಂತಹ ಕೇಬಲ್ಲು ನಿರ್ವಾಹಕರುಗಳ ಸಂಖ್ಯೆ ಹಾಗೂ ಸ್ಥಳೀಯ ಬಹು–ವ್ಯವಸ್ಥೆ ನಿರ್ವಾಹಕರುಗಳ ಮೂಲಕ ಕಾರ್ಯನಿರ್ವಹಿಸುತ್ತಿದಂತಹ ಕೇಬಲ್ಲು ನಿರ್ವಾಹಕರುಗಳ ಸಂಖ್ಯೆಯನ್ನು ಸಂಗ್ರಹಿಸಿ ಹಾಗೂ ಅವುಗಳನ್ನು ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ನಿರ್ವಹಿಸಲಾಗಿದ್ದಂತಹ ದಾಖಲೆಗಳ ಜೊತೆಯಲ್ಲಿ ಅಡ್ಡ ಪರಿಶೀಲನೆ ಮಾಡಲಾಗಿ 698 ಕೇಬಲ್ಲು ನಿರ್ವಾಹಕರುಗಳ ಪೈಕಿ 641 ಕೇಬಲ್ಲು ನಿರ್ವಾಹಕರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ದಾಖಲಾತಿ/ನೋಂದಣಿ ಮಾಡಿಸಿಕೊಂಡಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ವಿವರಗಳನ್ನು **ಕೋಷ್ಟಕ 2.4**ರಲ್ಲಿ ನೀಡಲಾಗಿದೆ.

**ಕೋಷ್ಟಕ :2.4**
**ಕೇಬಲ್ಲು ಟಿವಿ ನಿರ್ವಾಹಕರು**

| ಕ್ರಮ ಸಂಖ್ಯೆ | ಊರು (ಮಹಾನಗರಪಾಲಿಕೆ, ತಾಲ್ಲೂಕು ನಗರಸಭೆ) | ಕೇಬಲ್ಲು ನಿರ್ವಾಹಕರ ಸಂಖ್ಯೆ (ಪ್ರಧಾನ ಅಂಚೇ ಕಚೇರಿ ಅಥವಾ ಮಲ್ಟಿ ಸಿಸ್ಟಂ ನಿರ್ವಾಹಕರ ಪ್ರಕಾರ) | ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಣಿ ಮಾಡಿಸಿದ್ದಂತಹ ಕೇಬಲ್ಲು ನಿರ್ವಾಹಕರ ಸಂಖ್ಯೆ |
|---|---|---|---|
| 1. | ಬಳ್ಳಾರಿ ಮಹಾನಗರಪಾಲಿಕೆ | 178 | 1 |
| 2. | ಹೊನ್ನಾವರ ತಾಲ್ಲೂಕು ನಗರ ಸಭೆ | 30 | 0 |
| 3. | ಕುಮುಟ ತಾಲ್ಲೂಕು ನಗರ ಸಭೆ | 11 | 2 |
| 4. | ಯಾದಗಿರಿ ತಾಲ್ಲೂಕು ನಗರಪಾಲಿಕೆ | 148 | 2 |
| 5. | ಬಿದರ್ ತಾಲ್ಲೂಕು ನಗರ ಪಾಲಿಕೆ | 78 | 9 |
| 6. | ಕಲಬುರಗಿ ಮಹಾನಗರ ಪಾಲಿಕೆ | 253 | 43 |
| | **ಒಟ್ಟು** | **698** | **57** |

ಪರೀಕ್ಷಾ–ಪರಿಶೀಲನೆ ಮಾಡಲಾದ ಊರುಗಳಲ್ಲಿ, ಶೇಕಡಾ 8.17ರಷ್ಟು ಕೇಬಲ್ಲು ನಿರ್ವಾಹಕರುಗಳು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಣಿ ಮಾಡಿಸಿದ್ದರು ಎಂಬುದನ್ನು ಮೇಲಿನ ಕೋಷ್ಟವು ತೋರಿಸುತ್ತದೆ. ಈ ರೀತಿಯಾಗಿ, ಸಂಬಂಧಿತ ಮೂಲಗಳಿಂದ ವಿವರಗಳ ಸಂಗ್ರಹಣೆ ಹಾಗೂ ಇಂದಿನದಿನದನ್ನಾಗಿ ಮಾಡುವ ಮೂಲಕ ಈ ವಲಯದಲ್ಲಿ ತೆರಿಗೆ ಮೂಲವನ್ನು ವಿಸ್ತರಿಸಲು ವಿಫುಲವಾದಂತಹ ಅವಕಾಶಗಳಿವೆ. ಸರ್ಕಾರಕ್ಕೆ ಬಾಕಿಯಿರುವಂತಹ ಮನೋರಂಜನೆಗಳ ಮೇಲಿನ ತೆರಿಗೆ ಹಾಗೂ ವೃತ್ತಿಗಳ ಮೇಲಿನ ತೆರಿಗೆಯನ್ನು ಅವರುಗಳಿಂದ ಅಥವಾ ಬಹು–ವ್ಯವಸ್ಥೆ ನಿರ್ವಾಹಕರುಗಳಿಂದ ವಸೂಲಾತಿ ಮಾಡುವ ರೀತಿಯಲ್ಲಿ ಎಲ್ಲಾ

[11] ಈ ಅನುವಿನ ಅಡಿಯಲ್ಲಿ ಕೇಬಲ್ಲು ನಿರ್ವಾಹಕರುಗಳು ಅವರುಗಳು ಹೊಂದಿರುವ ಸಂಪರ್ಕಗಳ ಸಂಖ್ಯೆಯನ್ನು ಹೊರತುಪಡಿಸಿದಂತೆ ಪ್ರತೀ ತಿಂಗಳೂ ಒಂದು ನಿರ್ದಿಷ್ಟ ಮೊತ್ತವನ್ನು ಪಾವತಿಸುವ ಅಗತ್ಯತೆಯಿರುತ್ತದೆ.

ಕೇಬಲ್ಲು ನಿರ್ವಾಹಕರುಗಳು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡಿರುವುದನ್ನು ವಾಣಿಜ್ಯ ತೆರಿಗೆ ಇಲಾಖೆಯು ಖಚಿತಪಡಿಸಿಕೊಳ್ಳುವ ಅಗತ್ಯತೆಯಿರುತ್ತದೆ.

ಎಲ್ಲಾ ಕೇಬಲ್ಲು ನಿರ್ವಾಹಕರುಗಳನ್ನು ದಾಖಲಾತಿ ಮಾಡಿಸಿಕೊಳ್ಳುವ ಸಲುವಾಗಿ ಕ್ರಮಗಳನ್ನು ಪ್ರಾರಂಭಿಸಲಾಗಿದೆ ಎಂಬುದಾಗಿ ವಾಣಿಜ್ಯ ತೆರಿಗೆ ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು.

***ಶಿಫಾರಸ್ಸು 3: ಅಸಂಘಟಿತ ವಲಯಗಳಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಗೆ ಬಾಧ್ಯರಾಗಿರುವಂತಹ ಅಧಿಕ ಸಂಖ್ಯೆಯ ವ್ಯಕ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಸಲುವಾಗಿ, ಮಾನ್ಯತೆಯನ್ನು ಹೊಂದಿರುವ ಸಂಘಗಳು ಸಂಪರ್ಕ-ಸೇತು ಸಂಸ್ಥೆಗಳು, ಇತ್ಯಾದಿ ಸಾಧ್ಯವಿರುವಂತಹ ಎಲ್ಲಾ ಮೂಲಗಳಿಂದ ಇಲಾಖೆಯು ಮಾಹಿತಿಯನ್ನು ಸಂಗ್ರಹಿಸಬೇಕು.***

## 2.4.10 ಆದಾಯ ತೆರಿಗೆ ಪಾವತಿ ಮಾಡುತ್ತಿರುವ ವ್ಯಕ್ತಿಗಳನ್ನು ದಾಖಲಿಸಿಕೊಳ್ಳುವುದು/ಅವರುಗಳಿಂದ ಬರಬೇಕಾಗಿರುವಂತಹ ತೆರಿಗೆ ಪಾವತಿಗಾಗಿ ತಗಾದೆ ಸೃಷ್ಟಿಸುವುದು

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮ, 1976ರ ಷೆಡ್ಯೂಲಿನಲ್ಲಿನ ಆವಕಲನ ನಮೂದು ಕ್ರಮ ಸಂಖ್ಯೆ 73ರ ಅಡಿಯಲ್ಲಿ, ಈ ಮುಂಚಿನ ನಮೂದುಗಳಲ್ಲಿ ತಿಳಿಸದೇ ಇರುವಂತಹ ವ್ಯಕ್ತಿಗಳನ್ನು ಹೊರತುಪಡಿಸಿ, ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಅಥವಾ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವಂತಹ ಹಾಗೂ ಆದಾಯ ತೆರಿಗೆ ಅಧಿನಿಯಮ, 1961ರ ಅಡಿಯಲ್ಲಿ ತೆರಿಗೆ ಪಾವತಿ ಮಾಡುತ್ತಿರುವಂತಹ ಇತರೆ ವ್ಯಕ್ತಿಗಳು ವರ್ಷ ಒಂದಕ್ಕೆ ₹ 2,500 ದರದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಪಾವತಿ ಮಾಡುವುದನ್ನು ನಿರ್ದಿಷ್ಟಪಡಿಸಿದೆ. ಅಲ್ಲದೆಯೇ, ನಮೂದು ಕ್ರಮ ಸಂಖ್ಯೆ 9 ಮತ್ತು 12ರ ಅಡಿಯಲ್ಲಿ ಆದಾಯ ತೆರಿಗೆಯನ್ನು ಪಾವತಿಸುವಂತಹ ವ್ಯಕ್ತಿಗಳಿಗೆ ವರ್ಷ ಒಂದಕ್ಕೆ ₹ 2,500ರ ಅಧಿಕ ಮಟ್ಟದ ದರದಲ್ಲಿ ಪಾವತಿಸಬೇಕಾದಲ್ಲಿ ವರಮಾನ ತೆರಿಗೆ ಪಾವತಿಗೆ ಬಾಧ್ಯರಾಗಿಲ್ಲದವರು ವರ್ಷ ಒಂದಕ್ಕೆ ₹ 1,500 ಅಥವಾ ₹ 1,000, ಇವುಗಳಲ್ಲಿ ಯಾವುದು ಅನ್ವಯವೋ ಆ ದರದಲ್ಲಿ ಪಾವತಿಸಬೇಕು.

ಮೇಲೆ ತಿಳಿಸಲಾದಂತಹ ನಮೂದುಗಳ ಅಡಿಯಲ್ಲಿ ಆದಾಯ ತೆರಿಗೆ ಪಾವತಿಯು ಒಂದು ಮಾನದಂಡವಾಗಿದ್ದರೂ ಸಹ, ತೆರಿಗೆ ಪಾವತಿಗೆ ಬಾಧ್ಯರಾಗಿರುವಂತಹ ವ್ಯಕ್ತಿಗಳನ್ನು ಗುರುತಿಸಲು, ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಲು ಹಾಗೂ ತೆರಿಗೆಯನ್ನು ವಸೂಲಾತಿ ಮಾಡುವ ಸಲುವಾಗಿ ಆದಾಯ ತೆರಿಗೆ ಅಡಿಯಲ್ಲಿನ ಬಾಧ್ಯತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಇಲಾಖೆಯಲ್ಲಿ ಯಾವುದೇ ಕ್ರಿಯಾ ಯೋಜನೆಯೂ ಲಭ್ಯವಿರಲಿಲ್ಲ. ಆದಾಯ ತೆರಿಗೆ ಅಡಿಯಲ್ಲಿನ ಜವಾಬ್ದಾರಿಯು ವರ್ಷದಿಂದ ವರ್ಷಕ್ಕೆ ವ್ಯತ್ಯಯಗೊಳ್ಳುತ್ತದೆ ಮತ್ತು ಆದ್ದರಿಂದ, ವಾಣಿಜ್ಯ ತೆರಿಗೆ ಇಲಾಖೆಯು ಪಾವತಿಸಲಾದಂತಹ ತೆರಿಗೆಯ ಯಥಾರ್ಥತೆಯನ್ನು ನಿರ್ಧಾರಣೆ ಮಾಡುವ ಸಲುವಾಗಿ ಆದಾಯ ತೆರಿಗೆ ಪಾವತಿಯ ವಿವರಗಳನ್ನು ಸಂಗ್ರಹಿಸುವ ಅಗತ್ಯತೆಯನ್ನು ಹೊಂದಿರುತ್ತದೆ. ಈ ಗುರಿಯ ಒಂದು ಪ್ರಾರಂಭಿಕ ಹೆಜ್ಜೆಯಾಗಿ, ಇಲಾಖೆಯು ಎಲ್ಲಾ ಪ್ರಸ್ತುತ ಇರುವಂತಹ ಕರದಾತರ PAN ಅನ್ನು ಸೆರೆಹಿಡಿಯುವುದನ್ನು ಖಚಿತಪಡಿಸಿಕೊಳ್ಳುವ ಅಗತ್ಯತೆಯಿರುತ್ತದೆ.

ದಾಖಲಿಸಿಕೊಂಡಿದ್ದಂತಹ 2.52 ಲಕ್ಷ ವ್ಯಕ್ತಿಗಳ ಪೈಕಿ 1.13 ಲಕ್ಷ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಇಲಾಖೆಯು PAN ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. PELSoftನ ದತ್ತಸಂಚಯದಲ್ಲಿ, PAN ಅನ್ನು ದಾಖಲಿಸುವ ಸಲುವಾಗಿನ ಕ್ಷೇತ್ರವನ್ನು ಖಾಲಿ ಬಿಡಲಾಗಿದ್ದಿತು ಅಥವಾ ಅನೂರ್ಜಿತ ಮಾಹಿತಿಯನ್ನು ಅಂದರೆ ಊರ್ಜಿತವಾದಂತಹ PAN ನಮೂನೆಯಲ್ಲಿರದ ಮಾಹಿತಿಯನ್ನು ಭರ್ತಿ ಮಾಡಲಾಗಿದ್ದಿತು. PANನ ಅನುಪಸ್ಥಿತಿಯಲ್ಲಿ, ಇಲಾಖೆಯು ಆದಾಯ ತೆರಿಗೆ ಇಲಾಖೆಯ ಜೊತೆಯಲ್ಲಿ ಆದಾಯ ತೆರಿಗೆಯ ಬಾಧ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಆದ್ದರಿಂದ ಪಾವತಿಸಲಾದಂತಹ ವೃತ್ತಿಗಳ ಮೇಲಿನ ತೆರಿಗೆಯ ಯಥಾರ್ಥತೆಯನ್ನು ಅಥವಾ ಎಲ್ಲೆಲ್ಲಿ ವೃತ್ತಿಗಳ ಮೇಲಿನ ತೆರಿಗೆ ಪಾವತಿಯು ಬಾಕಿ ಇರುವುದೋ ಅಂತಹ ಕಡೆ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಲು ಹಾಗೂ ಅದನ್ನು ವಸೂಲಾತಿ ಮಾಡಲು ಸಾಧ್ಯವಾಗಿರಲಿಲ್ಲ.

ಈ ಪ್ರಕರಣಗಳನ್ನು ಆಗಸ್ಟ್ 2016ರಲ್ಲಿ ಸ್ಪಷ್ಟಪಡಿಸಿದನಂತರ, ಆದಾಯ ತೆರಿಗೆ ಇಲಾಖೆಯಿಂದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ ಹಾಗೂ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿರುವಂತಹ 85,776 ವ್ಯಕ್ತಿಗಳನ್ನು ಗುರುತಿಸಲಾಗಿದೆ ಎಂಬುದಾಗಿ ಇಲಾಖೆಯು ಅಕ್ಟೋಬರ್ 2016ರಲ್ಲಿ ನೀಡಿದಂತಹ ಉತ್ತರದಲ್ಲಿ ತಿಳಿಸಿತು. ಇವರುಗಳ ಪೈಕಿ, 29,970 ವ್ಯಕ್ತಿಗಳನ್ನು ದಾಖಲಿಸಿಕೊಳ್ಳಲಾಯಿತು ಹಾಗೂ ಅವರುಗಳಿಂದ ಬಡ್ಡಿಯ ಜೊತೆಯಲ್ಲಿ ₹ 6.71 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆಯನ್ನು ವಸೂಲಾತಿ ಮಾಡಲಾಯಿತು.

***ಶಿಫಾರಸ್ಸು 4: ವಾಣಿಜ್ಯ ತೆರಿಗೆ ಇಲಾಖೆಯು ಪ್ರಸ್ತುತ ಇರುವಂತಹ ಎಲ್ಲಾ ತೆರಿಗೆ ಪಾವತಿದಾರರುಗಳಿಗೆ ಸಂಬಂಧಿಸಿದಂತೆ PAN ವಿವರಗಳನ್ನು ಸೆರೆಹಿಡಿಯಬೇಕು ಹಾಗೂ ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ವಾಸ್ತವಿಕ ಬಾಧ್ಯತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಆದಾಯ ತೆರಿಗೆ ಇಲಾಖೆಯ ಜೊತೆ ಅಡ್ಡಪರಿಶೀಲನೆಯನ್ನು ಮಾಡಬೇಕು.***

## 2.4.11 ಇಲಾಖೆಯ ಜೊತೆಯಲ್ಲಿ ದಾಖಲಿಸಿಕೊಂಡಿರುವಂತಹ ತೆರಿಗೆ ಪಾವತಿದಾರರ ನಿರ್ವಹಣೆ

ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುತ್ತಿರುವ ಅಥವಾ ತೆರಿಗೆ ಪಾವತಿಯನ್ನು ಮಾಡದಿರುವಂತಹ ಯಾವುದೇ ವ್ಯಕ್ತಿ/ವ್ಯಕ್ತಿಗಳನ್ನು ತೆರಿಗೆ ಜಾಲಕ್ಕೆ ತರುವುದಕ್ಕಾಗಿ ಹಾಗೂ ದಾಖಲಿಸಿಕೊಳ್ಳಲಾದಂತಹ ವ್ಯಕ್ತಿಗಳನ್ನು ಸಮರ್ಪಕವಾಗಿ ವರ್ಗೀಕರಿಸಿರುವುದನ್ನು ಹಾಗೂ ಅವರುಗಳು ಸೂಕ್ತ/ಸಂಬಂಧಿತ ನಮೂದಿನ ಅಡಿಯಲ್ಲಿ ಅನ್ವಯಗೊಳ್ಳುವ ತೆರಿಗೆಯನ್ನು ಪಾವತಿಸುತ್ತಿರುವುದನ್ನು ಅಥವಾ ತೆರಿಗೆ ಪಾವತಿಯಿಂದ ವಿನಾಯಿತಿ ಕೋರಿ ಅವರುಗಳು ಮಾಡುವ ಕೋರಿಕೆಯ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ತೆರಿಗೆ ಪಾವತಿದಾರರುಗಳಿಗೆ ಸಂಬಂಧಿತ ಮಾಹಿತಿಯ ನಿರ್ವಹಣೆಯು ಅತ್ಯಗತ್ಯವಾಗಿರುತ್ತದೆ.

PELSoft ಹಾಗೂ ಇ–ಸಲ್ಲಿಕೆ ವ್ಯವಸ್ಥೆಗಳ (eFS) ದತ್ತಸಂಚಯಗಳನ್ನು ಲೆಕ್ಕಪರಿಶೋಧನೆಯು ವಿಶ್ಲೇಷಣೆ ಮಾಡಲಾಗಿ, ವಾಣಿಜ್ಯ ತೆರಿಗೆ ಇಲಾಖೆಯು ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ತನ್ನ ತೆರಿಗೆ ಪಾವತಿದಾರರುಗಳ ಪರಿಶೀಲಿಸಬಹುದಾದ ರೀತಿಯಲ್ಲಿ ಇರುವಂತಹ ಮಾಹಿತಿಯನ್ನು ಖಚಿತಪಡಿಸಿಕೊಂಡಿರಲಿಲ್ಲ ಹಾಗೂ ನಿರ್ವಹಿಸಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ತೆರಿಗೆ ಪಾವತಿದಾರರುಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆಯಲ್ಲಿನ ಕೆಲವು ಲೋಪದೋಷಗಳನ್ನು ಈ ಕೆಳಗೆ ತಿಳಿಸಲಾಗಿದೆ:

- ಉದ್ಯೋಗಿಗಳಿಂದ ತೆರಿಗೆಯನ್ನು ಉದ್ಯೋಗದಾತರ ಮೂಲಕ ವಸೂಲಾತಿ ಮಾಡಲಾಗುವುದಾದರೂ, ತೆರಿಗೆಯನ್ನು ಪಾವತಿಸುವವರ (ಉದ್ಯೋಗಿ) ವಿವರಗಳು ಲಭ್ಯವಿರುವುದಿಲ್ಲ;
- ಪಾಲುದಾರಿಕೆ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಪ್ರತಿಯೋರ್ವ ಪಾಲುದಾರರ ವಿವರಗಳನ್ನು ಪಡೆದುಕೊಂಡಿರಲಿಲ್ಲ ಹಾಗೂ ಕಾಲಾನುಕಾಲಕ್ಕೆ ಇಂದಿನದಿನದನ್ನಾಗಿ ಮಾಡಿರಲಿಲ್ಲ;
- ಕಂಪನಿಗಳಿಗೆ ಸಂಬಂಧಿಸಿದಂತೆ, ಶಾಖೆಗಳ ವಿವರಗಳನ್ನು ಕಾಲಾನುಕಾಲಕ್ಕೆ ಇಂದಿನದಿನದನ್ನಾಗಿ ಮಾಡಿರಲಿಲ್ಲ;
- ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ದಾಖಲಿಸಲಾಗಿದ್ದ ವ್ಯಕ್ತಿಗಳ ವಿಶಿಷ್ಟ ಗುರುತನ್ನು (PAN/ಆಧಾರ್ ಕಾರ್ಡು) ಪಡೆದುಕೊಂಡಿರಲಿಲ್ಲ ಹಾಗೂ ನಿರ್ವಹಿಸಿರಲಿಲ್ಲ.

ವಾಣಿಜ್ಯ ತೆರಿಗೆ ಇಲಾಖೆಯು ಯಾವುದೇ ವ್ಯಕ್ತಿಯನ್ನು ಗುರುತಿಸುವ ಸಂದರ್ಭದಲ್ಲಿ ಪ್ರತಿಯೋರ್ವ ತೆರಿಗೆ ಪಾವತಿದಾರರ ವಿಶಿಷ್ಟ ಗುರುತಿನ ಅನುಪಸ್ಥಿತಿಯಲ್ಲಿ, ಆ ವ್ಯಕ್ತಿಯು ಈಗಾಗಲೇ ಓರ್ವ ತೆರಿಗೆ ಪಾವತಿದಾರರಾಗಿರುವರೋ ಅಥವಾ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ. ಆದ್ದರಿಂದ, ತನ್ನ ಪ್ರಸ್ತುತ ಇರುವಂತಹ ತೆರಿಗೆ ಮೂಲದ ಬಗ್ಗೆ ಮಾಹಿತಿಯ ಕೊರತೆಯು ವಾಣಿಜ್ಯ ತೆರಿಗೆ ಇಲಾಖೆಗೆ, ನೋಟೀಸುಗಳನ್ನು ನೀಡುವ ಮೂಲಕ ಅಥವಾ ಅಂತಹ ವೃತ್ತಿಪರರು ತೊಡಗಿಸಿಕೊಂಡಿರುವಂತಹ ಸಂಸ್ಥೆಗಳು ಅಥವಾ ಸಂಘಗಳು ಅಥವಾ ಸಂಘಟನೆಗಳ ಮೂಲಕ ಸಮನ್ವಯಗೊಳಿಸುವ ಮೂಲಕ ವೃತ್ತಿಪರರನ್ನು ತಲಪುವ ಮೂಲಕ ತನ್ನ ತೆರಿಗೆ ಮೂಲವನ್ನು ವಿಸ್ತೃತಗೊಳಿಸುವ ಪ್ರಯತ್ನಗಳಿಗೆ ಪ್ರಮುಖ ಸವಾಲುಗಳನ್ನು ಒಡ್ಡುತ್ತದೆ.

ಮೇಲೆ ತಿಳಿಸಲಾದಂತಹ ವೃತ್ತಿಗಳ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ತಿಳಿಸಲಾಗಿರುವ ಕೊರತೆಗಳಿಗೆ ಸಂಬಂಧಿಸಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಸವಿವರ ಅಂಶಗಳು ಈ ಕೆಳಗಿನಂತಿವೆ:

## 2.4.12 ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಣಿ/ದಾಖಲಾತಿ ಮಾಡಿಸಿಕೊಂಡಿರುವಂತಹ ವ್ಯಕ್ತಿಗಳು ಸಂಸ್ಥೆಗಳಿಂದ ಬರಬೇಕಾದ ವೃತ್ತಿಗಳ ಮೇಲಿನ ತೆರಿಗೆ ಬಾಕಿಗಳ ಅಸಮರ್ಪಕ ಮೇಲ್ವಿಚಾರಣೆ

ಇಲಾಖೆಯ ನಿಯಂತ್ರಣದಲ್ಲಿಯೇ ಇರುವಂತಹ ಕರದಾತರ ಅನುಸರಣಾ ಕ್ರಮಗಳ ಮಟ್ಟವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ, ಇಲಾಖೆಯು ತನ್ನಲ್ಲಿಯೇ ಲಭ್ಯವಿರುವಂತಹ ಮಾಹಿತಿಯನ್ನು ಬಳಸಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ರ ಅಡಿಯಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡಿರುವಂತಹ ಕರದಾತರುಗಳ ಮಾಹಿತಿಯನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು. ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ:

### 2.4.12.1 ಕಮೌವತೆ ಅಧಿನಿಯಮದ ಅಡಿಯಲ್ಲಿ ವರ್ತಕರು/ಗುತ್ತಿಗೆದಾರರು ಎಂಬುದಾಗಿ ನೋಂದಣಿ ಮಾಡಿಸಿಕೊಂಡಿದ್ದ ವ್ಯಕ್ತಿಗಳಿಂದ ವೃತ್ತಿಗಳ ಮೇಲಿನ ತೆರಿಗೆಯನ್ನು ವಸೂಲಾತಿ ಮಾಡದಿದ್ದುದು/ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಿದ್ದುದು

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮ, 1976ರ ಷೆಡ್ಯೂಲಿನಲ್ಲಿನ ನಮೂದು ಕ್ರಮ ಸಂಖ್ಯೆ 10 ಮತ್ತು 13ರ ಅಡಿಯಲ್ಲಿ, ಕಮೌವತೆ ಅಧಿನಿಯಮ ಅಥವಾ ಕರ್ನಾಟಕ ಮಾರಾಟಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ಗುತ್ತಿಗೆದಾರರುಗಳು ಅಥವಾ ವರ್ತಕರುಗಳು ಎಂಬುದಾಗಿ ನೋಂದಣಿ ಮಾಡಿಸಿಕೊಂಡಿದ್ದಂತಹ ವೈಯಕ್ತಿಕ ವ್ಯಕ್ತಿಗಳು, ಸಂಬಂಧಿತ ಹಣಕಾಸು

ಸಾಲಿನಲ್ಲಿ ಅವರುಗಳು ಸಾಧಿಸಿದ್ದಂತಹ ವಹಿವಾಟನ್ನು ಅವಲಂಭಿಸಿದಂತೆ ವರ್ಷ ಒಂದಕ್ಕೆ ₹ 1,000, ₹ 1,500 ಅಥವಾ ₹ 2,500 ದರದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿರುತ್ತಾರೆ.

ವರ್ತಕರುಗಳ ವಾರ್ಷಿಕ ವಹಿವಾಟು ಇ–ಸಲ್ಲಿಕೆ ತಂತ್ರಾಂಶ ವ್ಯವಸ್ಥೆಯಲ್ಲಿ (eFS) ಲಭ್ಯವಿದ್ದಿತು. ಪ್ರತಿಯೋರ್ವ ವರ್ತಕರೂ ವೃತ್ತಿಗಳ ಮೇಲಿನ ತೆರಿಗೆಯನ್ನು PELSoft ಮೂಲಕ ಆನ್‌ಲೈನ್ ಪಾವತಿ ಮಾಡಬೇಕಿದ್ದಿತು. ಏಪ್ರಿಲ್ 2011ರಿಂದ ಮಾರ್ಚ್ 2016ರ ಅವಧಿಯಲ್ಲಿ ಒಂದರಿಂದ ಐದು ವರ್ಷಗಳ ಅವಧಿಗೆ 14,15,155 ವಾರ್ಷಿಕ ವೃತ್ತಿಗಳ ಮೇಲಿನ ತೆರಿಗೆ ಸಲ್ಲಿಕೆಗಳನ್ನು ಸಲ್ಲಿಸಲು ಬಾಧ್ಯರಾಗಿದ್ದಂತಹ 4,65,117 ಮಾಲೀಕತ್ವ ಸಂಸ್ಥೆಗಳು ಇದ್ದವು ಹಾಗೂ ಅವುಗಳು ಸಲ್ಲಿಸಿದ್ದಂತಹ ಸಲ್ಲಿಕೆಗಳ ಮೇಲೆ ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಲು ಬಾಧ್ಯರಿದ್ದರು. ಲೆಕ್ಕಪರಿಶೋಧನೆಯಲ್ಲಿ ಮಾಡಲಾದಂತಹ ವಿಶ್ಲೇಷಣೆಯು ಈ ವಲಯದ ಅಡಿಯಲ್ಲಿ ಈ ಕೆಳಗಿನ ಲೋಪದೋಷಗಳನ್ನು ತೋರಿಸಿಕೊಟ್ಟಿತು:

- ಒಂದರಿಂದ ಐದು ವಾರ್ಷಿಕ ಸಲ್ಲಿಕೆಗಳನ್ನು ಸಲ್ಲಿಸುವಲ್ಲಿ ಹಾಗೂ ಅದರ ತತ್ಪರಿಣಾಮವಾಗಿ ವೃತ್ತಿಗಳ ಮೇಲಿನ ತೆರಿಗೆ ಪಾವತಿಯಲ್ಲಿ ತಪ್ಪಿತಸ್ತರಾಗಿದ್ದಂತಹ 2,10,847 ವರ್ತಕರುಗಳಿದ್ದರು (ಶೇಕಡಾ 45.33). ಈ ವರ್ತಕರು ಸಾಧಿಸಿದ್ದಂತಹ ವಾರ್ಷಿಕ ವಹಿವಾಟುಗಳು ₹ 0.02 ಕೋಟಿಯಿಂದ ₹ 523.44 ಕೋಟಿಯವರೆಗೆ ಆಗಿದ್ದವು. ತಪ್ಪಿತಸ್ತ ವರ್ತಕರಿಂದ ಬಾಕಿಯಿದ್ದಂತಹ ವೃತ್ತಿಗಳ ಮೇಲಿನ ತೆರಿಗೆ ಮೊತ್ತವು ₹ 48.78 ಕೋಟಿ ಆಗಿದ್ದಿತು. ಇವರುಗಳ ಪೈಕಿ, ₹ 2.85 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆ ಪಾವತಿಯಿಂದ ತಪ್ಪಿತಸ್ತರಾಗಿದ್ದಂತಹ 19,699 ವರ್ತಕರುಗಳು ತದನಂತರ ತಮ್ಮ TIN ನೋಂದಣಿಯನ್ನು ರದ್ದುಗೊಳಿಸಿಕೊಂಡಿದ್ದರು.
- 2011–12ರಿಂದ 2015–16 ಸಾಲುಗಳಿಗೆ 89,473 ವಾರ್ಷಿಕ ವೃತ್ತಿಗಳ ಮೇಲಿನ ತೆರಿಗೆ ಸಲ್ಲಿಕೆಗಳಲ್ಲಿ 69,654 ವರ್ತಕರುಗಳು ₹ 10.69 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆ ಪಾವತಿ ಮಾಡಿದ್ದರು. ಆದಾಗ್ಯೂ, ಈ ವರ್ತಕರುಗಳು ಸಾಧಿಸಿದ್ದಂತಹ ವಹಿವಾಟಿನ ಆಧಾರದ ಮೇರೆಗೆ ಮೇಲೆ ತಿಳಿಸಲಾದಂತಹ ಅವಧಿಗೆ ಒಟ್ಟಾರೆ ತೆರಿಗೆಯು ₹ 18.26 ಕೋಟಿಯಷ್ಟು ಆಗುತ್ತದೆ. ತತ್ಪರಿಣಾಮವಾಗಿ, ₹ 7.57 ಕೋಟಿ ಮೊತ್ತದಷ್ಟು ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಲಾಗಿದ್ದಿತು.

PELSoft ಹಾಗೂ eFS ನಡುವೆ ಸಂಪರ್ಕವಿಲ್ಲದಿರುವುದರಿಂದ, ಎರಡೂ ದತ್ತಸಂಚಯಗಳೂ ವಾಣಿಜ್ಯ ತೆರಿಗೆ ಇಲಾಖೆಯ ನಿಯಂತ್ರಣದಲ್ಲಿದ್ದರೂ ಸಹ, ತೆರಿಗೆ ಪಾವತಿಯಿಂದ ತಪ್ಪಿತಸ್ತರಾಗುವ ಹಾಗೂ ಕಡಿಮೆ ಪ್ರಮಾಣದಲ್ಲಿ ಪಾವತಿಸುವುದರ ಬಗ್ಗೆ ಮಾಹಿತಿಯನ್ನು PELSoft ಸೆಳೆದುಕೊಳ್ಳುವುದಿಲ್ಲ. ಇ–ಸಲ್ಲಿಕೆ (*eFS*) ದತ್ತಸಂಚಯದಿಂದ ವಾರ್ಷಿಕ ವಹಿವಾಟನ್ನು ಗಮನಿಸುವುದಕ್ಕಾಗಿ ಹಾಗೂ ಒಂದು ನಿರ್ದಿಷ್ಟ ಹಂತದಲ್ಲಿ ವಸೂಲಾತಿಗಾಗಿ ಬಾಕಿಯಿರುವಂತಹ ವೃತ್ತಿಗಳ ಮೇಲಿನ ತೆರಿಗೆಯನ್ನು ಗಮನಿಸುವುದಕ್ಕಾಗಿ PELSoft ನಲ್ಲಿ ಸೂಕ್ತ ನಿಯಂತ್ರಣಗಳು ಸರ್ಕಾರಕ್ಕೆ ಸಮರ್ಪಕ ರಾಜಸ್ವ/ವರಮಾನದ ಸಂಗ್ರಹಣೆಯನ್ನು ಖಚಿತಪಡಿಸಿಕೊಳ್ಳುತ್ತಿದ್ದಿತು.

ನಿರ್ಗಮನ ಸಭೆಯಲ್ಲಿ, ಅವರುಗಳ ಅಧಿಕಾರ ವ್ಯಾಪ್ತಿಯಲ್ಲಿರುವಂತಹ ವರ್ತಕರುಗಳಿಂದ ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸುವಂತೆ ಒತ್ತಾಯಿಸಿ ತಗಾದೆಯನ್ನು ಸೃಷ್ಟಿಸುವ ಸಲುವಾಗಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳುವಂತೆ ಸಂಬಂಧಿತ ಸ್ಥಳೀಯ ಮೌವತೆ ಕಚೇರಿಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ ಎಂಬುದಾಗಿ ವಾಣಿಜ್ಯ ತೆರಿಗೆ ಇಲಾಖೆಯು ತಿಳಿಸಿತು.

***ಶಿಫಾರಸ್ಸು 5: ಇ–ಸಲ್ಲಿಕೆ ವ್ಯವಸ್ಥೆ (eFS) ಅಡಿಯಲ್ಲಿ ಘೋಷಿಕೊಳ್ಳಲಾಗಿರುವಂತಹ ವಹಿವಾಟನ್ನು ಖಚಿತಪಡಿಸಿಕೊಂಡನಂತರ ವೃತ್ತಿಗಳ ಮೇಲಿನ ತೆರಿಗೆಯನ್ನು ವಿಧಿಸುವುದನ್ನು ಮತ್ತು ಅದನ್ನು ಪಾವತಿಸುವಂತೆ ತಗಾದೆ ಸೃಷ್ಟಿಸುವುದನ್ನು ಸ್ವಯಂಚಾಲಿತಗೊಳಿಸುವ ರೀತಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು, PELSoft ಮತ್ತು ಇ–ಸಲ್ಲಿಕೆ ವ್ಯವಸ್ಥೆ (eFS)ನಡುವೆ ಸಂಪರ್ಕವನ್ನು ಸ್ಥಾಪಿಸಬೇಕು ಹಾಗೂ ವೃತ್ತಿಗಳ ಮೇಲಿನ ತೆರಿಗೆ ಪಾವತಿಯಲ್ಲಿ ತಪ್ಪಿತಸ್ತಗೊಂಡಲ್ಲಿ ಅದನ್ನು ಪತ್ತೆಹಚ್ಚುವ ಹಾಗೂ ವರ್ತಕರು ಮತ್ತು ಕರನಿರ್ಧಾರಣಾ ಅಧಿಕಾರಿಗಳನ್ನು ಜಾಗೃತಗೊಳಿಸುವ ರೀತಿಯಲ್ಲಿ PELSoftನಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಬೇಕು.***

### 2.4.12.2 ಮೌವತೆ ಅಡಿಯಲ್ಲಿ ವೃತಿ ತೆರಿಗೆ ಬಾಧ್ಯತೆಯಿರದ್ದಿದ ನೋಂದಣಿಯಾಗಿರುವ ಮಾಲೀಕರುಗಳಿಂದ ವೃತ್ತಿಗಳ ಮೇಲಿನ ತೆರಿಗೆಯನ್ನು ಸಂಗ್ರಹಿಸಿದ್ದುದು

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮದ ಪರಿಚ್ಛೇದ 3ರ ಅಡಿಯಲ್ಲಿನ ಷರತ್ತು (1)ರ ಅಡಿಯಲ್ಲಿ ಅರವತ್ತು (31 ಮಾರ್ಚ್ 2015ರವರೆಗೆ ಅರವತ್ತ–ಐದು) ವರ್ಷಗಳ ವಯಸ್ಸು ಆಗಿರುವಂತಹ ವ್ಯಕ್ತಿಗಳು ಯಾವುದೇ ತೆರಿಗೆಯನ್ನೂ ಪಾವತಿಸಬೇಕಾಗಿರುವುದಿಲ್ಲ.

ಆದಾಗ್ಯೂ, ಏಪ್ರಿಲ್ 2011 ಹಾಗೂ ಮಾರ್ಚ್ 2016ರ ನಡುವಿನ ಅವಧಿಯಲ್ಲಿ ಮೌವತೆ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿದ್ದಂತಹ 10,115 ಮಾಲೀಕರುಗಳು, ಅಧಿನಿಯಮದ ಮೇಲೆ ತಿಳಿಸಲಾದಂತಹ ಷರತ್ತಿನ ಅನುಸಾರ ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಬೇಕಿರಲಿಲ್ಲವಾದರೂ ₹ 3.30 ಕೋಟಿ ಮೊತ್ತದಷ್ಟು ವೃತ್ತಿ ತೆರಿಗೆಯನ್ನು

ಪಾವತಿಸಿದ್ದರು. ಆ ರೀತಿ ಮಾಡಲಾದ ವಸೂಲಾತಿಯು ಪಾವತಿಸಲು ಬಾಕಿಯಿರಲಿಲ್ಲ ಮತ್ತು ಆದ್ದರಿಂದ ಸಂಬಂಧಿತ ವ್ಯಕ್ತಿಗಳಿಗೆ ಮರುಪಾವತಿಸಬೇಕಾಗಿದೆ.

eFSನ ದತ್ತಸಂಚಯದಲ್ಲಿ ವೈಯಕ್ತಿಕ ವ್ಯಕ್ತಿಗಳ ವಯಸ್ಸಿನ ಮಾಹಿತಿಯು ಲಭ್ಯವಿರುವುದಾದರೂ, ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ವಿನಾಯಿತಿಯಿರುವಂತಹ ವ್ಯಕ್ತಿಗಳಿಂದ ಯಾವುದೇ ಪಾವತಿಗಳನ್ನೂ ಸ್ವೀಕರಿಸಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಅದನ್ನು ಗಮನಿಸುವ ಸಲುವಾಗಿ PELSoft ಅನ್ನು ವಿನ್ಯಾಸಗೊಳಿಸಿರುವುದಿಲ್ಲ.

ಈ ಪ್ರಕರಣಗಳನ್ನು ಆಗಸ್ಟ್ 2016ರಲ್ಲಿ ಸ್ಪಷ್ಟಪಡಿಸಿದನಂತರ, ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮವನ್ನು ಪರಿಷ್ಕರಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲಿಸುವ ಸಲುವಾಗಿ ವಿಷಯವನ್ನು ಸಮಿತಿಯ ಮುಂದೆ ಇಡಲಾಗಿದೆ ಎಂಬುದಾಗಿ ವಾಣಿಜ್ಯ ತೆರಿಗೆ ಇಲಾಖೆಯು ಅಕ್ಟೋಬರ್ 2016ರಲ್ಲಿ ನೀಡಿದ ತನ್ನ ಉತ್ತರದಲ್ಲಿ ತಿಳಿಸಿತು.

***ಶಿಫಾರಸ್ಸು 6: ಇ–ಸಲ್ಲಿಕೆ ವ್ಯವಸ್ಥೆಯ (eFS) ನೋಂದಣಿ ಟೇಬಲ್ಲಿನಲ್ಲಿ[12] ನಮೂದಿಸಲಾಗಿರುವಂತಹ ಹುಟ್ಟಿದ ದಿನಾಂಕದಿಂದ ಲೆಕ್ಕಹಾಕಲಾಗಿರುವಂತೆ ಅವರುಗಳ ವಯಸ್ಸಿನ ಆಧಾರದ ಮೇರೆಗೆ ರಿಯಾಯಿತಿಯನ್ನು ಹೊಂದಿರುವ ವ್ಯಕ್ತಿಗಳು ತೆರಿಗೆಯನ್ನು ಆನ್‌ಲೈನ್ ಪಾವತಿ ಮಾಡುವುದನ್ನು ತಡೆಯುವುದಕ್ಕಾಗಿ PELSoftನಲ್ಲಿ ಅಗತ್ಯ ನಿಯಂತ್ರಣಗಳನ್ನು ಸ್ಥಾಪಿಸಬೇಕು.***

### 2.4.13 ಕರ್ನಾಟಕ ಮೌಲ್ಯವರ್ಧಿತ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವ ಕಂಪನಿಗಳಿಂದ ವೃತ್ತಿಗಳ ಮೇಲಿನ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮ, 1976ರ ಷೆಡ್ಯೂಲಿನಲ್ಲಿನ ನಮೂದು ಕ್ರಮ ಸಂಖ್ಯೆ 25ರ ಅಡಿಯಲ್ಲಿ, ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವ ಹಾಗೂ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವಂತಹ ಕಂಪನಿಗಳು ವರ್ಷ ಒಂದಕ್ಕೆ ₹ 2,500/- ದರದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯವಾಗಿರುತ್ತವೆ.

ಅಲ್ಲದೆಯೇ, ಅಧಿನಿಯಮದ ಷೆಡ್ಯೂಲಿನ ಅಡಿಯಲ್ಲಿನ ವಿವರಣೆ VIರ ಪ್ರಕಾರ, 'ಷೆಡ್ಯೂಲಿನ ಯಾವುದೇ ಬಾಬಿನಲ್ಲಿ ನಮೂದಿಸಲ್ಪಟ್ಟಿರುವಂತಹ ಯಾವುದೇ ಸ್ವಯಂ–ಉದ್ಯೋಗದ ಕರದಾತರ ಪ್ರತಿಯೊಂದು ಶಾಖೆಯನ್ನೂ ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ವೃತ್ತಿಗಳ ಮೇಲಿನ ತೆರಿಗೆ ಪಾವತಿಯನ್ನು ವಿಧಿಸುವಿಕೆಯ ಉದ್ದೇಶಕ್ಕಾಗಿ ಓರ್ವ ಪ್ರತ್ಯೇಕ ಕರದಾತ ಎಂಬುದಾಗಿ ಭಾವಿಸತಕ್ಕದ್ದು'. ಆದ್ದರಿಂದ, ಅಧಿನಿಯಮದ ಅಡಿಯಲ್ಲಿ, ಕಂಪನಿಗಳು ಹಾಗೂ ಅವುಗಳ ಶಾಖೆಗಳನ್ನು ಪ್ರತ್ಯೇಕ ಕರದಾತರುಗಳು ಎಂಬುದಾಗಿ ಭಾವಿಸಲಾಗುವುದು ಹಾಗೂ ಕಾರ್ಯನಿರತ ಪ್ರತಿಯೊಂದು ಶಾಖೆಯಿಂದಲೂ ತೆರಿಗೆಯನ್ನು ವಸೂಲಾತಿ ಮಾಡಬೇಕಾಗುವುದು.

**2.4.13.1** 31 ಮಾರ್ಚ್ 2016ರಲ್ಲಿದ್ದಂತೆ ಮೌಲ್ಯವರ್ಧಿತ ಅಡಿಯಲ್ಲಿ ನೋಂದಾಯಿತ 29,981 ಕಂಪನಿಗಳಿದ್ದವು (ಪಬ್ಲಿಕ್ ಲಿಮಿಟೆಡ್ ಹಾಗೂ ಖಾಸಗಿ ನಿಯಮಿತ ಕಂಪನಿಗಳು). ಏಪ್ರಿಲ್ 2011ರಿಂದ ಮಾರ್ಚ್ 2016ರ ನಡುವೆ ಒಂದರಿಂದ ಐದು ವರ್ಷಗಳವರೆಗೆ ವೃತ್ತಿಗಳ ಮೇಲಿನ ತೆರಿಗೆಯ ವಾರ್ಷಿಕ ಪಾವತಿಗಳಲ್ಲಿ ತಪ್ಪಿತಸ್ತಗೊಂಡಿದ್ದಂತಹ 13,963 ಕಂಪನಿಗಳಿದ್ದವು ಹಾಗೂ 3,904 ಕಂಪನಿಗಳು ತಮ್ಮ 7,247 ವಾರ್ಷಿಕ ಸಲ್ಲಿಕೆಗಳಲ್ಲಿ ವೃತ್ತಿಗಳ ಮೇಲಿನ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ತೋರಿಸಿಕೊಟ್ಟಿತು. ವಸೂಲಾತಿಯಾಗದಿದ್ದಂತಹ ವೃತ್ತಿಗಳ ಮೇಲಿನ ತೆರಿಗೆಯ ಮೊತ್ತವು ₹ 8.92 ಕೋಟಿ ಆಗಿದ್ದಿತು. ಇದು, ಅವುಗಳ ಶಾಖೆಗಳಿಗೆ ಸಂಬಂಧಿಸಿದಂತೆ ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸದಿದ್ದಂತಹ ಅಥವಾ ಸಂಬಂಧಿತ ಕಂಪನಿಗಳು ವೃತ್ತಿಗಳ ಮೇಲಿನ ತೆರಿಗೆಯ ಸ್ವಯಂ ನಿರ್ಧಾರಣೆಯನ್ನು ನಮೂದು 25ರ ಅಡಿಯಲ್ಲಿ ಅವುಗಳಿಗೆ ಅನ್ವಯಗೊಳ್ಳುವಂತಹ ನಿರ್ದಿಷ್ಟ ದರಗಳಿಗೆ ಬದಲಾಗಿ ಮಾಲಿಕತ್ವದ ಕಂಪನಿಗಳಿಗೆ ಅನ್ವಯಗೊಳ್ಳುವ ದರಗಳಲ್ಲಿ ತಪ್ಪಾಗಿ ಸಲ್ಲಿಸಿದ್ದರ ಕಾರಣದಿಂದ ಸಂಭವಿಸಿದ್ದಿತು. ಅಂತಹ ತಪ್ಪುಗಳನ್ನು ಕಂಡುಹಿಡಿಯುವ ರೀತಿಯಲ್ಲಿ ಹಾಗೂ ಕರದಾತರು ಮತ್ತು ಸ್ಥಳೀಯ ಮೌಲ್ಯವರ್ಧಿತ ಕಚೇರಿ, ಇಬ್ಬರನ್ನೂ ಅಗತ್ಯ ಪರಿಹಾರಕ ಕ್ರಮಗಳಿಗಾಗಿ ಎಚ್ಚರಿಸುವ ರೀತಿಯಲ್ಲಿ PELSoft ಅನ್ನು ವಿನ್ಯಾಸಗೊಳಿಸಿರಲಿಲ್ಲ ಎಂಬುದನ್ನೂ ಸಹ ಇದು ತೋರಿಸುತ್ತಿದ್ದಿತು.

---

[12] ವರ್ತಕರುಗಳು, ಕರ್ನಾಟಕ ಮೌಲ್ಯವರ್ಧಿತ ಅಧಿನಿಯಮ, 2003ರ ಅಡಿಯಲ್ಲಿ ನೋಂದಣಿಗಾಗಿ ನಮೂನೆ ಮೌಲ್ಯವರ್ಧಿತ–1ರಲ್ಲಿ, ಅದರಲ್ಲಿ ಕೇಳಲಾಗಿರುವ ಎಲ್ಲಾ ವಿವರಗಳನ್ನು ಒದಗಿಸುವ ಮೂಲಕ ಅರ್ಜಿಯನ್ನು ಸಲ್ಲಿಸುವ ಅಗತ್ಯತೆಯಿರುತ್ತದೆ. ಅರ್ಜಿದಾರರ ಹೆಸರು, ವಿಳಾಸ, ಹುಟ್ಟಿದ ದಿನಾಂಕ, ವ್ಯಾಪಾರವ್ಯವಹಾರದ ಸ್ವರೂಪ, ಇತ್ಯಾದಿ ಮಾಹಿತಿಯನ್ನು ಅರ್ಜಿದಾರರು ಭರ್ತಿ ಮಾಡುವರು. ಅಂತಹ ವಿವರಗಳನ್ನು eFSನ ನೋಂದಣಿ ಟೇಬಲ್ಲಿನಲ್ಲಿ ಊಡಿಕೆ ಮಾಡಲಾಗುವುದು.

**2.4.13.2** ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ದಾಖಲಿಸಿಕೊಂಡಿದ್ದ ಹಾಗೂ ಕಡೆಯ ಪಕ್ಷ ಒಂದು ಹೆಚ್ಚುವರಿ ವ್ಯಾಪಾರ ಸ್ಥಳವನ್ನು ಹೊಂದಿದ್ದ 693 ಕಂಪನಿಗಳಿಗೆ ಸಂಬಂಧಿಸಿದಂತೆ 2011–12ರಿಂದ 2015–16 ಸಾಲುಗಳಿಗೆ ಅವುಗಳ 1,039 ಸಲ್ಲಿಕೆಗಳಲ್ಲಿ ವಸೂಲಾತಿಗೆ ಬಾಕಿಯಿದ್ದಂತಹ ವೃತ್ತಿಗಳ ಮೇಲಿನ ತೆರಿಗೆಯನ್ನು ₹ 93.18 ಲಕ್ಷ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ಪಾವತಿಸಿದ್ದವು ಎಂಬುದನ್ನು ಗಮನಿಸಲಾಯಿತು. ಇದು, ಆಗಿದ್ದಂತಹ ಲೋಪದೋಷಗಳು, ತಮ್ಮ ಶಾಖೆಗಳ ಮೇಲೆ ಪಾವತಿಸಲು ಬಾಕಿಯಿರುವ ವೃತ್ತಿಗಳ ಮೇಲಿನ ತೆರಿಗೆಯನ್ನು ಪರಿಗಣಿಸದೆಯೇ ಸ್ವಯಂ–ನಿರ್ಧಾರಣೆಗಳನ್ನು ತಪ್ಪಾಗಿ ಮಾಡಿದ್ದುದು ಅಥವಾ ತಪ್ಪು ದರಗಳಲ್ಲಿ ತೆರಿಗೆಯನ್ನು ಪಾವತಿಸಿದ್ದ ಕಾರಣಗಳಿಂದ ಸಂಭವಿಸಿದ್ದಿತು.

ರಾಜ್ಯದಲ್ಲಿ ದಾಖಲಾತಿಯಾಗಿರುವಂತಹ ಕಂಪನಿಗಳು ಹೊಂದಿರುವ ಶಾಖೆಗಳ ಸಂಖ್ಯೆಯ ಬಗ್ಗೆ ಮಾಹಿತಿಯನ್ನು ವಾಣಿಜ್ಯ ತೆರಿಗೆ ಇಲಾಖೆಯು ತನ್ನ ನೋಂದಣಿ ದಾಖಲೆಗಳಲ್ಲಿ ಇಂದಿನದಿನದನ್ನಾಗಿ ಮಾಡಿರಲಿಲ್ಲ ಎಂಬುದನ್ನೂ ಸಹ ಗಮನಿಸಲಾಯಿತು. ತತ್ಪರಿಣಾಮವಾಗಿ, ಅವುಗಳ ಪ್ರಾರಂಭಿಕ ದಾಖಲಾತಿಯ ಸಮಯದಲ್ಲಿ ಕಂಪನಿಗಳು ಹೊಂದಿದ್ದ ಶಾಖೆಗಳ ಸಂಖ್ಯೆಗಳ ಮೇಲೆ ಬಾಕಿಯಿರುವಂತಹ ವೃತ್ತಿಗಳ ಮೇಲಿನ ತೆರಿಗೆಯನ್ನು ಮಾತ್ರ ವಾಣಿಜ್ಯ ತೆರಿಗೆ ಇಲಾಖೆಯು ಗಮನಿಸಬಹುದು. ಅವುಗಳ ದಾಖಲಾತಿಯ ಸಮಯದಲ್ಲಿ ನಾಲ್ಕು ಕಂಪನಿಗಳು ಘೋಷಿಸಿಕೊಂಡಿದ್ದಂತಹ ಐದು ಶಾಖೆಗಳಿಗೆ (**ಅನುಬಂಧ 'ಎ'**ನಲ್ಲಿ ವಿವರಗಳನ್ನು ನೀಡಲಾಗಿದೆ) ಪ್ರತಿಯಾಗಿ, ರಾಜ್ಯದಲ್ಲಿ 78 ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಾಣಿಜ್ಯ ತೆರಿಗೆ ಇಲಾಖೆಯ ಜೊತೆ ದಾಖಲಾತಿ/ನೋಂದಣಿ ಮಾಡಿಸಿಕೊಂಡಿದ್ದಂತಹ ಕಂಪನಿಗಳು ಕಾಲಾನುಕಾಲಕ್ಕೆ ಪ್ರಾರಂಭಿಸಿದ್ದಂತಹ ಹೊಸ ಶಾಖೆಗಳ ಬಗ್ಗೆ ಮಾಹಿತಿಯನ್ನು ಇಂದಿನದಿನದನ್ನಾಗಿ ಮಾಡುವುದಕ್ಕಾಗಿ ಒಂದು ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿನ ವಿಫಲತೆಯು ಪ್ರತೀ ವರ್ಷವೂ ಶಾಖೆಗಳಿಂದ ವಸೂಲಾತಿ ಮಾಡಲು ಬಾಕಿಯಿದ್ದಂತಹ ವೃತ್ತಿಗಳ ಮೇಲಿನ ತೆರಿಗೆ ರಾಜಸ್ವ/ವರಮಾನವನ್ನು ಬಿಟ್ಟುಕೊಡುವಲ್ಲಿ ಪರಿಣಮಿಸಿತು.

***ಶಿಫಾರಸ್ಸು 7: ತೆರಿಗೆಯ ನಿರ್ಧಾರಣೆ ಮತ್ತು ಪಾವತಿಗಾಗಿ ತಗಾದೆಯನ್ನು ಸೃಷ್ಟಿಸುವ ಉದ್ದೇಶಕ್ಕಾಗಿ, ಕರದಾತರ ಮಾದರಿಯ ಆಧಾರದ ಮೇರೆಗೆ ವೃತ್ತಿಗಳ ಮೇಲಿನ ತೆರಿಗೆ ಪಾವತಿಗಾಗಿ ತಗಾದೆಯನ್ನು ಸ್ವಯಂಚಾಲಿತಗೊಳಿಸುವ ಹಾಗೂ ಕರದಾತರು ಹೊಂದಿರುವಂತಹ ಶಾಖೆಗಳ ಸಂಖ್ಯೆ (ಇ–ಸಲ್ಲಿಕೆ ವ್ಯವಸ್ಥೆಯ (eFS) ನೋಂದಣಿ ಟೇಬಲ್ಲಿನಲ್ಲಿ ಈಗಾಗಲೇ ಸಂಗ್ರಹಿಸಿಟ್ಟಿರುವ) ಮುಂತಾದ ಪ್ರಮುಖ ಮಾಹಿತಿಯನ್ನು ಸೇರ್ಪಡೆಗೊಳಿಸುವ ಸಲುವಾಗಿ PELSoft ಅನ್ನು ಸೂಕ್ತ ರೀತಿಯಲ್ಲಿ ಮಾರ್ಪಾಡು ಮಾಡಬೇಕು.***

## 2.4.14 ಕರ್ನಾಟಕ ಮೌವತೆ ಅಡಿಯಲ್ಲಿ ನೋಂದಣಿಯಾಗಿರುವ ಪಾಲುದಾರಿಕೆ ಸಂಸ್ಥೆಗಳಿಂದ ವೃತ್ತಿಗಳ ಮೇಲಿನ ತೆರಿಗೆ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ಸೃಷ್ಟಿಸಿದ್ದುದು

ಪಾಲುದಾರಿಕೆ ಸಂಸ್ಥೆಗಳು ವಿವಿಧ ವೃತ್ತಿಗಳ ಅಡಿಯಲ್ಲಿ ಬರುತ್ತವೆ ಮತ್ತು ಆದ್ದರಿಂದ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮ, 1976ರ ಷೆಡ್ಯೂಲಿನ[13] ಅಡಿಯಲ್ಲಿನ ವಿವರಣೆಗಳು IV ಮತ್ತು Vರ ಜೊತೆಯಲ್ಲಿ ಓದಲ್ಪಡುವಂತಹ ಷೆಡ್ಯೂಲಿನಲ್ಲಿನ ನಮೂದು ಕ್ರಮ ಸಂಖ್ಯೆ 10 (ಕಾಮಗಾರಿಗಳ ಗುತ್ತಿಗೆಯನ್ನು ಕಾರ್ಯಗತಗೊಳಿಸುವ ಗುತ್ತಿಗೆದಾರರು), 13 (ಮೌವತೆ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವ ಅಥವಾ ನೋಂದಣೀ ಮಾಡಿಸಿಕೊಳ್ಳಲು ಬಾಧ್ಯರಾಗಿರುವ) ಹಾಗೂ 26ರ (ಸಂಸ್ಥೆಗಳ ಪಾಲುದಾರರು) ಅಡಿಯಲ್ಲಿ, ನಿರ್ವಹಿಸಲ್ಪಡುತ್ತವೆ.

ವಿವರಣೆಗಳ ಜೊತೆಯಲ್ಲಿನ ಈ ವಿವಿಧ ನಮೂದುಗಳ ಆಧಾರದ ಮೇರೆಗೆ, ಒಂದು ಪಾಲುದಾರಿಕೆ ಸಂಸ್ಥೆಯ ವಹಿವಾಟು ₹ 25 ಲಕ್ಷಕ್ಕಿಂತ ಕಡಿಮೆಯಾದಾಗಲೆಲ್ಲಾ, ಅದು ನಮೂದು 26ರ ಅಡಿಯಲ್ಲಿ ಹಾಗೂ ₹ 25 ಲಕ್ಷ ಮೀರಿದಲ್ಲಿ 10 ಅಥವಾ 13, ಯಾವುದು ಅನ್ವಯವೋ ಅದರ ಅಡಿಯಲ್ಲಿ ತೆರಿಗೆಯನ್ನು ಪಾವತಿಸಬೇಕು.

---

[13] ನಮೂದುಗಳು 10 ಮತ್ತು 13ರ ಅಡಿಯಲ್ಲಿ ತೆರಿಗೆಯನ್ನು ಈ ಕೆಳಗೆ ವಿವರಿಸಿರುವಂತೆ ವರ್ತಕರ ವಾರ್ಷಿಕ ವಹಿವಾಟಿನ ಆಧಾರದ ಮೇರೆಗೆ ನಿಗದಿಗೊಳಿಸಲಾಗುತ್ತದೆ

- ₹2 ಲಕ್ಷಕ್ಕಿಂತ ಕಡಿಮೆ - ಯಾವುದೇ ತೆರಿಗೆ ಮೊತ್ತವೂ ಇರುವುದಿಲ್ಲ–
- ₹ 2 - ₹ 10 ಲಕ್ಷ - ₹ 1,000
- ₹ 10 - ₹ 25 ಲಕ್ಷ - ₹ 1,500 ಹಾಗೂ
- ₹ 25 ಲಕ್ಷಕ್ಕಿಂತ ಅಧಿಕ - ₹ 2,500

ನಮೂದು 26ರ ಅಡಿಯಲ್ಲಿ, ವೃತ್ತಿಯಲ್ಲಿ ತೊಡಗಿರುವ ಸಂಸ್ಥೆಯ ಪ್ರತಿಯೋರ್ವ ಪಾಲುದಾರರೂ ವರ್ಷ ಒಂದಕ್ಕೆ ₹ 1,000/ - ದರದಲ್ಲಿ ಪಾವತಿಸಲು ಬಾಧ್ಯರಾಗಿರುತ್ತಾರೆ.

ಮುಂದುವರೆದು, ವಹಿವಾಟು ₹ 25 ಲಕ್ಷಕ್ಕಿಂತ ಕಡಿಮೆಯಾಗಿದ್ದಲ್ಲಿ ಸಂಸ್ಥೆಯ ಪಾಲುದಾರರ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದು ಹಾಗೂ ವಹಿವಾಟು ₹ 25 ಲಕ್ಷ ಮೊತ್ತವನ್ನು ಮೀರಿದ್ದಲ್ಲಿ ಸಂಸ್ಥೆಯ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದು ಎಂಬುದಾಗಿ ವಿವರಣೆ V ರ ಜೊತೆ ಓದಲ್ಪಡುವ ವಿವರಣೆ IV ಎಂಬುದಾಗಿ ತಿಳಿಸಿದೆ.

31 ಮಾರ್ಚ್ 2016ರಲ್ಲಿದ್ದಂತೆ ಕರ್ನಾಟಕ ಮೌವತೆ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿದ್ದಂತಹ 75,783 ಪಾಲುದಾರಿಕೆ ಸಂಸ್ಥೆಗಳಿದ್ದವು. ಈ ಪಾಲುದಾರಿಕೆ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- ₹ 25 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ವಹಿವಾಟಿನ ಜೊತೆಯಲ್ಲಿ 5,052 ಪಾಲುದಾರಿಕೆ ಸಂಸ್ಥೆಗಳಿದ್ದವು, ಅವುಗಳು 2011–12ರಿಂದ 2015–16 ಸಾಲುಗಳಿಗೆ 118 ಸ್ಥಳೀಯ ಮೌವತೆ/ಮೌವತೆ ಉಪ–ಕಚೇರಿಗಳಲ್ಲಿ ಸಲ್ಲಿಸಿದ್ದಂತಹ ತಮ್ಮ 8,016 ವಾರ್ಷಿಕ ವೃತ್ತಿಗಳ ಮೇಲಿನ ತೆರಿಗೆ ಸಲ್ಲಿಕೆಗಳಲ್ಲಿ ಸ್ವಯಂ–ನಿರ್ಧಾರಣೆ ಮಾಡಿದ್ದವು ಹಾಗೂ ವೃತ್ತಿಗಳ ಮೇಲಿನ ತೆರಿಗೆಯನ್ನು ಷೆಡ್ಯೂಲಿನ ನಮೂದು 26ರ ಅಡಿಯಲ್ಲಿ ಪಾವತಿಸಬೇಕಿದ್ದ ವಾಸ್ತವಿಕ ತೆರಿಗೆಗೆ ಬದಲಾಗಿ ನಮೂದು 10 ಅಥವಾ 13ರ ಅಡಿಯಲ್ಲಿ ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಿದ್ದವು. ಪಾವತಿಸಲು ಬಾಕಿಯಿದ್ದಂತಹ ತೆರಿಗೆಯ ಒಟ್ಟಾರೆ ಮೊತ್ತವು ವರ್ಷ ಒಂದಕ್ಕೆ ಪ್ರತಿಯೋರ್ವ ಪಾಲುದಾರರಿಗೆ ₹ 1,000 ದರದಲ್ಲಿ ₹ 2.06 ಕೋಟಿ ಆಗಿದ್ದಿತು. ಆದರೆ, ಆ ಸಂಸ್ಥೆಗಳು ಸ್ವಯಂ–ನಿರ್ಧಾರಿತ ಸಲ್ಲಿಕೆಗಳ ಮೂಲಕ ವರದಿ ಮಾಡಿದ್ದಂತಹ ತೆರಿಗೆ ಬಾಧ್ಯತೆಯ ವಾಸ್ತವಿಕ ಮೊತ್ತವು ಕೇವಲ ₹ 1.19 ಕೋಟಿ ಆಗಿದ್ದಿತು, ಇದರಿಂದಾಗಿ, ₹ 0.87 ಕೋಟಿ ಮೊತ್ತದಷ್ಟು ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿತು.
- ರಾಜ್ಯದಲ್ಲಿ 2ರಿಂದ 40 ಶಾಖೆಗಳ ಮೂಲಕ ವ್ಯಾಪಾರದಲ್ಲಿ ತೊಡಗಿದ್ದಂತಹ ವಾರ್ಷಿಕ ವಹಿವಾಟು ₹ 25 ಲಕ್ಷ ಮೀರಿದ್ದಂತಹ 13,601 ಪಾಲುದಾರಿಕೆ ಸಂಸ್ಥೆಗಳಿದ್ದವು. ಈ ಸಂಸ್ಥೆಗಳ ಒಟ್ಟಾರೆ ತೆರಿಗೆ ಬಾಧ್ಯತೆಯು ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಷೆಡ್ಯೂಲಿನ ಅಡಿಯಲ್ಲಿ ವಿವರಣೆ VI[14] ಪ್ರಕಾರ ಅವುಗಳ ಶಾಖೆಗಳ ಮೇಲಿನ ತೆರಿಗೆ ಬಾಧ್ಯತೆಯೂ ಸೇರಿದಂತೆ ₹ 10.75 ಕೋಟಿ ಆಗುತ್ತದೆ. ಆದಾಗ್ಯೂ, ಸಂಬಂಧಿತ ವರ್ತಕರು, 2011–12 ಹಾಗೂ 2015–16ರ ನಡುವಿನ ಸಾಲುಗಳಿಗೆ 118 ಸ್ಥಳೀಯ ಮೌವತೆ ಕಚೇರಿಗಳು/ಮೌವತೆ ಉಪ–ಕಚೇರಿಗಳಲ್ಲಿ ಸಲ್ಲಿಸಿದ್ದಂತಹ ತಮ್ಮ 9,413 ವಾರ್ಷಿಕ ಸಲ್ಲಿಕೆಗಳಲ್ಲಿ ಕೇವಲ ₹ 6.43 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಿದ್ದವು ಎಂಬುದನ್ನು ಗಮನಿಸಲಾಯಿತು, ಇದರಿಂದಾಗಿ ₹ 4.32 ಕೋಟಿ ಮೊತ್ತದಷ್ಟು ವೃತ್ತಿಗಳ ಮೇಲಿನ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡುವಲ್ಲಿ ಪರಿಣಮಿಸಿತು.
- 118 ಸ್ಥಳೀಯ ಮೌವತೆ ಕಚೇರಿಗಳು/ಮೌವತೆ ಉಪ–ಕಚೇರಿಗಳ ಅಡಿಯಲ್ಲಿ 1 ಏಪ್ರಿಲ್ 2011ರಿಂದ 31 ಮಾರ್ಚ್ 2016ರ ಅವಧಿಯಲ್ಲಿ ಯಾವುದೇ ಸಲ್ಲಿಕೆಗಳನ್ನು ಸಲ್ಲಿಸದಿದ್ದಂತಹ ಅಥವಾ ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸದಿದ್ದಂತಹ 29,287 ಪಾಲುದಾರಿಕೆ ಸಂಸ್ಥೆಗಳಿದ್ದವು (ವಾರ್ಷಿಕ ವಹಿವಾಟು ₹ 25 ಲಕ್ಷಕ್ಕಿಂತ ಅಧಿಕವಾಗಿದ್ದಂತಹ 20,817 ದೃಷ್ಟಾಂತಗಳು, ವಾರ್ಷಿಕ ವಹಿವಾಟು ₹ 25 ಲಕ್ಷಕ್ಕಿಂತ ಕಡಿಮೆ ಇದ್ದಂತಹ 21,261 ದೃಷ್ಟಾಂತಗಳು). ವಾರ್ಷಿಕ ವಹಿವಾಟು ₹ 25 ಲಕ್ಷಕ್ಕಿಂತ ಕಡಿಮೆ ಇರುವಲ್ಲಿನ ಪಾಲುದಾರರ ಸಂಖ್ಯೆಯ ಆಧಾರದ ಮೇರೆಗೆ ಹಾಗೂ ₹ 2,500 ದರದಂತೆ ಈ ಪ್ರಕರಣಗಳಲ್ಲಿ ತೆರಿಗೆ ಬಾಧ್ಯತೆಯನ್ನು ಲೆಕ್ಕಪರಿಶೋಧನೆಯು ಲೆಕ್ಕಹಾಕಿತು. ಅದರಂತೆಯೇ, ಮೇಲೆ ತಿಳಿಸಲಾದಂತಹ ಅವಧಿಗೆ ಈ ತಪ್ಪಿತಸ್ತ ಸಂಸ್ಥೆಗಳಿಂದ ಬಾಕಿಯಿರುವಂತಹ ತೆರಿಗೆ ಮೊತ್ತವು ₹ 11.18 ಕೋಟಿ ಆಗುತ್ತದೆ.
- ವರ್ತಕರ ಮಾದರಿಯ ವರ್ಗೀಕರಣದ ಯಥಾರ್ಥತೆಯನ್ನು ಹಾಗೂ ಅವುಗಳಿಂದ ಬಾಕಿಯಿರುವ ವೃತ್ತಿಗಳ ಮೇಲಿನ ತೆರಿಗೆಯ ವಸೂಲಾತಿಯನ್ನು ಖಚಿತಪಡಿಸಿಕೊಳ್ಳಲು PELSoftಗೆ ಸಾಧ್ಯವಾಗಲಿಲ್ಲ ಎಂಬುದನ್ನು ಈ ದೃಷ್ಟಾಂತಗಳು ಸ್ಪಷ್ಟವಾಗಿ ತೋರಿಸುತ್ತದೆ.

ಈ ಪ್ರಕರಣಗಳನ್ನು ಮೇ/ಜೂನ್ 2016ರಲ್ಲಿ ಸ್ಪಷ್ಟಪಡಿಸಿದನಂತರ, ವಾಣಿಜ್ಯ ತೆರಿಗೆ ಇಲಾಖೆಯು ಅಕ್ಟೋಬರ್ 2016ರಲ್ಲಿ ಸಲ್ಲಿಸಿದ ತನ್ನ ಉತ್ತರದಲ್ಲಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ಅನುಪಾಲನಾ ಕ್ರಮಗಳಿಗಾಗಿ ಸಂಬಂಧಿತ ವಿಭಾಗಗಳ ಜಂಟಿ ಆಯುಕ್ತರುಗಳಿಗೆ ಕಳುಹಿಸಲಾಗಿದೆ ಎಂಬುದಾಗಿ ತಿಳಿಸಿತು.

## 2.4.15 ಪಾಲುದಾರಿಕೆ ಸಂಸ್ಥೆಗಳಿಂದ ತೆರಿಗೆಯನ್ನು ಅಧಿಕ ಪ್ರಮಾಣದಲ್ಲಿ ವಸೂಲಾತಿ ಮಾಡಿರುವುದು

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮದ ಅನುವುಗಳ ಅನುಸಾರ, ಪಾಲುದಾರರಿಂದ ತೆರಿಗೆ ಪಾವತಿಸುವಂತೆ ತಗಾದೆಯನ್ನು ಸೃಷ್ಟಿಸುವಂತಿಲ್ಲ, ಆದರೆ ವರ್ಷ ಒಂದಕ್ಕೆ ₹ 25 ಲಕ್ಷವನ್ನು ಮೀರಿದ ವಹಿವಾಟನ್ನು ಹೊಂದಿರುವ ಸಂಸ್ಥೆಗಳಿಂದ ವರ್ಷ ಒಂದಕ್ಕೆ ₹ 2,500 ದರದಲ್ಲಿ ವಸೂಲಾತಿ ಮಾಡಬೇಕು. ಆದಾಗ್ಯೂ, 8,403 ಸಂಸ್ಥೆಗಳಿಗೆ ಸಂಬಂಧಿಸಿದಂತೆ, ವಾರ್ಷಿಕ ವಹಿವಾಟು ₹ 25 ಲಕ್ಷ ಮೊತ್ತವನ್ನು ಮೀರಿದ್ದ ಸಂಸ್ಥೆಗಳಿಗೆ ಸಂಬಂಧಿಸಿದಂತೆ 16,529 ಸಂದರ್ಭಗಳಲ್ಲಿ ಸಂಸ್ಥೆಯ ಪ್ರತಿಯೊಂದು ಶಾಖೆಗೆ

---

14 ಷೆಡ್ಯೂಲಿನ ಯಾವುದೇ ಬಾಬಿನ ಅಡಿಯಲ್ಲಿ ನಮೂದಿಸಲ್ಪಟ್ಟಿರುವಂತಹ ಸ್ವಯಂ–ಉದ್ಯೋಗದ ಪ್ರತಿಯೋರ್ವ ಕರದಾತರು, ಷೆಡ್ಯೂಲಿನ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ವೃತ್ತಿಗಳ ಮೇಲಿನ ತೆರಿಗೆಯನ್ನು ವಿಧಿಸುವ ಉದ್ದೇಶಕ್ಕಾಗಿ ಓರ್ವ ಪ್ರತ್ಯೇಕ ಕರದಾತರೆಂಬುದಾಗಿ ಭಾವಿಸತಕ್ಕದ್ದು ಎಂಬುದಾಗಿ ಷೆಡ್ಯೂಲಿನ ಅಡಿಯಲ್ಲಿನ VIರ ಅಡಿಯಲ್ಲಿನ ವಿವರಣೆಯು ತಿಳಿಸುತ್ತದೆ.

ಪಾಲುದಾರರೊಬ್ಬರಿಗೆ ₹ 1,000 ದರದಲ್ಲಿ ವಸೂಲಾತಿ ಮಾಡಲಾಗಿದ್ದಿತು ಎಂಬುದನ್ನು ಗಮನಿಸಲಾಯಿತು. ಇದು ₹ 2.46 ಕೋಟಿ ಮೊತ್ತದಷ್ಟು ತೆರಿಗೆಯನ್ನು ಅಧಿಕ ಪ್ರಮಾಣದಲ್ಲಿ ವಸೂಲಾತಿ ಮಾಡುವಲ್ಲಿ ಪರಿಣಮಿಸಿತು.

## 2.4.16 ಪಾಲುದಾರಿಕೆ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವೃತ್ತಿಗಳ ಮೇಲಿನ ತೆರಿಗೆಯನ್ನು ವಿಧಿಸುವಿಕೆಯ ಸುಧಾರಣೆ

ಕಂಡಿಕೆ 2.4.14ರಲ್ಲಿ ವಿವರಿಸಿರುವಂತೆ, ಪಾಲುದಾರಿಕೆ ಸಂಸ್ಥೆಗಳ ಮೇಲೆ ವೃತ್ತಿಗಳ ಮೇಲಿನ ತೆರಿಗೆಯನ್ನು ವಿಧಿಸುವಿಕೆಯು ನಿರ್ದಿಷ್ಟಪಡಿಸಲಾಗಿರುವಂತಹ ಹಲವು ಪರಿಮಿತಿಗಳೊಂದಿಗೆ ವಿಪರೀತ ಜಟಿಲತೆಯಿಂದ ಕೂಡಿದೆ. ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮದ ಷೆಡ್ಯೂಲಿನ ಅಡಿಯಲ್ಲಿನ ವಿವರಣೆ Vರ ಜೊತೆಯಲ್ಲಿ ಓದಲ್ಪಡುವ ವಿವರಣೆ IV ವಾರ್ಷಿಕ ವಹಿವಾಟು ₹ 25 ಲಕ್ಷ ಮೊತ್ತವನ್ನು ಮೀರುವಂತಹ ಪಾಲುದಾರಿಕೆ ಸಂಸ್ಥೆಗಳಿಗಾಗಿ ಅಥವಾ 10ಕ್ಕೂ ಹೆಚ್ಚಿನ ಉದ್ಯೋಗಿಗಳನ್ನು ನೇಮಕ ಮಾಡಿಕೊಂಡಿರುವಂತಹ ಪಾಲುದಾರಿಕೆ ಸಂಸ್ಥೆಗಳಿಗೆ, ತೆರಿಗೆಯನ್ನು ಕೇವಲ ಸಂಸ್ಥೆಯ ಮೇಲೆ ವಿಧಿಸಬೇಕೇ ಹೊರತು ವೈಯಕ್ತಿಕ ಪಾಲುದಾರರ (ನಮೂದು 26) ಮೇಲೆ ಅಲ್ಲ ಎಂಬುದಾಗಿ ತಿಳಿಸುತ್ತದೆ. ಲೆಕ್ಕಪರಿಶೋಧನೆಯು, ಮೇಲೆ ತಿಳಿಸಲಾದಂತಹ ವಿವರಣೆಗಳು ಅನೇಕ ಸಂಖ್ಯೆಯ ಪಾಲುದಾರರನ್ನು ಹೊಂದಿರುವ ಹಾಗೂ ಗಮನಾರ್ಹ ವಹಿವಾಟುಗಳೊಂದಿಗಿನ ಪಾಲುದಾರಿಕೆ ಸಂಸ್ಥೆಗಳಿಗೆ ಸಂಬಂಧಿಸಿದಂತೆ ರಾಜಸ್ವ/ವರಮಾನದ ಹಿತಾಸಕ್ತಿಯ ವಿರುದ್ಧವಾಗಿರುತ್ತವೆ ಎಂಬ ತೀರ್ಮಾನಕ್ಕೆ ಬರುತ್ತದೆ. ಮೌವತೆ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವಂತಹ ವೈಯಕ್ತಿಕ ವ್ಯಕ್ತಿಗಳು, ಅವರ ಒಟ್ಟಾರೆ ವಹಿವಾಟು ₹ 25 ಲಕ್ಷ ಮೊತ್ತವನ್ನು ಮೀರಿದಲ್ಲಿ ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಲು ಬಾಧ್ಯರಾಗಿರುವಂತಹವರನ್ನೇ ನಮೂದು 10 ಅಥವಾ 13ರ ಜೊತೆಯಲ್ಲಿ ಹೋಲಿಸಿದಲ್ಲಿ ಅಧಿನಿಯಮದ ಅಡಿಯಲ್ಲಿ ಕರದಾತರುಗಳನ್ನು ಸಮಾನವಾಗಿ ಕಾಣುವಲ್ಲಿ ಕೊರತೆಯು ಕಂಡುಬರುತ್ತದೆ.

2011–12ರಿಂದ 2015–16ರ ಅವಧಿಯಲ್ಲಿ ಮೌವತೆ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿದ್ದಂತಹ 36,842 ಪಾಲುದಾರಿಕೆ ಸಂಸ್ಥೆಗಳ ಲೆಕ್ಕಪರಿಶೋಧನಾ ವಿಶ್ಲೇಷಣೆಯು, ಸಂಸ್ಥೆಗಳ ವಾರ್ಷಿಕ ವಹಿವಾಟನ್ನು ಸಂಸ್ಥೆಯ ಪ್ರತಿಯೋರ್ವ ಪಾಲುದಾರರಿಗೂ ಹಂಚಿಕೆ ಮಾಡಿದಲ್ಲಿ ಹಾಗೂ ಪ್ರತಿಯೋರ್ವ ಪಾಲುದಾರರೂ ಓರ್ವ ಸ್ವತಂತ್ರವಾಗಿ ವೃತ್ತಿಯಲ್ಲಿ ತೊಡಗಿರುವವರು ಎಂಬುದಾಗಿ ಪರಿಗಣಿಸಿ, ಪ್ರತಿಯೋರ್ವ ಪಾಲುದಾರರ ತೆರಿಗೆ ಬಾಧ್ಯತೆಯನ್ನು ನಿರ್ಧಾರಣೆ ಮಾಡಿದಲ್ಲಿ ಪ್ರತಿಯೋರ್ವ ಪಾಲುದಾರರ ಮೇಲೂ ವರ್ಷ ಒಂದಕ್ಕೆ ₹ 1,000ದಿಂದ ₹ 2,500ದ ನಡುವೆ ತೆರಿಗೆಯನ್ನು ವಿಧಿಸಬಹುದಾಗಿದ್ದಿತು ಎಂಬುದನ್ನು ತೋರಿಸಿಕೊಟ್ಟಿತು. ಈ ಪ್ರಕರಣಗಳಲ್ಲಿ ಒಳಗೊಂಡಿದ್ದಂತಹ ವೈಯಕ್ತಿಕ ವ್ಯಕ್ತಿಗಳ ಒಟ್ಟಾರೆ ಸಂಖ್ಯೆಯು 52,367 ಮತ್ತು 63,314ರ ನಡುವೆ ಇದ್ದಿತು ಹಾಗೂ ಸರ್ಕಾರವು 2011–12ರಿಂದ 2015–16 ಸಾಲುಗಳಲ್ಲಿ ₹ 2.19 ಕೋಟಿಯಿಂದ ₹ 12.79 ಕೋಟಿಯವರೆಗಿನಂತೆ ಒಟ್ಟಾರೆ ₹ 49.62 ಕೋಟಿ ರಾಜಸ್ವ/ವರಮಾನವನ್ನು ಸಂಗ್ರಹಿಸಬಹುದಾಗಿದ್ದಿತು, ಇದಕ್ಕೆ ಪ್ರತಿಯಾಗಿ ಕೇವಲ ₹ 23.73 ಕೋಟಿ ಮೊತ್ತವನ್ನು ಮಾತ್ರ ಸಂಗ್ರಹಿಸಲಾಗಿದ್ದಿತು. ಕಳೆದ ಐದು ವರ್ಷಗಳಿಗೆ ಸರ್ಕಾರವು ವಸೂಲಾತಿ ಮಾಡಬಹುದಾಗಿದ್ದಂತಹ ಸಂಭಾವ್ಯ ರಾಜಸ್ವ/ವರಮಾನವು ₹ 26.76 ಕೋಟಿ ಆಗಿದ್ದಿತು. ಸರ್ಕಾರ/ಇಲಾಖೆಯು, ಈ ನಿಟ್ಟಿನಲ್ಲಿ ಸೂಕ್ತ ತಿದ್ದುಪಡಿಯನ್ನು ಪರಿಗಣಿಸಿದಲ್ಲಿ, ಅದು ಮುಂದಿನ ವರ್ಷಗಳಲ್ಲಿ ವರ್ಷ ಒಂದಕ್ಕೆ ₹ 5.22 ಕೋಟಿ ಹೆಚ್ಚುವರಿ ರಾಜಸ್ವ/ವರಮಾನವನ್ನು ಗಳಿಸಬಹುದು.

ನಿರ್ಗಮನ ಸಭೆಯಲ್ಲಿ, ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮವನ್ನು ಪರಿಷ್ಕರಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಎಲ್ಲಾ ಅಂಶಗಳನ್ನೂ ಆ ಸಮಿತಿಗೆ ಸೂಚಿಸಲಾಗುವುದು ಎಂಬುದಾಗಿ ವಾಣಿಜ್ಯ ತೆರಿಗೆ ಇಲಾಖೆಯು ತಿಳಿಸಿತು.

## 2.4.17 ಒಂದು ವರ್ಷದಲ್ಲಿ ಯಾವುದೇ ವಹಿವಾಟು ಇರುವುದಿಲ್ಲ ಎಂಬುದಾಗಿ ವರದಿ ಮಾಡಿದ್ದ ವರ್ತಕರಿಗೆ ತಪ್ಪಾಗಿ ವಿನಾಯಿತಿ ನೀಡಿದ್ದುದು

ಮೇಲೆ ತಿಳಿಸಲಾದಂತಹ ಪ್ರಕರಣಗಳಲ್ಲದೆಯೇ, ಕರ್ನಾಟಕ ಮೌವತೆ ಅಧಿನಿಯಮದ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿದ್ದಂತಹ 1,61,698 ವರ್ತಕರುಗಳು 2011–12ರಿಂದ 2015–16ರ ಅವಧಿಯಲ್ಲಿ ಒಂದು ಅಥವಾ ಹೆಚ್ಚಿನ ಸಾಲುಗಳಿಗೆ ವೃತ್ತಿಗಳ ಮೇಲಿನ ತೆರಿಗೆ ಪಾವತಿಯನ್ನು ಮಾಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ವೃತ್ತಿಗಳ ಮೇಲಿನ ತೆರಿಗೆ ಪಾವತಿಯನ್ನು ಮಾಡದಿದ್ದಂತಹ ಸಾಲುಗಳಲ್ಲಿ, ಸಂಬಂಧಿತ ವರ್ತಕರುಗಳು ಮೌವತೆ/ಕರ್ನಾಟಕ ಮಾರಾಟ ತೆರಿಗೆ (ಕೇಂಮಾತೆ)/ಕೇಂದ್ರ ಮಾರಟ ತೆರಿಗೆ ಅಡಿಯಲ್ಲಿ ವಾರ್ಷಿಕ ವಹಿವಾಟು ಯಾವುದೂ ಇರುವುದಿಲ್ಲ ಎಂಬುದಾಗಿ ಸಲ್ಲಿಕೆಗಳನ್ನು ಸಲ್ಲಿಸಿದ್ದರು ಮತ್ತು ಆದ್ದರಿಂದ ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಿರಲಿಲ್ಲ.

ಲೆಕ್ಕಪರಿಶೋಧನೆಯು, ಈ ವರ್ತಕರುಗಳಿಗೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆ ಇಲಾಖೆಯ ದತ್ತಸಂಚಯವನ್ನು ವಿಶ್ಲೇಷಿಸಿತು ಹಾಗೂ 1,41,284 ವರ್ತಕರುಗಳ ಊರ್ಜಿತವಾದಂತಹ PAN ಸಂಖ್ಯೆಯು ಒಂದು ವಿಶಿಷ್ಟ

ಗುರುತಾಗಿದ್ದು, ಅದನ್ನು, ಸೇವಾ ತೆರಿಗೆ ಅಡಿಯಲ್ಲಿ ಈ ವರ್ತಕರುಗಳ ಪೈಕಿ ಯಾರಾದರೂ ವಹಿವಾಟಿನ ವರದಿಯನ್ನು ಸಲ್ಲಿಸಿರುವರೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಹಾಗೂ ಈ ವರ್ತಕರುಗಳನ್ನು ಅಡ್ಡ–ಪರಿಶೀಲನೆ ಮಾಡುವ ಸಲುವಾಗಿ ಬಳಸಿಕೊಳ್ಳಲಾಯಿತು. ಈ ವರ್ತಕರುಗಳ ಪೈಕಿ 10,935 ವರ್ತಕರುಗಳು ಸೇವಾ ವಲಯಗಳ ಅಡಿಯಲ್ಲಿ ವ್ಯಾಪಾರವ್ಯವಹಾರಗಳನ್ನು ಮಾಡುತ್ತಿದ್ದರು ಮತ್ತು ಸಲ್ಲಿಕೆಗಳನ್ನು ಸಲ್ಲಿಸುತ್ತಿದ್ದರು ಹಾಗೂ ಸೇವಾ ತೆರಿಗೆ ಇಲಾಖೆಗೆ ತೆರಿಗೆಗಳನ್ನು ಪಾವತಿಸುತ್ತಿದ್ದರು. ಆದ್ದರಿಂದ, ಈ ವರ್ತಕರುಗಳು ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿದ್ದರು ಮತ್ತು ಈ ವರ್ತಕರುಗಳಿಂದ ವರ್ಷ ಒಂದಕ್ಕೆ ₹ 2,500 ದರದಲ್ಲಿ 2011–12ರಿಂದ 2015–16 ಸಾಲುಗಳಲ್ಲಿ ಬಾಕಿಯಿದ್ದಂತಹ ವೃತ್ತಿಗಳ ಮೇಲಿನ ತೆರಿಗೆ ಮೊತ್ತವು ₹ 4.59[15] ಕೋಟಿ ಆಗಿದ್ದಿತು.

ಉಳಿದ 20,414 ವರ್ತಕರುಗಳಿಗೆ ಸಂಬಂಧಿಸಿದಂತೆ, PAN ಸಂಖ್ಯೆಗಳನ್ನು ವಾಣಿಜ್ಯ ತೆರಿಗೆ ಇಲಾಖೆಯಿಂದ ಸೆರೆಹಿಡಿಯಲಾಗಲಿಲ್ಲ ಮತ್ತು ಆದ್ದರಿಂದ ಅಡ್ಡ–ಪರಿಶೀಲನೆ ಮಾಡಲಾಗಲಿಲ್ಲ. ಇವರುಗಳ ಪೈಕಿ ಕೆಲವರು ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಮೌವತೆ/ಕಮಾತೆ ಅಡಿಯಲ್ಲಿ ನೋಂದಾಯಿತ ವರ್ತಕರುಗಳಿಂದ ವೃತ್ತಿಗಳ ಮೇಲಿನ ತೆರಿಗೆ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವುದರಿಂದ ವರ್ಷ ಒಂದಕ್ಕೆ ₹ 17.23 ಕೋಟಿ ಮೊತ್ತದಷ್ಟು ರಾಜಸ್ವ/ವರಮಾನವು ವಸೂಲಾತಿಯಾಗದಿರುವುದನ್ನು ತಡೆಯಬಹುದು.

ತಮ್ಮ ಅಧಿಕಾರವ್ಯಾಪ್ತಿಯಲ್ಲಿ ಬರುವ ವರ್ತಕರುಗಳಿಂದ ವೃತ್ತಿಗಳ ಮೇಲಿನ ತೆರಿಗೆ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸುವುದಕ್ಕಾಗಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳುವಂತೆ ನಿರ್ದೇಶನಗಳನ್ನು ನೀಡಲಾಗಿದೆ ಎಂಬುದಾಗಿ ವಾಣಿಜ್ಯ ತೆರಿಗೆ ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು.

### 2.4.18 ಲಾಡ್ಜು ಗೃಹಗಳ ಮಾಲೀಕರುಗಳಿಂದ ವಿಲಾಸಗಳ ಮೇಲಿನ ತೆರಿಗೆ ಹಾಗೂ ವೃತ್ತಿಗಳ ಮೇಲಿನ ತೆರಿಗೆ ಬಾಕಿಗಳು

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮ, 1976ರ ಷೆಡ್ಯೂಲಿನ ಅಡಿಯಲ್ಲಿನ ನಮೂದು ಕ್ರಮ ಸಂಖ್ಯೆ 18ರ ಅಡಿಯಲ್ಲಿ 20 ಕೊಠಡಿಗಳಿಗೂ ಕಡಿಮೆ ಇರುವಂತಹ ಲಾಡ್ಜಿಂಗ್ ಗೃಹಗಳ ಮಾಲೀಕರುಗಳು ವರ್ಷ ಒಂದಕ್ಕೆ ₹ 1,500 ದರದಲ್ಲಿ ಹಾಗೂ 20 ಕೊಠಡಿಗಳಿಗೂ ಅಧಿಕವಾಗಿರುವ ಲಾಡ್ಜಿಂಗ್ ಗೃಹಗಳ ಮಾಲೀಕರುಗಳು ವರ್ಷ ಒಂದಕ್ಕೆ ₹ 2,500/- ದರದಲ್ಲಿ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೆ ಬಾಧ್ಯರಾಗಿದ್ದರು. ಕರ್ನಾಟಕ ವಿಲಾಸಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ಕೊಠಡಿಯೊಂದಕ್ಕೆ ದಿನ ಒಂದಕ್ಕೆ ₹ 750[16] ಅಥವಾ ಅದಕ್ಕಿಂತ ಹೆಚ್ಚಿನ ಕೊಠಡಿ ಬಾಡಿಗೆಯನ್ನು ಪಡೆಯುವಂತಹ ಲಾಡ್ಜಿಂಗ್ ಗೃಹಗಳ ಮಾಲೀಕರುಗಳು, ಆಡಳಿತವ್ಯಾಪ್ತಿಯ ಸ್ಥಳೀಯ ಮೌವತೆ ಕಚೇರಿಯಲ್ಲಿ ಅಥವಾ ವಿಲಾಸಗಳ ಮೇಲಿನ ತೆರಿಗೆ ವಲಯ ಕಚೇರಿಯಲ್ಲಿ ವಿಲಾಸಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಹಾಗೂ ವಿಲಾಸಗಳ ಮೇಲಿನ ತೆರಿಗೆ ಪಾವತಿ ಮಾಡಲು ಬಾಧ್ಯರಾಗಿದ್ದರು.

ವೃತ್ತಿಗಳ ಮೇಲಿನ ತೆರಿಗೆ ಮತ್ತು ವಿಲಾಸಗಳ ಮೇಲಿನ ತೆರಿಗೆ ಬಾಕಿಗಳ ನಿರ್ಧಾರಣೆಗೆ ಅಗತ್ಯವಿದ್ದಂತಹ, ಒಂದು ಲಾಡ್ಜಿಂಗ್ ಗೃಹದಲ್ಲಿರುವ ಕೊಠಡಿಗಳ ಸಂಖ್ಯೆ ಹಾಗೂ ದಿನ ಒಂದಕ್ಕೆ ಕೊಠಡಿ ಒಂದಕ್ಕೆ ಪಡೆಯಲಾಗುತ್ತಿರುವ ಬಾಡಿಗೆ ದರ, ಇವೇ ಮುಂತಾದ ಪ್ರಮುಖ ವಿವರಗಳನ್ನು ಸರೆಹಿಡಿಯಲು PELSoft ಯಾವುದೇ ಕ್ಷೇತ್ರಗಳನ್ನು ಹೊಂದಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡಿದ್ದಂತಹ 3,072 ಲಾಡ್ಜಿಂಗ್ ಗೃಹಗಳ ಪೈಕಿ 2011–12ರಿಂದ 2015–16ರ ಅವಧಿಯಲ್ಲಿ, 1,071 ಲಾಡ್ಜಿಂಗ್ ಗೃಹಗಳ ಮಾಲೀಕರುಗಳು ವೃತ್ತಿಗಳ ಮೇಲಿನ ತೆರಿಗೆಯನ್ನು ಪಾವತಿಸಿರಲಿಲ್ಲ.

---

15 ವ್ಯಕ್ತಿಗಳ ಸಂಖ್ಯೆಯು 10,935 ಆಗಿದ್ದಿತಾದರೂ, ತಪ್ಪಿತಸ್ಥಗೊಂಡಿರುವ ದೃಷ್ಟಾಂತಗಳ ಸಂಖ್ಯೆಯು 18,374 ಆಗಿದ್ದಿತು (ಅಂದರೆ, ಒಬ್ಬರೇ ವರ್ತಕರು ಅನೇಕ ಪ್ರಕರಣಗಳಲ್ಲಿ ಒಂದಕ್ಕಿಂತ ಅಧಿಕ ಸಾಲುಗಳಲ್ಲಿ ತಪ್ಪಿತಸ್ಥರಾಗಿದ್ದರು) ಮತ್ತು ಆದ್ದರಿಂದ ₹ 4.59 ಕೋಟಿ ಮೊತ್ತದಷ್ಟು ತೆರಿಗೆ ಬಾಧ್ಯತೆಯು ಉದ್ಭವಿಸುತ್ತದೆ.

16 31.3.2014ರವರೆಗೆ ಅಥವಾ ₹ 500 ಅಥವಾ ಅದಕ್ಕಿಂತಲೂ ಹೆಚ್ಚಿನ ಮೊತ್ತದ.

27 ಜಿಲ್ಲೆಗಳಲ್ಲಿ[17], 609 ಲಾಡ್ಜಿಂಗ್ ಗೃಹಗಳಿಂದ[18] ತಮ್ಮ ಗ್ರಾಹಕರಿಗೆ ಏಪ್ರಿಲ್ 2011 ಹಾಗೂ ಮಾರ್ಚ್ 2016ರ ನಡುವೆ ನೀಡಲ್ಪಟ್ಟಿದ್ದಂತಹ 973 ಬಿಲ್ಲುಗಳನ್ನು ಯಾದೃಚ್ಛಿಕ ಆಯ್ಕೆ ಮಾದರಿಯಲ್ಲಿ ಸಂಗ್ರಹಿಸಲಾಯಿತು ಹಾಗೂ ಲೆಕ್ಕಪರಿಶೋಧನೆಯಲ್ಲಿ ವಿಶ್ಲೇಷಿಸಲಾಯಿತು. 24 ಜಿಲ್ಲೆಗಳಲ್ಲಿ[19] 242 ಲಾಡ್ಜಿಂಗ್ ಗೃಹಗಳು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡಿರಲಿಲ್ಲ ಎಂಬುದನ್ನು ವಿಶ್ಲೇಷಣೆಯು ತೋರಿಸಿಕೊಟ್ಟಿತು. ಇವುಗಳ ಪೈಕಿ, 119 ಲಾಡ್ಜಿಂಗ್ ಗೃಹಗಳು ವಿಲಾಸಗಳ ಮೇಲಿನ ತೆರಿಗೆಯನ್ನು ಆಕರ್ಷಿಸುವಂತಹ ಕೊಠಡಿ ಬಾಡಿಗೆಯನ್ನು ಪಡೆಯುತ್ತಿದ್ದವು. ಈ ಲಾಡ್ಜಿಂಗ್ ಗೃಹಗಳು ನೋಂದಣಿಯನ್ನು ಮಾಡಿಸದೆಯೇ ಹಾಗೂ ಮೂರರಿಂದ ಐದು ವರ್ಷಗಳವರೆಗೆ ತೆರಿಗೆಯನ್ನು ವಿಧಿಸಬಹುದಾದಂತಹ ಬಾಡಿಗೆಯನ್ನು ಸಾರ್ವಜನಿಕರಿಂದ ಸಂಗ್ರಹಿಸುತ್ತಿದ್ದವಾದರೂ, ವಾಣಿಜ್ಯ ತೆರಿಗೆ ಇಲಾಖೆಯು ಅವುಗಳನ್ನು ಪತ್ತೆಹಚ್ಚಿರಲಿಲ್ಲ ಹಾಗೂ ತೆರಿಗೆ ಜಾಲಕ್ಕೆ ತಂದಿರಲಿಲ್ಲ. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಣಿ ಮಾಡಿಸಿದ್ದಂತಹ ಇತರೆ ಹನ್ನೆರಡು ಲಾಡ್ಜಿಂಗ್ ಗೃಹಗಳು ಸಲ್ಲಿಕೆಗಳನ್ನು ಸಲ್ಲಿಸುವಲ್ಲಿ ತಪ್ಪಿತಸ್ತಗೊಂಡಿದ್ದವು ಅಥವಾ ತಮ್ಮ ಸಲ್ಲಿಕೆಗಳಲ್ಲಿ ತೆರಿಗೆ ಬಾಧ್ಯತೆಯನ್ನು ಬಚ್ಚಿಟ್ಟಿದ್ದವು. ಲಾಡ್ಜಿಂಗ್ ಗೃಹಗಳ ಸವಿವರ ಲೆಕ್ಕಪತ್ರಗಳ ಅನುಪಸ್ಥಿತಿಯಲ್ಲಿ, ಕೊಠಡಿಗಳ ನೆಲೆಸಿರುವಿಕೆ ದಿನಗಳ ಸಂಖ್ಯೆ, ಅವುಗಳು ಸಂಗ್ರಹಿಸಲಾಗಿದ್ದಂತಹ ಒಟ್ಟು ಬಾಡಿಗೆ ಮೊತ್ತ, ತೆರಿಗೆಯನ್ನು ವಿಧಿಸಬಹುದಾದಂತಹ ಬಾಡಿಗೆ ಮೊತ್ತ, ಇತ್ಯಾದಿ ವಿವರಗಳ ಅನುಪಸ್ಥಿತಿಯಲ್ಲಿ, ಲೆಕ್ಕಪರಿಶೋಧನೆಯು ನೆಲೆಸಿರುವಿಕೆ ದರವನ್ನು ಒಂದು ವರ್ಷದಲ್ಲಿ ಶೇಕಡಾ 60ರ ದರದಲ್ಲಿ ಅಂದಾಜು ಮಾಡಿತು (ಅಂದರೆ 365 ದಿನಗಳ ಪೈಕಿ 240). ಅದರಂತೆಯೇ, ನೋಂದಣಿ ಮಾಡಿಸದೆಯೇ ಇರುವಂತಹ 62 ಲಾಡ್ಜಿಂಗ್ ಗೃಹಗಳಿಂದ (ನೀಡಲಾದ ಬಿಲ್ಲುಗಳಲ್ಲಿ ತೆರಿಗೆಯನ್ನು ಸಂಗ್ರಹಿಸಿರುವುದನ್ನು ಕಂಡು ಬಂದಿರುವಂತಹ 119 ಲಾಡ್ಜುಗಳ ಪೈಕಿ) ಸರ್ಕಾರಕ್ಕೆ ಬಾಕಿಯಿರುವಂತಹ ವಿಲಾಸಗಳ ಮೇಲಿನ ತೆರಿಗೆಯು ₹ 2.45 ಕೋಟಿ ಆಗಿದ್ದಿತು. ಅಲ್ಲದೆಯೇ, ಈ ಲಾಡ್ಜಿಂಗ್ ಗೃಹಗಳು ವಾರ್ಷಿಕ ವೃತ್ತಿಗಳ ಮೇಲಿನ ತೆರಿಗೆ ಪಾವತಿಗೂ ಬಾಧ್ಯವಾಗಿದ್ದವು.

ಏಪ್ರಿಲ್ 2011ರಿಂದ ಮಾರ್ಚ್ 2016ರ ಅವಧಿಯ ಐದು ವರ್ಷಗಳಿಗೆ 609 ಲಾಡ್ಜಿಂಗ್ ಗೃಹಗಳ 973 ಬಿಲ್ಲುಗಳ ಒಂದು ಸಣ್ಣ ಮಾದರಿಯು ಅಧಿನಿಯಮದ ಅನುವುಗಳನ್ನು ಅನುಸರಿಸದಿದ್ದಂತಹ 254 ಪ್ರಕರಣಗಳನ್ನು ಹೊರತಂದಿತು, ಅದು, ಮಾದರಿ ಆಯ್ಕೆಯಲ್ಲಿನ ಲಾಡ್ಜಿಂಗ್ ಗೃಹಗಳ ಶೇಕಡಾ 39.90 ಆಗಿದ್ದಿತು ಎಂಬುದನ್ನು ಮೇಲಿನ ಕಂಡಿಕೆಯಿಂದ ಕಾಣಬಹುದು. ಇದು ಸಾಕಷ್ಟು ಎಚ್ಚರಿಕೆಯ ಸಂದೇಶವಾಗಿದ್ದು ಹಾಗೂ ಸರ್ಕಾರವು ಅನುಭವಿಸಿರುವಂತಹ ವಾಸ್ತವಿಕ ನಷ್ಟವು ಭಾರಿ ಪ್ರಮಾಣದ್ದಾಗಿದ್ದಿತು.

ನಿರ್ಗಮನ ಸಭೆಯಲ್ಲಿ, ನೋಂದಣಿಯನ್ನು ಮಾಡಿಸಿಕೊಳ್ಳದೆಯೇ ಗ್ರಾಹಕರಿಂದ ವಿಲಾಸಗಳ ಮೇಲಿನ ತೆರಿಗೆಯನ್ನು ಸಂಗ್ರಹಿಸುತ್ತಿದ್ದಂತಹ ಲಾಡ್ಜಿಂಗ್ ಗೃಹಗಳನ್ನು ತೆರಿಗೆ ಜಾಲಕ್ಕೆ ತರಬೇಕು ಎಂಬುದನ್ನು ವಾಣಿಜ್ಯ ತೆರಿಗೆ ಇಲಾಖೆಯು ಒಪ್ಪಿಕೊಂಡಿತು ಹಾಗೂ ಅಂತಹ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂಬುದಾಗಿ ತಿಳಿಸಿತು.

## 2.4.19 ಹಿಂದಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳಲ್ಲಿ ಮಾಡಲಾಗಿದ್ದಂತಹ ಶಿಫಾರಸ್ಸುಗಳಿಗೆ ಅನುಸರಣಾ ಕ್ರಮಗಳು

ಅಪ್ರಧಾನ ತೆರಿಗೆಗಳ ಮೇಲೆ ನಡೆಸಲಾಗಿದ್ದಂತಹ ಹಿಂದಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳಲ್ಲಿ (2006–07 ಹಾಗೂ 2007–08) ತನ್ನ ತೆರಿಗೆ ಮೂಲವನ್ನು ವಿಸ್ತರಿಸುವ ಸಲುವಾಗಿ, ಹಾಗೂ ಬ್ಯಾಂಕುಗಳಿಗೆ ನಗದೀಕರಣಕ್ಕಾಗಿ ಹಾಕಲಾಗಿದ್ದಂತಹ ಚೆಕ್ಕುಗಳು ಅಥವಾ ಇತರೆ ಸಾಧನಗಳು ನಗದೀಕರಣಗೊಳ್ಳದಿರುವುದನ್ನು ಹಾಗೂ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳುವ ಹಾಗೂ ರಾಜಸ್ವ/ವರಮಾನದ ನಷ್ಟಕ್ಕೆ ದಾರಿ ಮಾಡಿಕೊಡುವಂತಹ ಲೋಪದೋಷಗಳನ್ನು ಪತ್ತೆಹಚ್ಚುವ ಹಾಗೂ ಸಮಯೋಚಿತ ಹಾಗೂ

---

17 ಬಾಗಲಕೋಟೆ, ಬೆಳಗಾವಿ, ಬೆಂಗಳೂರು, ಬಿದರ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಡಿಕೇರಿ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ, ವಿಜಯಾಪುರ, ಹಾಗೂ ಯಾದಗಿರ.

18 ಅಧಿಕಾರಿಗಳು/ಸಿಬ್ಬಂದಿ ತಮ್ಮ ಕಚೇರಿ ಕೆಲಸದ ನಿಮಿತ್ತ ರಾಜ್ಯದ ಒಳಗೆ ಪ್ರವಾಸದ ವೇಳೆಯಲ್ಲಿ ಪಡೆದುಕೊಂಡಿದ್ದ ಲಾಡ್ಜಿಂಗ್ ವಸತಿಗೃಹಗಳ ಬಿಲ್ಲುಗಳನ್ನು ಕಳೆದ ಮೂರು ವರ್ಷಗಳಿಗೆ ಸಂಗ್ರಹಿಸಲಾಯಿತು. ಬಿಲ್ಲುಗಳನ್ನು ತದನಂತರ ಹೋಟೆಲುವಾರು ಹಾಗೂ ತಿಂಗಳುವಾರು ಸಂಕ್ಷಿಪ್ತಗೊಳಿಸಲಾಯಿತು. ಅಂತಹ ಹೋಟೆಲುಗಳು, ಒಳಗೊಂಡಿದ್ದಂತಹ ವಹಿವಾಟು ಹಾಗೂ ಬಿಲ್ಲುಗಳ ಪ್ರಕಾರ ಸಂಗ್ರಹಿಸಲಾಗಿದ್ದ ತೆರಿಗೆಯನ್ನು ತಾವು ಸಲ್ಲಿಸಿದ ಸಲ್ಲಿಕೆಗಳಲ್ಲಿ ಬಹಿರಂಗಗೊಳಿಸಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವಿಲಾಸಗಳ ಮೇಲಿನ ತೆರಿಗೆ ನೋಂದಣಿಯನ್ನು ಹೊಂದಿರುವ ಹೋಟೆಲು ಬಿಲ್ಲುಗಳನ್ನು ಸಂಬಂಧಿತ ತಿಂಗಳುಗಳಿಗೆ ಸಲ್ಲಿಸಲಾಗಿದ್ದ ಸಲ್ಲಿಕೆಗಳ ಜೊತೆಯಲ್ಲಿ ಸಂಖ್ಯೆವಾರು ಅಡ್ಡಪರಿಶೀಲನೆ ಮಾಡಲಾಯಿತು. ವಿಲಾಸಗಳ ಮೇಲಿನ ತೆರಿಗೆ ನೋಂದಣಿಯ ಸಂಖ್ಯೆಯನ್ನು ಹೊಂದಿರದ ಹೋಟೆಲು ಬಿಲ್ಲುಗಳಿಗೆ ಸಂಬಂಧಿಸಿದಂತೆ, ಆ ಹೋಟೆಲುಗಳ ನೋಂದಣಿಯ ಸ್ಥಿತಿಗತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, PELSoftನಲ್ಲಿನ 'ವರ್ತಕರನ್ನು ಹುಡುಕುವಿಕೆ' ಆಯ್ಕೆಯನ್ನು ಬಳಸಿಕೊಳ್ಳಲಾಯಿತು ಹಾಗೂ ನೋಂದಣಿಯನ್ನು ಮಾಡಿಸದಿರುವುದನ್ನು ಪತ್ತೆಹಚ್ಚಲಾಯಿತು ಹಾಗೂ ಎಲ್ಲಿ ನೋಂದಣಿ ಸಂಖ್ಯೆಗಳು ಕಂಡುಬಂದವೋ ಅಂತಹವುಗಳನ್ನು ಮೇಲೆ ತಿಳಿಸಲಾದಂತೆ ಸಲ್ಲಿಕೆಗಳ ಜೊತೆಯಲ್ಲಿ ಅಡ್ಡಪರಿಶೀಲನೆ ಮಾಡಲಾಯಿತು.

19 ಬಾಗಲಕೋಟೆ, ಬೆಳಗಾವಿ, ಬಿದರ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾಸನ, ಹಾವೇರಿ, ಕೋಲಾರ, ಕೊಪ್ಪಳ, ಮಡಿಕೇರಿ, ಮಂಡ್ಯ, ಮಂಗಳೂರು, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ಉತ್ತರ ಕನ್ನಡ, ವಿಜಯಾಪುರ, ಹಾಗೂ ಯಾದಗಿರ

ಪರಿಣಾಮಕಾರಿತ್ವದಿಂದ ಕೂಡಿದ ರೀತಿಯಲ್ಲಿ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಒಂದು ನಿರ್ದಿಷ್ಟ ನಿಯಂತ್ರಣಗಳನ್ನು ಸ್ಥಾಪಿಸುವ ಸಲುವಾಗಿ ಸರ್ಕಾರಕ್ಕೆ/ಇಲಾಖೆಗೆ ಶಿಫಾರಸುಗಳನ್ನು ಮಾಡಲಾಗಿದ್ದಿತು. ಈ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ಇಲಾಖೆಯು ತೆಗೆದುಕೊಂಡಂತಹ ಕ್ರಮಗಳನ್ನು ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಸಮಯದಲ್ಲಿ ಪರಿಶೀಲಿಸಲಾಯಿತು ಹಾಗೂ ಆ ರೀತಿ ಮಾಡಲಾದಂತಹ ಪರಿಶೀಲನೆಯ ಫಲಿತಾಂಶಗಳನ್ನು ಈ ಕೆಳಗೆ ತಿಳಿಸಲಾಗಿದೆ:

### 2.4.19.1 ವಿವಿಧ ಪರವಾನಿಗೆಯನ್ನು ನೀಡುವ/ನೋಂದಣಿಯನ್ನು ಮಾಡಿಕೊಡುವ ಸಂಸ್ಥೆಗಳಿಂದ ಮಾಹಿತಿಯನ್ನು ಪಡೆದುಕೊಳ್ಳುವ ಒಂದು ವ್ಯವಸ್ಥೆಯನ್ನು ಸ್ಥಾಪಿಸುವುದು

ಮೇಲೆ ತಿಳಿಸಲಾದಂತಹ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳಲ್ಲಿ, ಅವರುಗಳನ್ನು ವೃತ್ತಿಗಳ ಮೇಲಿನ ತೆರಿಗೆ/ಕರ್ನಾಟಕ ಮನೋರಂಜನೆಗಳ ಮೇಲಿನ ತೆರಿಗೆ/ವಿಲಾಸಗಳ ಮೇಲಿನ ತೆರಿಗೆ ಅಡಿಯಲ್ಲಿ ತೆರಿಗೆ ಪಾವತಿಗಾಗಿ ಬಾಧ್ಯರನ್ನಾಗಿ ಮಾಡುವಂತಹ ವ್ಯಾಪಾರವ್ಯವಹಾರ/ವೃತ್ತಿಗಳಲ್ಲಿ ತೊಡಗುವುದಕ್ಕಾಗಿ 'ವ್ಯಕ್ತಿಗಳಿಗೆ' ಅನುಮತಿಯನ್ನು / ಪರವಾನಿಗೆಯನ್ನು ನೀಡುವಂತಹ ವಿವಿಧ ಅಧಿಕಾರಿಗಳಿಂದ/ ಕಚೇರಿಗಳಿಂದ[20] ನಿಯತಕಾಲಿಕವಾಗಿ ಮಾಹಿತಿಯನ್ನು ಪಡೆಯುವುದಕ್ಕಾಗಿ ಹಾಗೂ ಅಂತಹ ಎಲ್ಲಾ ವ್ಯಕ್ತಿಗಳನ್ನು ತೆರಿಗೆ ಜಾಲದ ಅಡಿಯಲ್ಲಿ ತರುವುದಕ್ಕಾಗಿ ಅಂತಹ ಮಾಹಿತಿಯ ಮೇಲೆ ಅನುಸರಣಾ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಿ ಒಂದು ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ಲೆಕ್ಕಪರಿಶೋಧನೆಯು ಶಿಫಾರಸ್ಸು ಮಾಡಿದ್ದಿತು.

ಲೆಕ್ಕಪರಿಶೋಧನೆಯ ಶಿಫಾರಸ್ಸುಗಳಿಗೆ ಉತ್ತರವಾಗಿ ಇಲಾಖೆಯು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಸಲ್ಲಿಸಿದ್ದಂತಹ ಇಲಾಖಾ ಟಿಪ್ಪಣಿಗಳಲ್ಲಿ, ಅನೇಕ ವೃತ್ತಿಗಳು/ವ್ಯಾಪಾರವ್ಯವಹಾರಗಳಿಗೆ ಅನುಮತಿಗಳನ್ನು/ಪರವಾನಿಗೆಗಳನ್ನು ನೀಡುವಂತಹ ವಿವಿಧ ಕಚೇರಿಗಳಿಂದ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವಂತಹ ನೋಂದಾಯಿತರಲ್ಲದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯು ಒದಗಿಸಿರುವಂತಹ ಮಾಹಿತಿಯು ನಿರೀಕ್ಷಿತ ಮಟ್ಟದಲ್ಲಿ ರಾಜಸ್ವ/ವರಮಾನವನ್ನು ಕೊಡಲಿಲ್ಲ ಎಂಬುದಾಗಿ ತಿಳಿಸಿದ್ದಿತು. ಇದು, ವಿಳಾಸ ಬದಲಾವಣೆ, ವೃತ್ತಿಗಳ ಬದಲಾವಣೆ, 120 ದಿನಗಳು ಹಾಗೂ ಅದಕ್ಕೂ ಹೆಚ್ಚಿನ ದಿನಗಳಲ್ಲಿ ವೃತ್ತಿಗಳನ್ನು ಮಾಡದಿರುವುದು, ಇತ್ಯಾದಿ ವಾಸ್ತವಾಂಶಗಳಿಂದ ಆಗಿದ್ದಿತು.

ವಾಣಿಜ್ಯ ತೆರಿಗೆ ಇಲಾಖೆಯು ತಿಳಿಸಿರುವಂತಹ ತೊಂದರೆಗಳನ್ನು ಲೆಕ್ಕಪರಿಶೋಧನೆಯು ಒಪ್ಪಿಕೊಳ್ಳುತ್ತದೆ. ಆದಾಗ್ಯೂ, ಪರವಾನಿಗೆಯನ್ನು ನೀಡುವ ಅಧಿಕಾರಿಗಳು ನೀಡುವ ಪರವಾನಿಗೆಗಳು ಅಥವಾ ಅನುಮತಿಗಳು ಸಂಬಂಧಿತ ಅಧಿನಿಯಮ ಅಥವಾ ನಿಯಮಗಳ ಅಡಿಯಲ್ಲಿ ನಿರ್ಧಾರಿತ ಅವಧಿಗೆ ಆಗಿರುತ್ತವೆ. ತದನಂತರ, ಪರವಾನಿಗೆಗಳು ನವೀಕರಣಕ್ಕೆ ಬಾಕಿಯಾಗುತ್ತವೆ ಹಾಗೂ ವೃತ್ತಿಗಳನ್ನು ಮಾಡಲು/ಮುಂದುವರೆಸಿಕೊಂಡು ಹೋಗಲು ಬಯಸುವಂತಹ ವ್ಯಕ್ತಿಗಳು ಪರವಾನಿಗೆಗಳ ನಿಯತಕಾಲಿಕ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸುತ್ತಾರೆ. ಆದ್ದರಿಂದ, ವೃತ್ತಿಗಳ ಮೇಲಿನ ತೆರಿಗೆಗಳಿಗಾಗಿನ ಸಂಗ್ರಹಣಾ ಪ್ರತಿನಿಧಿಗಳನ್ನು ಪರವಾನಿಗೆ ಅಧಿಕಾರಿಗಳನ್ನಾಗಿ ಮಾಡುವುದರಿಂದ, ಅದು ಸಮರ್ಪಕ ತೆರಿಗೆ ವಸೂಲಾತಿಯನ್ನು ಖಚಿತಪಡಿಸುತ್ತದೆ. ಸಂಘಟಿತ ವಲಯಗಳು/ಪರವಾನಿಗೆಗಳನ್ನು ನೀಡುವ ಅಧಿಕಾರಿಗಳಿಂದ ಪಡೆಯಬಹುದಾದಂತಹ ಪ್ರಯೋಜನಗಳನ್ನು ಕಂಡಿಕೆ 2.4.9ರಲ್ಲಿ ವಿವರಿಸಲಾಗಿದೆ.

ಅಲ್ಲದೆಯೇ, ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರವರ ಕಚೇರಿಗಳಿಂದ ಪರವಾನಿಗೆಗಳನ್ನು ನೀಡಲಾಗುವಂತಹ ಗಿರವಿ ಅಂಗಡಿಗಳು, ಚಿಟ್ ಫಂಡುಗಳು, ಹಣಕಾಸನ್ನು ಸಾಲ ನೀಡುವವರುಗಳ ಪಟ್ಟಿಗಳನ್ನು ನಾಲ್ಕು[21] ಜಿಲ್ಲೆಗಳಲ್ಲಿ, ಪಡೆದುಕೊಳ್ಳಲಾಯಿತು ಹಾಗೂ ಸ್ಥಳೀಯ ಮೌವತೆ ಕಚೇರಿಗಳು/ಮೌವತೆ ಉಪ–ಕಚೇರಿಗಳ ಜೊತೆ ಅಡ್ಡ ಪರಿಶೀಲನೆ ಮಾಡಲಾಯಿತು. 2,504 ವ್ಯಕ್ತಿಗಳು ವಾಣಿಜ್ಯ ತೆರಿಗೆ ಇಲಾಖೆಯ ಜೊತೆ ದಾಖಲಿಸಿಕೊಂಡಿರಲಿಲ್ಲ/ನೋಂದಣಿ ಮಾಡಿಸಿರಲಿಲ್ಲ ಎಂಬುದನ್ನು ಅವುಗಳು ತೋರಿಸಿಕೊಟ್ಟವು. ಈ ವ್ಯಕ್ತಿಗಳಿಂದ 2011–12ರಿಂದ 2015–16 ಸಾಲುಗಳಿಗೆ ಬಾಕಿಯಿದ್ದಂತಹ ವೃತ್ತಿಗಳ ಮೇಲಿನ ತೆರಿಗೆಯು ₹ 2.02 ಕೋಟಿ ಆಗಿದ್ದಿತು. ನೀಡಲಾಗಿದ್ದಂತಹ ಪರವಾನಿಗೆಗಳು ಐದು ವರ್ಷಗಳ ಅವಧಿಗೆ ಊರ್ಜಿತವಾಗಿದ್ದವು.

ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರವರನ್ನು ವೃತ್ತಿಗಳ ಮೇಲಿನ ತೆರಿಗೆಗಾಗಿ ಸಂಗ್ರಹಣಾ ಪ್ರತಿಯಾಗಿ ಮಾಡುವುದು, ಈ ವಲಯದಿಂದ ವೃತ್ತಿಗಳ ಮೇಲಿನ ತೆರಿಗೆ ಬಾಕಿಗಳ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಒಂದು ನ್ಯಾಯಸಮ್ಮತ ನಿಯಂತ್ರಣವಾಗುತ್ತದೆ ಎಂಬುದಾಗಿ ನಿರ್ಗಮನ ಸಭೆಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ಒಪ್ಪಿಕೊಂಡಿತು.

---

[20] ಕರ್ನಾಟಕ ವಕೀಲರುಗಳ ಸಂಘ (ಕರ್ನಾಟಕ ಬಾರ್ ಕೌನ್ಸಿಲ್) ಮುಖ್ಯ ವಿದ್ಯುತ್ ಪರಿವೀಕ್ಷಕರು, ಭಾರತೀಯ ವೈದ್ಯಕೀಯ ಮಂಡಳಿ (ಕರ್ನಾಟಕ ಚಾಪ್ಟರ್).

[21] ಬಿದರ, ಕಲಬುರಗಿ, ಹಾವೇರಿ ಹಾಗೂ ಉತ್ತರ ಕನ್ನಡ.

### 2.4.19.2 ಬ್ಯಾಂಕುಗಳಲ್ಲಿ ಠೇವಣಿ ಇಟ್ಟಿರುವಂತಹ ಚೆಕ್ಕು/ನಗದನ್ನು ಸಮನ್ವಯಗೊಳಿಸದಿರುವುದು

ಸಮಯೋಚಿತವಾದಂತಹ ಸಮನ್ವಯಗೊಳಿಸುವಿಕೆಗೆ ಅನುಕೂಲ ಕಲ್ಪಿಸುವುದಕ್ಕಾಗಿ ಬ್ಯಾಂಕುಗಳಿಂದ ಸಂಬಂಧಿತ ಕರನಿರ್ಧಾರಣಾ ಅಧಿಕಾರಿಗಳಿಗೆ ಚಲನ್ನುಗಳನ್ನು ಕಳುಹಿಸುವುದಕ್ಕಾಗಿ ಕಾಲಮಿತಿಯನ್ನು ನಿಗದಿಗೊಳಿಸಬೇಕೆಂಬುದಾಗಿ ನಮ್ಮ ಹಿಂದಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಶಿಫಾರಸ್ಸು ಮಾಡಿದ್ದೆವು.

ಬ್ಯಾಂಕುಗಳಲ್ಲಿ ಠೇವಣಿ ಇಡಲಾದಂತಹ ಚೆಕ್ಕುಗಳು/ನಗದನ್ನು ಸಂಬಂಧಿತ ಬ್ಯಾಂಕುಗಳು/ಖಜಾನೆಯಿಂದ ಪಡೆದುಕೊಳ್ಳಲಾದಂತಹ ಮಾಸಿಕ ಮಾಹಿತಿಯ ಜೊತೆ ಸಮನ್ವಯಗೊಳಿಸುವುದಕ್ಕಾಗಿ ಇಲಾಖೆಯು PELSoftನಲ್ಲಿ ಒಂದು ಮಾಡ್ಯೂಲನ್ನು ಅಭಿವೃದ್ಧಿಪಡಿಸಿದೆ ಎಂಬುದನ್ನು ಗಮನಿಸಲಾಯಿತು. ವಾಣಿಜ್ಯ ತೆರಿಗೆಗಳ ಇಲಾಖೆಯ ಪ್ರಕಾರ ಚೆಕ್ಕುಗಳು/ನಗದನ್ನು ಬ್ಯಾಂಕುಗಳಿಂದ ತರಲಾದಂತಹ ವಿವರಗಳ ಜೊತೆಯಲ್ಲಿ ತಾಳೆ ಮಾಡಿದನಂತರ, PELSoft ಬ್ಯಾಂಕಿಗೆ ಕಳುಹಿಸಲಾದಂತಹ ಸಾಧನಗಳ ಸಮನ್ವಯದ ಮೇಲಿನ ವರದಿಯನ್ನು ಬ್ಯಾಂಕು ತ:ಖ್ತೆಯ ಜೊತೆಯಲ್ಲಿ, ಪ್ರತಿಯೊಂದು ಕಚೇರಿಗೂ ಬ್ಯಾಂಕು ತ:ಖ್ತೆಗಳ ಜೊತೆಯಲ್ಲಿ ಹೊರತೆಗೆಯುತ್ತದೆ.

ಲೆಕ್ಕಪರಿಶೋಧನೆಯ ವೇಳೆಯಲ್ಲಿ, ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು 20 ಕ್ಷೇತ್ರ ಕಚೇರಿಗಳಿಗೆ[22]. ಸಂಬಂಧಿಸಿದಂತೆ 31 ಮಾರ್ಚ್ 2016ರಂದು ಒಂದು ಸಲ ಹಾಗೂ ತದನಂತರ 4 ಆಗಸ್ಟ್ 2016ರಂದು ಮತ್ತೊಂದು ಸಲ ಈ ವರದಿಯನ್ನು ಹೊರತೆಗೆಯಿತು. ₹ 50.61 ಕೋಟಿ ಮೊತ್ತದ ರಾಜಸ್ವ/ವರಮಾನವು ಒಳಗೊಂಡಂತೆ 64,789 ಸಾಧನಗಳಿಗೆ ಸಂಬಂಧಿಸಿದಂತೆ ಸಮನ್ವಯಗೊಂಡಿರುವ ಬಗ್ಗೆ ವಿವರಗಳು ಬಾಕಿಯಿದ್ದವು ಎಂಬುದನ್ನು ಈ 20 ಕಚೇರಿಗಳಿಗೆ ಸಂಬಂಧಿಸಿದಂತೆ, 31 ಮಾರ್ಚ್ 2016ರಲ್ಲಿದ್ದಂತೆ ಸಮನ್ವಯ ವರದಿಯು ತೋರಿಸಿಕೊಟ್ಟಿತು. ಇದನ್ನು ಸಂಬಂಧಿತ ಎಲ್ಲಾ 20 ಕಚೇರಿಗಳಿಗೂ ಏಪ್ರಿಲ್ 2016ರಲ್ಲಿ ತಿಳಿಸಲಾಯಿತು.

ಆದಾಗ್ಯೂ, ನಾಲ್ಕು ತಿಂಗಳುಗಳು ಕಳೆದನಂತರವೂ (4 ಆಗಸ್ಟ್ 2016ರಲ್ಲಿದ್ದಂತೆ), ₹ 47.80 ಕೋಟಿ ಮೊತ್ತವು ಒಳಗೊಂಡಂತೆ 61,537 ಸಾಧನಗಳು ಬಾಕಿಯಿದ್ದವು. ಸಮನ್ವಯಗೊಳಿಸುವಿಕೆಗಾಗಿ ಇಲಾಖೆಯು ಒಂದು ಗಣಕೀಕೃತ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದಿತಾದರೂ ಹಾಗೂ ಸಮನ್ವಯಗೊಳಿಸುವಿಕೆಗಾಗಿ ಬಾಕಿಯಿರುವಂತಹ ಸಾಧನಗಳ ಬಗ್ಗೆ ವರದಿಯನ್ನು ಹೊರತೆಗೆಯಲು ಸಾಧ್ಯವಿದ್ದಿತಾದರೂ, ನಗದೀಕರಣಕ್ಕಾಗಿ ಬ್ಯಾಂಕುಗಳಿಗೆ ಕಳುಹಿಸಲಾದಂತಹ ಎಲ್ಲಾ ಸಾಧನಗಳು ಸಮಯೋಚಿತವಾಗಿ ಸಮನ್ವಯಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಅದು ವಿಫಲಗೊಂಡಿದ್ದಿತು ಎಂಬುದನ್ನು ಇದು ತೋರಿಸುತ್ತದೆ. ಸಮಯೋಚಿತ ಸಮನ್ವಯಗೊಳ್ಳುವಿಕೆಯ ಅನುಪಸ್ಥಿತಿಯಲ್ಲಿ, ಸಾಧನಗಳು ನಗದೀಕರಣಗೊಳ್ಳಲು ತಿರಸ್ಕೃತಗೊಂಡಂತಹ ಅಪಾಯಗಳು ಯಾವುದಾದರೂ ಇದ್ದಲ್ಲಿ ಅಂತಹವುಗಳು ಇಲಾಖೆಯ ಗಮನದಿಂದ ತಪ್ಪಿಸಿಕೊಳ್ಳಬಹುದಾದಂತಹ ಸಂಭಾವ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಸಮನ್ವಯಗೊಳಿಸುವಿಕೆಗಾಗಿ ಅಗತ್ಯವಿರುವ ಮಾಹಿತಿಯನ್ನು ಬ್ಯಾಂಕುಗಳಿಂದ ಸಂಗ್ರಹಿಸಲಾಗಿದೆ, ಆದರೆ ಕೆಲವು ತಾಂತ್ರಿಕ ಸಮಸ್ಯೆಗಳ ಕಾರಣ ಅದನ್ನು PELSoftಗೆ ಊಡಿಕೆ ಮಾಡಲು ಸಾಧ್ಯವಾಗಿಲ್ಲ ಎಂಬುದಾಗಿ ವಾಣಿಜ್ಯ ತೆರಿಗೆ ಇಲಾಖೆಯು ನಿರ್ಗಮನ ಸಭೆಯಲ್ಲಿ ತಿಳಿಸಿತು.

### 2.4.19.3 ಇಲಾಖೆಯಲ್ಲಿ ಆಂತರಿಕ ಲೆಕ್ಕ ಪರಿಶೋಧನಾ ವಿಭಾಗದ ಸ್ಥಾಪನೆ

ಕರನಿರ್ಧಾರಣೆಗಳಲ್ಲಿ, ತೆರಿಗೆಗಳನ್ನು ವಿಧಿಸುವಿಕೆಯಲ್ಲಿ ಹಾಗೂ ತೆರಿಗೆಗಳನ್ನು ಸಂಗ್ರಹಿಸುವಲ್ಲಿ/ವಸೂಲಾತಿ ಮಾಡುವಲ್ಲಿ ತಪ್ಪುಗಳನ್ನು ಸಮಯೋಚಿತವಾಗಿ ಪತ್ತೆಹಚ್ಚುವ ಹಾಗೂ ಅವುಗಳ ಸರಿಪಡಿಸುವಿಕೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಒಂದು ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಸ್ಥಾಪಿಸುವಂತೆ ವಾಣಿಜ್ಯ ತೆರಿಗೆ ಇಲಾಖೆಗೆ ಶಿಫಾರಸು ಮಾಡಲಾಗಿದ್ದಿತು.

ಇಲಾಖೆಯು ಒಂದು ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಜೂನ್ 2011ರಿಂದ ಜಾರಿಗೆ ಬರುವಂತೆ ಸ್ಥಾಪಿಸಿದ್ದಿತು ಎಂಬುದನ್ನು ಲೆಕ್ಕಕಪರಿಶೋಧನೆಯು ಒಪ್ಪುತ್ತದೆ. ಆಂತರಿಕ ಲೆಕ್ಕಪರಿಶೋಧನಾ ವಿಭಾಗವು, ಇಲಾಖೆಯು ನಿರ್ವಹಿಸುತ್ತಿರುವಂತಹ ಎಲ್ಲಾ ಅಧಿನಿಯಮಗಳು/ನಿಯಮಗಳ ಅಗತ್ಯತೆಗಳನ್ನು ಪೂರೈಸುತ್ತಿದೆ. ಅದರ ಪ್ರಮುಖ ಗಮನವು ಮೌಲ್ಯ ವರ್ಧಿತ ತೆರಿಗೆ, ಕರ್ನಾಟಕ ಮಾರಾಟಗಳ ಮೇಲಿನ ತೆರಿಗೆ ಹಾಗೂ ಕೇಂದ್ರ ಮಾರಾಟಗಳ ಮೇಲಿನ ತೆರಿಗೆ ರಾಜಸ್ವ/ವರಮಾನದ ಮೇಲೆ ಕೇಂದ್ರೀಕೃತಗೊಂಡಿರುತ್ತದೆ.

---

22 ಸ್ಥಳೀಯ ಮೌವತೆ ಕಚೇರಿಗಳು/ಮೌವತೆ ಉಪ–ಕಚೇಇಗಳು, 205, 193, 300, 191, 540, 525, 521, 375, 373, 340, 370, 495, 481, 515 ಹಾಗೂ 465, ಮನೋರಂಜನಾ ತೆರಿಗೆ ಕಚೇರಿಗಳು–4, ವೃತ್ತಿಗಳ ಮೇಲಿನ ತೆರಿಗೆ ಕಚೇರಿಗಳು –1, 7 ಮತ್ತು 8 ಹಾಗೂ ವಿಲಾಸಗಳ ಮೇಲಿನ ತೆರಿಗೆ ಕಚೇರಿಗಳು – 4 ಕಚೇರಿಗಳು.

## 2.4.20 ನಿರ್ಣಯ

ಕಂಡಿಕೆ 2.4.7ರಲ್ಲಿ ತಿಳಿಸಿರುವಂತೆ, ವೃತ್ತಿಗಳ ಮೇಲಿನ ತೆರಿಗೆ, ಮನೋರಂಜನೆಗಳ ಮೇಲಿನ ತೆರಿಗೆ ಹಾಗೂ ವಿಲಾಸಗಳ ಮೇಲಿನ ತೆರಿಗೆಗಳ ವಾರ್ಷಿಕ ರಾಜಸ್ವ/ವರಮಾನದ ಬೆಳವಣಿಗೆಯು 2011–12ರಿಂದ 2015–16ರ ಅವಧಿಯಲ್ಲಿ ₹ 48.81 ಕೋಟಿ ಆಗಿದ್ದಿತು. ಮೌವತೆ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವಂತಹ ವರ್ತಕರುಗಳು ಹಾಗೂ ವೃತ್ತಿಗಳ ಮೇಲಿನೆ ತೆರಿಗೆ ಅಡಿಯಲ್ಲಿ ದಾಖಲಿಸಿಕೊಂಡಿರುವಂತಹ ವ್ಯಕ್ತಿಗಳಿಂದ ರಾಜಸ್ವ/ವರಮಾನದ ಸೋರಿಕೆಯನ್ನು ತಡೆಯುವುದಕ್ಕಾಗಿ ಮುಂಜಾಗ್ರತಾ ನಿಯಂತ್ರಣಗಳನ್ನು ಹಾಗೂ ಹಿಂದಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ತೆರಿಗೆ ಪಾವತಿದಾರರ ನಡುವೆ ಸಮಾನತೆಯನ್ನು ತರುವುದಕ್ಕಾಗಿ ಸುಧಾರಣಾ ಕ್ರಮಗಳನ್ನು ಸರ್ಕಾರ/ಇಲಾಖೆಯು ಪರಿಗಣಿಸಿದಲ್ಲಿ, ಸರ್ಕಾರವು ₹ 75.51 ಕೋಟಿ ಮೊತ್ತಕ್ಕೆ ಕಡಿಮೆ ಇಲ್ಲದಂತೆ ವಾರ್ಷಿಕ ಹೆಚ್ಚುವರಿ ರಾಜಸ್ವ/ವರಮಾನವನ್ನು ಗಳಿಸಬಹುದು.

ಪ್ರಸ್ತುತ ತೆರಿಗೆ ಜಾಲದ ಹೊರಗೆ ಇರುವಂತಹ ಸಂಭಾವ್ಯ ತೆರಿಗೆ ಪಾವತಿದಾರರನ್ನು ಸೆರೆಹಿಡಿಯುವ ಸಲುವಾಗಿ ಇಲಾಖೆಯು ಕಾರ್ಯನೀತಿಗಳ ಕೊರತೆಯಿಂದಿದ್ದಿತು. ಅಧಿನಿಯಮ/ನಿಯಮಗಳನ್ನು ದೊಡ್ಡ ಪ್ರಮಾಣದಲ್ಲಿ ಅನುಸರಿಸದಿರುವಿಕೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಸಾರಿಗೆ ವಾಹನಗಳು, ಸೇವಾ ತೆರಿಗೆ ಕರದಾತರು, ಇತ್ಯಾದಿ ಅತ್ಯುತ್ತಮವಾಗಿ ಸಂಘಟಿತ ಹಾಗೂ ಅತ್ಯುತ್ತಮವಾಗಿ ನಿಯಂತ್ರಿತ ಮೂಲಗಳನ್ನು ಬಳಸಿಕೊಳ್ಳುವಲ್ಲಿಯೂ ಕೂಡ ಇಲಾಖೆಯು ವಿಫಲಗೊಂಡಿದ್ದಿತು. ಅಸಂಘಟಿತ ವಲಯದ ಅಡಿಯಲ್ಲಿನ ಸಂಭಾವ್ಯ ತೆರಿಗೆ ಪಾವತಿದಾರರರನ್ನು ಗುರುತಿಸುವುದು ಕಷ್ಟಕರವಾದ ಕಾರ್ಯವಾದರೂ, ಈ ವಲಯದಿಂದ ಬಾಕಿಯಿರುವಂತಹ ರಾಜಸ್ವ/ವರಮಾನವನ್ನು ಅತ್ಯುತ್ತಮಗೊಳಿಸುವತ್ತ ಯಾವುದೇ ಕಾರ್ಯನೀತಿಯನ್ನೂ ಅಭಿವೃದ್ಧಿಪಡಿಸಿರಲಿಲ್ಲ. ಪ್ರಸಕ್ತ ಇರುವಂತಹ ಕರದಾತರುಗಳ ಮೇಲ್ವಿಚಾರಣೆಯು ಕೊರತೆಯಿಂದ ಕೂಡಿದ್ದಿತು, ಇದು ಸಲ್ಲಿಕೆಗಳನ್ನು ಸಲ್ಲಿಸದಿರುವಲ್ಲಿ ಹಾಗೂ ತೆರಿಗೆಗಳನ್ನು ಪಾವತಿಸದಿರುವಲ್ಲಿ/ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿದ್ದಿತು. ಇಲಾಖೆಯು, PAN ಇವೇ ಮುಂತಾದ ಮೂಲ ಮಾಹಿತಿಗಳನ್ನು ಸೆರೆಹಿಡಿದಿರಲಿಲ್ಲ, ಇದು, ತೆರಿಗೆ ಬಾಧ್ಯತೆಯ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಹಾಗೂ ತೆರಿಗೆ ಮೂಲವನ್ನು ವಿಸ್ತೃತಗೊಳಿಸುವಲ್ಲಿ ಸವಾಲುಗಳನ್ನು ಒಡ್ಡುತ್ತದೆ.

ಅಪ್ರಧಾನ ತೆರಿಗೆಗಳ ನಿರ್ವಹಣೆಗಾಗಿ ಬಳಸಲಾಗುತ್ತಿದ್ದಂತಹ ತಂತ್ರಾಂಶ ಅನ್ವಯವು (PELSoft), ಮೌವತೆಯಲ್ಲಿ ವರದಿ ಮಾಡಲಾಗಿದ್ದಂತಹ ವಹಿವಾಟಿನ ಆಧಾರದ ಮೇರೆಗೆ ತೆರಿಗೆಗಳನ್ನು ಪಾವತಿಸದಿರುವುದು/ಕಡಿಮೆ ಪ್ರಮಾಣದಲ್ಲಿ ಪಾವತಿಸಿರುವುದು ಹಾಗೂ ವರ್ತಕರು ಪಾವತಿಸದಿರುವ ಪಾವತಿಗಳನ್ನು ಅಸಮರ್ಪಕವಾಗಿದ್ದಿತು.

ಅದೇ ವೇಳೆಯಲ್ಲಿ, ವಾಣಿಜ್ಯ ತೆರಿಗೆ ಇಲಾಖೆಯು, ಎಲ್ಲಾ ತೆರಿಗೆ ಪಾವತಿದಾರರನ್ನೂ ಒಂದೇ ರೀತಿ ನಡೆಸಿಕೊಳ್ಳುವಲ್ಲಿ ವಿಫಲಗೊಂಡಿದ್ದಿತು ಹಾಗೂ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ವ್ಯಾಪಾರವ್ಯವಹಾರ ಸಂಸ್ಥೆಗಳು ಹಾಗೂ ಉದ್ಯೋಗ ಅಧಿನಿಯಮದ ಅಡಿಯಲ್ಲಿ ತೆರಿಗೆ ಪಾವತಿಯಿಂದ ವಿನಾಯಿತಿಯನ್ನು ಹೊಂದಿದವರಿಂದಲೂ ರಾಜಸ್ವ/ವರಮಾನವನ್ನು ವಸೂಲಾತಿ ಮಾಡಿದ್ದಿತು.

ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆ, ರಾಜ್ಯ ಸರ್ಕಾರದ ಇಲಾಖೆಗಳು/ಪರವಾನಿಗೆಗಳನ್ನು ನೀಡುವ ಅಧಿಕಾರಿಗಳನ್ನು ವೃತ್ತಿಗಳ ಮೇಲಿನ ತೆರಿಗೆಯ ವಸೂಲಾತಿ ಪ್ರತಿನಿಧಿಗಳನ್ನಾಗಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು ಎಂಬುದಾಗಿ ಉತ್ತರಿಸಲಾಗಿದ್ದಿತು. ಮುಂದುವರೆದು, ವೃತ್ತಿಗಳ ಮೇಲಿನ ತೆರಿಗೆ ಅಧಿನಿಯಮವನ್ನು ಸುಧಾರಣೆಗೊಳಿಸುವ ಉದ್ದೇಶದಿಂದ ಒಂದು ಸಮಿತಿಯನ್ನು ರಚಿಸಲಾಗಿದೆ ಹಾಗೂ ಲೆಕ್ಕಪರಿಶೋಧನೆಯು ಗಮನಿಸಿರುವಂತಹ ಅಂಶಗಳನ್ನು ಆ ಸಮಿತಿಗೆ ಪರಿಶೀಲನೆಗಾಗಿ ನೀಡಲಾಗುವುದು ಎಂಬುದಾಗಿ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ (ಹಣಕಾಸು) ಜೊತೆ ನಡೆಸಲಾದಂತಹ ನಿರ್ಗಮನ ಸಭೆಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿತು.

## 2.5 ಸಲ್ಲಿಕೆಗಳಲ್ಲಿ ಘೋಷಿಸಿಕೊಳ್ಳಲಾಗಿದ್ದಂತಹ ತೆರಿಗೆ ಬಾಧ್ಯತೆಯನ್ನು ಪಾವತಿಸದಿದ್ದುದು.

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ರ ಪರಿಚ್ಛೇದ 35(1)ರ ಅಡಿಯಲ್ಲಿ, ಪ್ರತಿಯೋರ್ವ ನೋಂದಾಯಿತ ವರ್ತಕರೂ ನಿರ್ದಿಷ್ಟ ನಮೂನೆಯಲ್ಲಿ ಒಂದು ಸಲ್ಲಿಕೆಯನ್ನು ಸಲ್ಲಿಸತಕ್ಕದ್ದು ಹಾಗೂ ಅಂತಹ ಸಲ್ಲಿಕೆಗಳಲ್ಲಿ ತೋರಿಸಲಾಗಿರುವಂತಹ ತೆರಿಗೆ ಬಾಧ್ಯತೆಯನ್ನು ತೆರಿಗೆ ಅವಧಿಯು ಮುಕ್ತಾಯಗೊಂಡ ದಿನಾಂಕದಿಂದ 20 ದಿನಗಳ ಒಳಗೆ (ಅಥವಾ ಸಂಯೋಜನಾ ತೆರಿಗೆ ಪಾವತಿ ಅಡಿಯಲ್ಲಿ ಕರನಿರ್ಧಾರಣೆ ಮಾಡಲಾದಂತಹ ವರ್ತಕರಿಗೆ ಸಂಬಂಧಿಸಿದಂತೆ 15 ದಿನಗಳ ಒಳಗೆ) ಬಾಕಿಯಿರುವಂತಹ ತೆರಿಗೆಯನ್ನು ಪಾವತಿಸತಕ್ಕದ್ದು.

413 ಕರದಾತರುಗಳು ಏಪ್ರಿಲ್ 2010 ಹಾಗೂ ಮಾರ್ಚ್ 2015ರ ನಡುವಿನ ತೆರಿಗೆ ಅವಧಿಗಳಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದಂತಹ 947 ಸಲ್ಲಿಕೆಗಳಿಗಾಗಿ ತೋರಿಸಲಾಗಿದ್ದಂತಹ ತೆರಿಗೆ ಬಾಧ್ಯತೆ ಮೊತ್ತ ₹ 5.51 ಕೋಟಿಯನ್ನು ಕರದಾತರು ಪಾವತಿಸಿರಲಿಲ್ಲ ಎಂಬುದನ್ನು ಎಂಟು[23] ಜಿಲ್ಲೆಗಳಲ್ಲಿ 38 ಸ್ಥಳೀಯ ಮೌವತೆ ಕಚೇರಿಗಳಲ್ಲಿ ಜನವರಿ 2015 ಹಾಗೂ ಜೂನ್ 2016ರ ನಡುವಿನ ಅವಧಿಯಲ್ಲಿ ಮಾಡಲಾದಂತಹ ಸಲ್ಲಿಕೆಗಳ ಪರೀಕ್ಷಾ–ಪರಿಶೀಲನೆಯು ತೋರಿಸಿಕೊಟ್ಟಿತು. ಅನ್ವಯಗೊಳ್ಳುವ ದರದಲ್ಲಿ ದಂಡ ಹಾಗೂ ಬಡ್ಡಿಯು ಅನುಕ್ರಮವಾಗಿ ₹ 0.55 ಕೋಟಿ ಹಾಗೂ ₹ 2.78 ಕೋಟಿ ಆಗುತ್ತದೆ. ಬಾಕಿಯಿರುವಂತಹ ಒಟ್ಟಾರೆ ಮೊತ್ತವು ₹ 8.84 ಕೋಟಿ ಆಗುತ್ತದೆ.

ಸಲ್ಲಿಕೆಗಳ ಆನ್‌ಲೈನ್ ಸಲ್ಲಿಕೆಗಾಗಿನ 'ಇ–ವರದಿ' ('*e-VARADI*') ತಂತ್ರಾಂಶ ಅನ್ವಯವು, ತೆರಿಗೆ ಬಾಧ್ಯತೆಯನ್ನು ಸಂಪೂರ್ಣವಾಗಿ ಪಾವತಿಸಿರುವಲ್ಲಿನ ಎಲ್ಲಾ ಸಲ್ಲಿಕೆಗಳಿಗೆ ಸಂಬಂಧಿಸಿದಂತೆ **'ಸ್ವೀಕೃತಗೊಂಡಿರುವುದಿಲ್ಲ'** ಎಂಬ ಸ್ಥಿತಿಗತಿಯನ್ನು ಸೂಚಿಸುತ್ತದೆಯಾದರೂ, ಸಂಬಂಧಿತ ಅಧಿಕಾರಿಗಳು ಈ ಪ್ರಕರಣಗಳನ್ನು ಅನುಸರಿಸುವಲ್ಲಿ ಹಾಗೂ ಸಮಯೋಚಿತ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲಗೊಂಡಿದ್ದರು. ಹಿಂದಿನ ವರದಿಗಳಲ್ಲಿ, ಅದರ ಬಗ್ಗೆಯೇ ಸ್ಪಷ್ಟಪಡಿಸಿದ್ದ ಹೊರತಾಗಿಯೂ ನಿಯಮಬಾಹಿರತೆಯು ಮುಂದುವರೆದುಕೊಂಡು ಹೋಗಿರುವುದು ತಂತ್ರಾಂಶ ಅನ್ವಯದ ಮಟ್ಟದಲ್ಲಿ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಇಲಾಖೆಯು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಇನ್ನೂ ಬಾಕಿಯಿದೆ ಎಂಬುದನ್ನೂ ಸೂಚಿಸುತ್ತದೆ. ಗಣಕೀಕೃತ ವ್ಯವಸ್ಥೆಯ ಒಳಗೆ ಉನ್ನತ ಮಟ್ಟಗಳಲ್ಲಿ ಪರಿಹಾರ ಒದಗಿಸುವುದಕ್ಕಾಗಿ ಒಂದು ಬಾಕಿಯಿರುವಿಕೆಗಳ ವರದಿಯನ್ನು ಹೊರತೆಗೆಯುವಿಕೆಯ ಒಂದು ವ್ಯವಸ್ಥೆಯನ್ನು ಅಳವಡಿಸಬೇಕು ಎಂಬುದಾಗಿ ಈ ಮೂಲಕ ಶಿಫಾರಸ್ಸು ಮಾಡಲಾಗುತ್ತಿದೆ.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ಜನವರಿ ಮತ್ತು ಆಗಸ್ಟ್ 2016ರಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತರವರು ಹಾಗೂ ಸರ್ಕಾರದ ಗಮನಕ್ಕೆ ತಂದಾಗ, ಒಂಬತ್ತು ವರ್ತಕರುಗಳಿಂದ ₹ 19.19 ಲಕ್ಷ ಮೊತ್ತವನ್ನು ಈಗಾಗಲೇ ವಸೂಲಾತಿ ಮಾಡಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು. ಇಬ್ಬರು ವರ್ತಕರಿಗೆ ಸಂಬಂಧಿಸಿದಂತೆ, ತೆರಿಗೆಯನ್ನು ಇಲಾಖೆಗೆ ಪಾವತಿಸಿರುವುದರಿಂದ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶವನ್ನು ಕೈಬಿಡುವಂತೆ ಸರ್ಕಾರವು ತಿಳಿಸಿತು. ತೆರಿಗೆ ಪಾವತಿಗೆ ಸಂಬಂಧಿಸಿದಮ್ತೆ ಇಲಾಖೆಯು ಒದಗಿಸಿದಂತಹ ಪಾವತಿ ವಿವರಗಳು ವಿದ್ಯುನ್ಮಾನೀಯ ಸಲ್ಲಿಕೆ ವ್ಯವಸ್ಥೆಯಲ್ಲಿ (eFS). ಗುರುತಿಸಲಾಗಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಉಳಿದ ವರ್ತಕರಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

## 2.6 ಕರ್ನಾಟಕ ಮೌವತೆ ಅಧಿನಿಯಮದ ಪರಿಚ್ಛೇದ 72(1)ರ ಅಡಿಯಲ್ಲಿ ದಂಡವನ್ನು ವಿಧಿಸದಿದ್ದುದು

ಕರ್ನಾಟಕ ಮೌವತೆ ಅಧಿನಿಯಮದ ಪರಿಚ್ಛೇದ 35(1)ರ ಅಡಿಯಲ್ಲಿ, ಪ್ರತಿಯೋರ್ವ ವರ್ತಕರೂ ಒಂದು ಸಲ್ಲಿಕೆಯನ್ನು ಸಲ್ಲಿಸತಕ್ಕದ್ದು ಹಾಗೂ ಅಂತಹ ಸಲ್ಲಿಕೆಯಲ್ಲಿ ಪಾವತಿಸಲು ಬಾಧ್ಯವಿರುವ ತೆರಿಗೆಯನ್ನು ಹಿಂದಿನ ತಿಂಗಳು ಮುಕ್ತಾಯಗೊಂಡ ದಿನಾಂಕದ ನಂತರ ಅಥವಾ ಇತರೆ ಯಾವುದೇ ತೆರಿಗೆ ಅವಧಿ, ಯಾವುದು ಅನ್ವಯವೋ ಆ ತೆರಿಗೆ ಅವಧಿಯು ಮುಕ್ತಾಯಗೊಂಡ ದಿನಾಂಕದಿಂದ ಇಪ್ಪತ್ತು ದಿನಗಳ ಒಳಗೆ ಪಾವತಿಸತಕ್ಕದ್ದು.

ಮುಂದುವರೆದು, ಕರ್ನಾಟಕ ಮೌವತೆ ಅಧಿನಿಯಮದ ಪರಿಚ್ಛೇದ 72(1)ರ ಪ್ರಕಾರ, ಒಂದು ಸಲ್ಲಿಕೆಯನ್ನು ಸಲ್ಲಿಸುವಲ್ಲಿ ವಿಫಲರಾಗುವ ಅಥವಾ ಅಧಿನಿಯಮದ ಅಡಿಯಲ್ಲಿ ಅಗತ್ಯವಿರುವಂತೆ ಸಲ್ಲಿಸುವ ಯಾವುದೇ ಸಲ್ಲಿಕೆಯಲ್ಲಿ ಬಾಕಿಯಿರುವಂತಹ ತೆರಿಗೆಯನ್ನು ಪಾವತಿಸುವಲ್ಲಿ ತಪ್ಪಿತಸ್ಥರಾಗುವ ಓರ್ವ ವರ್ತಕರು ಬಾಕಿಯಿರುವಂತಹ ಯಾವುದೇ ತೆರಿಗೆ ಅಥವಾ ಬಡ್ಡಿಯನ್ನು ಈ ಕೆಳಗಿನವುಗಳಿಗೆ ಸಮಾನವಾದಂತಹ ಒಂದು ದಂಡದ ಮೊತ್ತದ ಜೊತೆಗೆ ಪಾವತಿಸಲು ಬಾಧ್ಯರಾಗಿರುತ್ತಾರೆ:

[23] ಬೆಂಗಳೂರು, ಬಾಗಲಕೋಟೆ, ಬಳ್ಳಾರಿ, ದಕ್ಷಿಣ ಕನ್ನಡ, ಧಾರವಾಡ, ಮೈಸೂರು, ರಾಮನಗರ ಮತ್ತು ತುಮಕೂರು.

- ಬಾಕಿಯಿರುವಂತಹ ತೆರಿಗೆ ಮೊತ್ತದ ಪಾವತಿಯಿಂದ ತಪ್ಪಿತಸ್ಥರಾಗಿರುವುದು 10 ದಿನಗಳನ್ನು ಮೀರಿರದಿದ್ದಲ್ಲಿ, ಶೇಕಡಾ ಐದರಷ್ಟು ಅಥವಾ ₹ 50, ಯಾವುದು ಅಧಿಕವೋ ಆ ಮೊತ್ತ ಹಾಗೂ
- ತೆರಿಗೆ ಪಾವತಿಯಿಂದ ತಪ್ಪಿತಸ್ಥರಾಗಿರುವುದು 10 ದಿನಗಳನ್ನು ಮೀರಿದ್ದಲ್ಲಿ, ಬಾಕಿಯಿರುವ ತೆರಿಗೆ ಮೊತ್ತದ ಶೇಕಡಾ ಹತ್ತರಷ್ಟು,

ಮುಂದುವರೆದು, ಕರ್ನಾಟಕ ಮೌವತೆ ಅಧಿನಿಯಮ, 2003ರ ಪರಿಚ್ಛೇದ 72(6)ರ ಪ್ರಕಾರ, ಮೇಲೆ ತಿಳಿಸಲಾದಂತಹ ದಂಡವನ್ನು ವಿಧಿಸುವ ಅಧಿಕಾರವನ್ನು, ಸಲ್ಲಿಕೆಗಳನ್ನು ಯಾವ ಅಧಿಕಾರಿಯವರಿಗೆ ಸಲ್ಲಿಸಲಾಗುವುದೋ ಆ ಅಧಿಕಾರಿಯವರಿಗೆ ಅಥವಾ ಒಂದು ಕರನಿರ್ಧಾರಣೆಯನ್ನು ಅಥವಾ ಪುನರ್–ಕರನಿರ್ಧಾರಣೆಯನ್ನು ಮಾಡುವ ನಿರ್ದಿಷ್ಟ ಅಧಿಕಾರಿಯವರಿಗೆ ನೀಡತಕ್ಕದ್ದು.

ಡಿಸೆಂಬರ್ 2014 ಹಾಗೂ ಫೆಬ್ರವರಿ 2016ರ ನಡುವೆ ಇಪ್ಪತ್ತ–ಒಂದು[24] ಜಿಲ್ಲೆಗಳಲ್ಲಿ 67 ಕಚೇರಿಗಳಲ್ಲಿ (56 ಸ್ಥಳೀಯ ಮೌವತೆ ಕಚೇರಿಗಳು, ನಾಲ್ಕು ಮೌವತೆ ಉಪ–ಕಚೇರಿಗಳು ಹಾಗೂ ಏಳು ಲೆಕ್ಕಪರಿಶೋಧನಾ ಕಚೇರಿಗಳು) ಮಾಡಲಾದಂತಹ ದಾಖಲೆಗಳ ಪರೀಕ್ಷಾ–ಪರಿಶೀಲನೆಯ ವೇಳೆಯಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

(ಎ) 290 ಕರದಾತರುಗಳು 2011–12ರಿಂದ 2013–14 ಸಾಲುಗಳಿಗೆ ಸಲ್ಲಿಸಿದ್ದ ಸಲ್ಲಿಕೆಗಳಲ್ಲಿ ₹ 185.94 ಕೋಟಿ ಮೊತ್ತದಷ್ಟು ತೆರಿಗೆಯನ್ನು ವಿಳಂಬವಾಗಿ ಪಾವತಿಸಲಾಗಿದ್ದಿತು (ಅನ್ವಯಗೊಳ್ಳುವ ತೆರಿಗೆ ಅವಧಿಯು ಮುಕ್ತಾಯಗೊಂಡನಂತರ 20 ದಿನಗಳಿಗೂ ಮೀರಿದಂತೆ). ಈ ಎಲ್ಲಾ ಪ್ರಕರಣಗಳೂ ಅಧಿನಿಯಮದ ಪರಿಚ್ಛೇದ 72(1)ರ ಅಡಿಯಲ್ಲಿ ದಂಡವನ್ನು ಆಕರ್ಷಿಸುತ್ತಿದ್ದವಾದರೂ, ಕರದಾತರು ಅದನ್ನು ಪಾವತಿಸಿರಲಿಲ್ಲ, ಅದನ್ನು ವಿಧಿಸುವ ಸಲುವಾಗಿ ಸಂಬಂಧಿತ ಅಧಿಕಾರಿಗಳು ಯಾವುದೇ ಪ್ರಯತ್ನಗಳನ್ನೂ ಮಾಡಿರಲಿಲ್ಲ. ಇದು ₹ 12.55 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸದಿರುವಲ್ಲಿ ಪರಿಣಮಿಸಿತು.

(ಬಿ) ಅದೇ ಆಧಾರದ ಮೇರೆಗೆ, 2008–09, 2010–11, 2011–12 ಹಾಗೂ 2013–14 ಸಾಲುಗಳಿಗೆ 10 ಕರದಾತರುಗಳು ಸಲ್ಲಿಕೆಗಳನ್ನು ಸಲ್ಲಿಸಿದರು ಹಾಗೂ ₹ 6.03 ಕೋಟಿ ಮೊತ್ತದಷ್ಟು ತೆರಿಗೆಯನ್ನು ವಿಳಂಬವಾಗಿ ಪಾವತಿಸಿದ್ದರು. ಮೇಲೆ ತಿಳಿಸಲಾದಂತಹ ಅವಧಿಗಳಿಗೆ ಕರನಿರ್ಧಾರಣಾ ಅಧಿಕಾರಿಗಳು 2012–13ರಿಂದ 2014–15 ಸಾಲುಗಳಲ್ಲಿ ಪುನರ್–ಕರನಿರ್ಧಾರಣಾ ಆದೇಶಗಳನ್ನು ಜಾರಿಗೊಳಿಸಿದರಾದರೂ ತೆರಿಗೆಯನ್ನು ವಿಳಂಬವಾಗಿ ಪಾವತಿಸಿದ್ದಕ್ಕೆ ದಂಡವನ್ನು ವಿಧಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಇದು, ₹ 0.38 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸದಿರುವಲ್ಲಿ ಪರಿಣಮಿಸಿತು.

ವರ್ತಕರುಗಳು ಸಲ್ಲಿಸಿದ್ದಂತಹ ಸಲ್ಲಿಕೆಗಳನ್ನು ಮೂಲ ಪರಿಶೀಲನೆ ಮಾಡಲಿಲ್ಲ ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ ಮತ್ತು ಆದ್ದರಿಂದ ದಂಡವನ್ನು ವಿಧಿಸುವುದರಿಂದ ತಪ್ಪಿಸಿಕೊಂಡು, ವಿಳಂಬವಾಗಿ ಮಾಡಲಾಗಿದ್ದ ಪಾವತಿಗಳು ಗಮನಕ್ಕೆ ಬಾರದೇ ಹೋದವು.

ಈ ಅಧಿನಿಯಮದ ಅಡಿಯಲ್ಲಿ ದಂಡ ವಿಧಿಸುವಿಕೆಯನ್ನು ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಡಿಸೆಂಬರ್ 2014ರಲ್ಲಿ ಎತ್ತಿಹಿಡಿದಿದ್ದ ಹೊರತಾಗಿಯೂ, ಇಲಾಖೆಯು ತಂತ್ರಾಂಶ ಅನ್ವಯದಲ್ಲಿ ಈ ಅನುವನ್ನು ಇನ್ನೂ ಅಳವಡಿಸಿಲ್ಲ. ಆದ್ದರಿಂದ, ವರ್ತಕರುಗಳು ಸಮಯೋಚಿತವಾಗಿ ಸಲ್ಲಿಕೆಗಳನ್ನು ಸಲ್ಲಿಸಿರುವರು ಹಾಗೂ ತೆರಿಗೆಗಳನ್ನು ಪಾವತಿಸಿರುವರು ಹಾಗೂ ಸರ್ಕಾರದ ರಾಜಸ್ವ/ವರಮಾನವನ್ನು ವಸೂಲಾತಿ ಮಾಡುವಲ್ಲಿನ ವಿಳಂಬಕ್ಕೆ ಅನ್ವಯಗೊಳ್ಳುವ ಕಾರ್ಯವಿಧಾನಗಳನ್ನು ಅನುಸರಿಸುವ ಮೂಲಕ ದಂಡವನ್ನು ವಿಧಿಸುವುದರ ಮೂಲಕ ನಷ್ಟವನ್ನು ತುಂಬಿಕೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅದನ್ನು ತ್ವರಿತಗೊಳಿಸಬೇಕೆಂಬುದಾಗಿ ಈ ಮೂಲಕ ಶಿಫಾರಸ್ಸು ಮಾಡಲಾಗುತ್ತಿದೆ.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ವಾಣಿಜ್ಯ ತೆರಿಗೆಗಳ ಆಯುಕ್ತರವರು ಹಾಗೂ ಸರ್ಕಾರಕ್ಕೆ ಜನವರಿ ಮತ್ತು ಜುಲೈ 2016ರ ನಡುವೆ ಗಮನಕ್ಕೆ ತಂದಾಗ, 87 ವರ್ತಕರಿಗೆ ಸಂಬಂಧಿಸಿದಂತೆ ₹ 1.86 ಕೋಟಿ ಮೊತ್ತವನ್ನು ಈಗಾಗಲೇ ವಸೂಲಾತಿ ಮಾಡಲಾಗಿದೆ, ದಂಡವನ್ನು ವಸೂಲಾತಿ ಮಾಡುವುದಕ್ಕಾಗಿ 31 ವರ್ತಕರಿಗೆ ಸಂಬಂಧಿಸಿದಂತೆ ಇಲಾಖೆಯು ನೋಟೀಸುಗಳನ್ನು ನೀಡಿದೆ ಹಾಗೂ ಎಂಟು ವರ್ತಕರಿಗೆ ಸಂಬಂಧಿಸಿದಂತೆ ದಂಡವನ್ನು ವಿಧಿಸಿ ಆದೇಶಗಳನ್ನು ಜಾರಿಗೊಳಿಸಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು.

ಮತ್ತೊಂದು ಪ್ರಕರಣದಲ್ಲಿ, ಮಾರಾಟಗಳನ್ನು ಭಾರತೀಯ ರೈಲ್ವೇ ಇಲಾಖೆಗೆ ಮಾಡಲಾಗಿದ್ದಿತು ಹಾಗೂ ಪಾವತಿಗಳನ್ನು ವಿಳಂಬವಾಗಿ ಸ್ವೀಕರಿಸಲಾಯಿತು ಎಂಬುದಾಗಿ ಕರದಾತರುಗಳು ನೀಡಿರುವ ಉತ್ತರದ ಆಧಾರದ

[24] ಬಳ್ಳಾರಿ, ಬೆಳಗಾವಿ, ಬೆಂಗಳೂರು, ಬಿದರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಕಲಬುರಗಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ ಮತ್ತು ವಿಜಯಪುರ.

ಮೇರೆಗೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶವನ್ನು ಕೈಬಿಡಬೇಕೆಂಬುದಾಗಿ ಸರ್ಕಾರವು ಉತ್ತರಿಸಿತು. ಈ ಕಾರಣದಿಂದ ವರ್ತಕರು ನಿರ್ದಿಷ್ಟ ದಿನಾಂಕದ ಒಳಗೆ ತೆರಿಗೆ ಪಾವತಿಯನ್ನು ಮಾಡಿರಲಿಲ್ಲ. ದೆಹಲಿಯ ಗೌರವಾನ್ವಿತ ಉಚ್ಛ ನ್ಯಾಯಾಲಯವು ನೀಡಿರುವ ತೀರ್ಪಿನ[25] ಅನುಸಾರ, ಸಲ್ಲಿಕೆಯನ್ನು ಸಲ್ಲಿಸುವಲ್ಲಿನ ಹಾಗೂ ತೆರಿಗೆ ಪಾವತಿಯಲ್ಲಿನ ವಿಳಂಬಕ್ಕೆ ಪ್ರಾಮಾಣಿಕ ಕಾರಣಗಳಿದ್ದಲ್ಲಿ ಯಾವುದೇ ದಂಡವನ್ನೂ ವಿಧಿಸಲಾಗುವುದಿಲ್ಲ ಎಂಬುದಾಗಿಯೂ ತಿಳಿಸಿತು.

ಇನ್ವಾಯ್ಸುಗಳನ್ನು ನೀಡಿದ ವೇಳೆಯಲ್ಲಿಯೇ ಮಾರಾಟಗಳು ಆಗಿವೆ ಎಂಬುದಾಗಿ ಭಾವಿಸಲಾಗುವುದು ಮತ್ತು ಆದ್ದರಿಂದ ತೆರಿಗೆ ಇನ್ವಾಯ್ಸುಗಳನ್ನು ನೀಡಿದ ಅವಧಿಯಲ್ಲಿ ಸರಕುಗಳ ಮೇಲೆ ತೆರಿಗೆಯನ್ನು ವಿಧಿಸಬೇಕಾದ ಮಾರಾಟಗಳಲ್ಲಿ ಸೇರಿಸತಕ್ಕದ್ದು ಎಂಬುದಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ ಪರಿಚ್ಛೇದ 7 ತಿಳಿಸಿರುವುದರಿಂದ ಉತ್ತರವು ಒಪ್ಪುವಂತಿಲ್ಲ. ಆದ್ದರಿಂದ, ಓರ್ವ ನೋಂದಾಯಿತ ವರ್ತಕರು ಅಂತಹ ವಹಿವಾಟನ್ನು ತೆರಿಗೆ ಇನ್ವಾಯ್ಸುಗಳನ್ನು ನೀಡಿದ ತಿಂಗಳಿನಲ್ಲಿನ ಅಂತಹ ವಹಿವಾಟಿನಲ್ಲಿ ಘೋಷಿಸಿಕೊಳ್ಳತಕ್ಕದ್ದು.

ಉಳಿದ ವರ್ತಕರಿಗೆ ಸಂಬಂಧಿಸಿದಂತೆ ಉತ್ತರವನ್ನು ಇನ್ನೂ ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

## 2.7 ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಲೆಕ್ಕಪತ್ರಗಳ ತ:ಖ್ತೆಗಳಲ್ಲಿ ಘೋಷಿಸಿಕೊಳ್ಳಲಾಗಿದ್ದ ವ್ಯತ್ಯಾಸದ ತೆರಿಗೆ ಬಾಧ್ಯತೆಯನ್ನು ಪಾವತಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ಪಾವತಿಸಿದ್ದುದು

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ರ ಪರಿಚ್ಛೇದ 31(4)ರ ಅನುಸಾರ, ಒಂದು ವರ್ಷದಲ್ಲಿ ಒಂದು ನಿರ್ದಿಷ್ಟ ಮೊತ್ತವನ್ನು[26] ಮೀರುವಂತಹ ಒಟ್ಟಾರೆ ವಹಿವಾಟನ್ನು ಮಾಡಿರುವಂತಹ ಪ್ರತಿಯೋರ್ವ ವರ್ತಕರು ತಮ್ಮ ಲೆಕ್ಕಪತ್ರಗಳನ್ನು ಓರ್ವರು ಚಾರ್ಟರ್ಡ್ ಅಕೌಂಟೆಂಟ್ ಅಥವಾ ಓರ್ವರು ಕಾಸ್ಟ್ ಅಕೌಂಟೆಂಟ್ ಅಥವಾ ಓರ್ವರು ಟ್ಯಾಕ್ಸ್ ಪ್ರಾಕ್ಟೀಷನರ್‌ರವರಿಂದ (ಲೆಕ್ಕಪರಿಶೋಧಕರು) ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಹಾಗೂ ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಲೆಕ್ಕಪತ್ರಗಳ ಒಂದು ಪ್ರತಿಯನ್ನು ನಮೂನೆ ಮೌವತೆ–240ರಲ್ಲಿ ಹಾಗೂ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಮತ್ತಿತರೆ ದಾಖಲೆಗಳನ್ನು ನಿರ್ದಿಷ್ಟ ಅಧಿಕಾರಿಯವರಿಗೆ ಸಲ್ಲಿಸತಕ್ಕದ್ದು.

ತೆರಿಗೆ ಪಾವತಿಗೆ ಸಂಬಂಧಿಸಿದಂತೆ ವರ್ತಕರ ಬಾಧ್ಯತೆ ಹಾಗೂ ತೆರಿಗೆ ಸಲ್ಲಿಕೆಗಳಲ್ಲಿ ಘೋಷಿಸಲಾಗಿರುವಂತೆ ಖರೀದಿಗಳ ಮೇಲಿನ ತೆರಿಗೆ ಜಮೆ/ಮರುಪಾವತಿಗೆ ಅವರ ಅರ್ಹತೆ ಹಾಗೂ ಲೆಕ್ಕಪರಿಶೋಧನೆಯಲ್ಲಿ ನಿರ್ಧಾರಣೆ ಮಾಡಲಾಗಿರುವಂತೆ ಅದಕ್ಕೆ ಅನುಗುಣವಾದಂತಹ ಮೊತ್ತದ ನಡುವೆ ಒಂದು ತುಲನಾತ್ಮಕ ತ:ಖ್ತೆಯನ್ನು ಒದಗಿಸಲು ನಮೂನೆ – 240 ಅನುವು ಮಾಡಿದೆ. ಅವುಗಳ ನಡುವೆ ವ್ಯತ್ಯಾಸಗಳು ಇದ್ದಲ್ಲಿ, ದಂಡ ಮತ್ತು ಬಡ್ಡಿಯ ಜೊತೆಯಲ್ಲಿ ವ್ಯತ್ಯಾಸದ ತೆರಿಗೆ ಮೊತ್ತವನ್ನು, ಯಾವುದಾದರೂ ಇದ್ದಲ್ಲಿ ಪಾವತಿಸುವಂತೆ ಅಥವಾ ಅವರಿಗೆ ಅರ್ಹವಿದ್ದಲ್ಲಿ ಮರುಪಾವತಿ ಮಾಡುವಂತೆ ಕೋರಲು ಸಲಹೆ ನೀಡತಕ್ಕದ್ದು.

ಜನವರಿ 2015 ಮತ್ತು ಫೆಬ್ರವರಿ 2016ರ ನಡುವೆ ಹತ್ತು[27] ಜಿಲ್ಲೆಗಳಲ್ಲಿ 24 ಮೌವತೆ ಕಚೇರಿಗಳು ಹಾಗೂ ಎರಡು ಮೌವತೆ ಉಪ–ಕಚೇರಿಗಳಲ್ಲಿ ಮಾಡಲಾದಂತಹ ದಾಖಲೆಗಳ ಪರೀಕ್ಷಾ–ಪರಿಶೀಲನೆಯ ವೇಳೆಯಲ್ಲಿ, 34 ವರ್ತಕರುಗಳು ತಮ್ಮ ನಮೂನೆ ಮೌವತೆ 240ರಲ್ಲಿನ ಲೆಕ್ಕಪರಿಶೋಧನೆಗೆ ಒಳಪ್ಪಟ್ಟಂತಹ ಲೆಕ್ಕಪತ್ರಗಳಲ್ಲಿ 2011–12ರಿಂದ 2013–14 ಸಾಲುಗಳಿಗೆ ಮಾಸಿಕ ಸಲ್ಲಿಕೆಗಳಲ್ಲಿ ಘೋಷಿಸಿಕೊಂಡಿದ್ದಂತಹ ತೆರಿಗೆ ಬಾಧ್ಯತೆಗಳಿಗೆ ಹೋಲಿಸಿದಲ್ಲಿ ₹ 4.08 ಕೋಟಿ ಮೊತ್ತದಷ್ಟು ಹೆಚ್ಚುವರಿ ತೆರಿಗೆ ಬಾಧ್ಯತೆಯನ್ನು ಘೋಷಿಸಿಕೊಂಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಧಿನಿಯಮದ ಅನುಸಾರ, ಘೋಷಿಸಿಕೊಳ್ಳಲಾಗಿದ್ದಂತಹ ಈ ಹೆಚ್ಚುವರಿ ತೆರಿಗೆ ಬಾಧ್ಯತೆಯನ್ನು ವರ್ತಕರುಗಳು ದಂಡ (ಶೇಕಡಾ 10ರ ದರದಲ್ಲಿ) ಹಾಗೂ ಬಡ್ಡಿ (ತಿಂಗಳು ಒಂದಕ್ಕೆ ಶೇಕಡಾ 1.5ರ ದರದಲ್ಲಿ ಪಾವತಿಸಬೇಕಿದ್ದಿತು. ಸಂಬಂಧಿತ ವರ್ತಕರು, ಆದಾಗ್ಯೂ, ಲೆಕ್ಕಪರಿಶೋಧನೆಗೆ ಒಳಗಾದಂತಹ ಲೆಕ್ಕಪತ್ರಗಳನ್ನು ಸಲ್ಲಿಸುವ ವೇಳೆಯಲ್ಲಿ ಬಾಕಿಗಳನ್ನು ತಾವಾಗಿಯೇ ಪಾವತಿಸಿರಲಿಲ್ಲ ಅಥವಾ ಸಂಬಂಧಿತ ಸ್ಥಳೀಯ ಮೌವತೆ ಕಚೇರಿಗಳು/ಮೌವತೆ ಉಪ–ಕಚೇರಿಗಳು ಈ ಹೆಚ್ಚುವರಿ ತೆರಿಗೆ ಮೊತ್ತದ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಿರಲಿಲ್ಲ. ಇದು, ₹ 4.08 ಕೋಟಿ ಮೊತ್ತದಷ್ಟು ತೆರಿಗೆಯನ್ನು ಪಾವತಿಸದಿರುವಲ್ಲಿ/ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿತು. ಮುಂದುವರೆದು, ಕರ್ನಾಟಕ ಮೌವತೆ ಅಧಿನಿಯಮ, 2003ರ ಪರಿಚ್ಛೇದಗಳು 72(2) ಮತ್ತು 36ರ ಅಡಿಯಲ್ಲಿ ವಿಧಿಸಬೇಕಾದ ದಂಡ ಮತ್ತು ಬಡ್ಡಿಯು ಅನುಕ್ರಮವಾಗಿ ₹ 0.40 ಕೋಟಿ ಹಾಗೂ ₹ 1.06 ಕೋಟಿ ಆಗಿದ್ದಿತು. ವರ್ತಕರು ನಮೂನೆ ಮೌವತೆ 240ರಲ್ಲಿ

[25] ಮೆ. ಕಾಲ್ಟಮ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್ vs ಮಾರಾಟಗಳ ಮೇಲಿನ ತೆರಿಗೆ ಅಧಿಕಾರಿಯವರು, ಈ ಪ್ರಕರಣದಲ್ಲಿ (121ಎಸ್‌ಟಿಸಿ600) ದೆಹಲಿಯ ಗೌರವಾನ್ವಿತ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪು.

[26] ₹40 ಲಕ್ಷ 31 ಮಾರ್ಚ್ 2010ರವರೆಗೆ, ₹ 60 ಲಕ್ಷ 1 ಏಪ್ರಿಲ್ 2010 ರಿಂದ 31 ಮಾರ್ಚ್ 2011ರವರೆಗೆ ಹಾಗೂ ಅಲ್ಲಿಂದ ಮುಂದಕ್ಕೆ ₹ 100 ಲಕ್ಷ.

[27] ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಬೆಂಗಳೂರು, ಚಿಕ್ಕಮಗಳೂರು, ಕಲಬುರಗಿ, ಕೊಡಗು, ರಾಮನಗರ, ಉಡುಪಿ ಹಾಗೂ ವಿಜಯಪುರ.

ಘೋಷಿಸಿಕೊಂಡಿರುವಂತಹ ತೆರಿಗೆಯ ಮೊತ್ತವು ಮಾಸಿಕ ಸಲ್ಲಿಕೆಗಳ ಮೂಲಕ ಪಾವತಿಸಲಾದಂತಹ ಮೊತ್ತಕ್ಕೆ ಅಧಿಕವಾಗಿರುವುದೇ ಎಂಬುದನ್ನು ಪರಿಶೀಲಿಸುವ ಸಲುವಾಗಿ ಒಂದು ಪರಿಪಾಠವನ್ನು/ವ್ಯವಸ್ಥೆಯನ್ನು ಇಟ್ಟುಕೊಂಡಿರುವುದಿಲ್ಲ. ಆದ್ದರಿಂದ, ಪಾವತಿಗಾಗಿ ತಗಾದೆಗಳನ್ನು ಸೃಷ್ಟಿಸುವಲ್ಲಿ ಸಮಯೋಚಿತ ತಗಾದೆಗಳನ್ನು ಸೃಷ್ಟಿಸುವಲ್ಲಿ ಇಲಾಖೆಯ ನಿಷ್ಕ್ರಿಯತೆಯು ವರ್ತಕರುಗಳು ಸ್ವತ: ತಾವೇ ಘೋಷಿಸಿಕೊಂಡಿದ್ದಂತಹ ಮೊತ್ತಗಳನ್ನು ಸರ್ಕಾರಕ್ಕೆ ವಸೂಲಾತಿಯಾಗಬೇಕಿರುವ ಮೊತ್ತಗಳಾಗಿ ತೋರಿಸುವಲ್ಲಿ ಪರಿಣಮಿಸಿತು.

ತಗಾದೆಯ ಎಲ್ಲಾ ವಿವಿಧ ಮೂಲಗಳಿಂದ (ಸಲ್ಲಿಕೆಗಳು, ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಲೆಕ್ಕಪತ್ರಗಳು, ಪುನರ್-ಕರನಿರ್ಧಾರಣಾ ಆದೇಶಗಳು, ಇತ್ಯಾದಿ) ವರ್ತಕರುಗಳ ತೆರಿಗೆ ಬಾಧ್ಯತೆಯನ್ನು ಸಂಕಲನಗೊಳಿಸುವಂತಹ ಒಂದು ಆನ್‌ಲೈನ್ ಲೆಡ್ಜರು ಖಾತೆಯನ್ನು ಸ್ಥಾಪಿಸುವುದಕ್ಕಾಗಿ ಲೆಕ್ಕಪರಿಶೋಧನೆಯು ಪದೇಪದೇ ಶಿಫಾರಸ್ಸು[28] ಮಾಡುತ್ತಾ ಬಂದಿದೆ ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅದೇ ಅಂಶವನ್ನು ಹಿಂದಿನ ವರದಿಯಲ್ಲಿಯೂ[29] ವರದಿ ಮಾಡಲಾಗಿದ್ದಿತು, ಇದು ಮೌವತೆ 240ರಲ್ಲಿ ಘೋಷಿಸಿಕೊಂಡಿರುವಂತಹ ತೆರಿಗೆ ಬಾಧ್ಯತೆಗಳನ್ನು ಚುಕ್ತಗೊಳಿಸುವ ಪರಿಪಾಠವು ವರ್ತಕರುಗಳಲ್ಲಿ ನ್ಯಾಯಸಮ್ಮತವಾಗಿ ಇರುವುದಿಲ್ಲ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ, ಈ ಸಮಸ್ಯೆಯ ನಿವಾರಣೆಗಾಗಿ ಇಲಾಖೆಯು ಮುನ್ನೆಚ್ಚರಿಕೆ ಕ್ರಮಗಳನ್ನು, ನಿರ್ದಿಷ್ಟವಾಗಿ ಅಂತಹ ಬಾಧ್ಯತೆಗಳನ್ನು ಬಾಕಿಯಿರುವಂತಹ ದಂಡದ ಜೊತೆಯಲ್ಲಿ, ವರ್ತಕರುಗಳು ತಮ್ಮ ತದನಂತರದ ಮೌವತೆ ಸಲ್ಲಿಕೆಗಳಲ್ಲಿ ಕೋರುವಂತಹ ಖರೀದಿಗಳ ಮೇಲಿನ ತೆರಿಗೆ ಜಮೆ ಮೊತ್ತದಿಂದ ಹೊಂದಾಣಿಕೆ ಮಾಡಿಕೊಳ್ಳುವ ರೀತಿಯಲ್ಲಿ ಒಂದು ನಿಯಂತ್ರಣ ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕ ತೆಗೆದುಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸ್ಸು ಮಾಡಲಾಗುತ್ತಿದೆ.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ಜನವರಿ ಮತ್ತು ಆಗಸ್ಟ್ 2016ರಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತರವರಿಗೆ ಹಾಗೂ ಸರ್ಕಾರದ ಗಮನಕ್ಕೆ ತಂದಾಗ, ಒಂಬತ್ತು ವರ್ತಕರುಗಳಿಂದ ₹ 0.66 ಕೋಟಿ ಮೊತ್ತವನ್ನು ಈಗಾಗಲೇ ವಸೂಲಾತಿ ಮಾಡಲಾಗಿದೆ, ಒಂದು ಪ್ರಕರಣದಲ್ಲಿ ತೆರಿಗೆಯನ್ನು ವಿಧಿಸಿ ಆದೇಶವನ್ನು ನೀಡಲಾಗಿದೆ ಹಾಗೂ ನಾಲ್ಕು ಪ್ರಕರಣಗಳಿಗೆ ಸಂಬಂಧಿಸಿದಂತೆ ಇಲಾಖೆಯು ನೋಟೀಸುಗಳನ್ನು ನೀಡಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು. ಉಳಿದ ವರ್ತಕರುಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

## 2.8 ಬಡ್ಡಿಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ರ ಪರಿಚ್ಛೇದ 36(2)ರ ಅಡಿಯಲ್ಲಿ, ತೆರಿಗೆಯ ಯಾವುದೇ ಮೊತ್ತವನ್ನು ಅಥವಾ ಸಲ್ಲಿಕೆಗಳಲ್ಲಿ ಘೋಷಿಸಲಾದಂತಹ ಹೆಚ್ಚುವರಿ ತೆರಿಗೆ ಮೊತ್ತವನ್ನು ಪಾವತಿಸದ ಅಥವಾ ಒಂದು ಪರಿಷ್ಕೃತ ಸಲ್ಲಿಕೆಯನ್ನು ತೆರಿಗೆ ಪಾವತಿಗೆ ವಾಯಿದೆ ದಿನಾಂಕದಿಂದ ಮೂರು ತಿಂಗಳಿಗೂ ಮೀರಿದ ಅವಧಿಯಲ್ಲಿ ಸಲ್ಲಿಸುವ ಪ್ರತಿಯೋರ್ವ ವರ್ತಕರೂ ಒಂದು ಸರಳ ಬಡ್ಡಿಯನ್ನು ಪಾವತಿಸಲು ಬಾಧ್ಯರಾಗಿರುತ್ತಾರೆ. 31 ಮಾರ್ಚ್ 2011ರವರೆಗೆ ಬಡ್ಡಿಯ ದರವು ತಿಂಗಳು ಒಂದಕ್ಕೆ ಶೇಕಡಾ 1.25ರಷ್ಟಿದ್ದಿತು ಹಾಗೂ 01 ಏಪ್ರಿಲ್ 2011ರಿಂದ ಜಾರಿಗೆ ಬಂದಂತೆ ಮೇಲೆ ತಿಳಿಸಲಾದಂತಹ ಅಧಿನಿಯಮದ ಪರಿಚ್ಛೇದ 37(1)ರ ಅಡಿಯಲ್ಲಿ ತಿಂಗಳು ಒಂದಕ್ಕೆ ಶೇಕಡಾ 1.5ರಷ್ಟಿದ್ದಿತು ಹಾಗೂ ಅಂತಹ ಬಡ್ಡಿಯನ್ನು, ಈ ಅಧಿನಿಯಮದ ಅಡಿಯಲ್ಲಿ ಪಾವತಿಸಬೇಕಾದ ಮೊತ್ತವು ಯಾವ ದಿನಾಂಕದಿಂದ ಬಾಕಿಯಿರುವುದೋ, ಆ ದಿನಾಂಕದಿಂದ ವಿಧಿಸಬೇಕಾಗುತ್ತದೆ.

13 ಜಿಲ್ಲೆಗಳಲ್ಲಿ[30] ಜನವರಿ 2015 ಮತ್ತು ಜನವರಿ 2016ರ ನಡುವೆ 43 ಕಚೇರಿಗಳಲ್ಲಿ (31 ಸ್ಥಳೀಯ ಮೌವತೆ ಕಚೇರಿಗಳು ಮತ್ತು 12 ಲೆಕ್ಕಪರಿಶೋಧನಾ ಕಚೇರಿಗಳು) ಮೌವತೆ-100[31]ರಲ್ಲಿನ ಸಲ್ಲಿಕೆಗಳು, ಮೌವತೆ 240[32]

---

[28] 31 ಮಾರ್ಚ್ 2010ಕ್ಕೆ ಅಂತ್ಯಗೊಂಡ ಸಾಲಿಗೆ ವರದಿ ಸಂಖ್ಯೆ 3ರ ಕಂಡಿಕೆ 2.12.11ರ ಅಡಿಯಲ್ಲಿನ ಶಿಫಾರಸು ಸಂಖ್ಯೆ 5 ಹಾಗೂ 2014ರ ವರದಿ ಸಂಖ್ಯೆ 1ರ ಕಂಡಿಕೆ 2.8.18 ಅಡಿಯಲ್ಲಿ ಶಿಫಾರಸ್ಸು ಸಂಖ್ಯೆ 1.

[29] 2015ರ ವರದಿ ಸಂಖ್ಯೆ 3ರಲ್ಲಿನ ಕಂಡಿಕೆ ಸಂಖ್ಯೆ 2.4.

[30] ಬಾಗಲಕೋಟೆ, ಬಳ್ಳಾರಿ, ಬೆಂಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಕಲಬುರಗಿ, ಕೋಲಾರ, ಮಡಿಕೇರಿ, ಮೈಸೂರು, ಶಿವಮೊಗ್ಗ, ವಿಜಯಪುರ ಹಾಗೂ ಉತ್ತರ ಕನ್ನಡ.

[31] ಮೌವತೆ – 100, ವರ್ತಕರು ಒಂದು ನಿರ್ದಿಷ್ಟ ತಿಂಗಳಿನಲ್ಲಿ ಮಾಡಲಾಗಿರುವ ಮಾರಾಟಗಳು ಮತ್ತು ಖರೀದಿಗಳನ್ನು ತೋರಿಸುವ ಮೂಲಕ ಮಾಸಿಕವಾಗಿ/ಪ್ರತೀ ತಿಂಗಳು ಸಲ್ಲಿಸುವುದಕ್ಕಾಗಿ ಬಳಸುವಂತಹ ಒಂದು ನಮೂನೆಯಾಗಿದೆ.

[32] ಮೌವತೆ – 240 ಚಾರ್ಟರ್ಡ್ ಅಕೌಂಟೆಂಟ್‌ರವರು ಅಥವಾ ಓರ್ವ ಮಾರಾಟಗಳ ಮೇಲಿನ ತೆರಿಗೆಯ ವೃತ್ತಿಗಾರರು ತಯಾರಿಸುವಂತಹ ವಾರ್ಷಿಕ ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಲೆಕ್ಕಪತ್ರಗಳ ತ:ಖ್ತೆಯನ್ನು ಸಲ್ಲಿಸುವುದಕ್ಕಾಗಿ ಬಳಸಲಾಗುವ ಒಂದು ನಮೂನೆ. ಮೌವತೆ-240 ವರ್ತಕರ ತೆರಿಗೆ ಬಾಧ್ಯತೆ ಹಾಗೂ ಮಾಸಿಕ ಸಲ್ಲಿಕೆಗಳಲ್ಲಿ (ಮೌವತೆ 100) ಅವರು ಘೋಷಿಸಿಕೊಂಡಿರುವಂತಹ ಖರೀದಿಗಳ ಮೇಲಿನ ತೆರಿಗೆ ಜಮೆ/ಮರುಪಾವತಿಗಾಗಿ ಅವರಿಗೆ ಇರುವ ಅರ್ಹತೆ ಹಾಗೂ ಅವುಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯಲ್ಲಿ ನಿರ್ಧಾರಣೆ ಮಾಡಲಾದ ಯಥಾರ್ಥತೆಯಿಂದ ಕೂಡಿದ ಮೊತ್ತಗಳ ನಡುವಿನ ಒಂದು ತುಲನಾತ್ಮಕ ತ:ಖ್ತೆಯಾಗಿರುತ್ತದೆ.

ರಲ್ಲಿ ಸಲ್ಲಿಸಲಾಗಿದ್ದಂತಹ ವಾರ್ಷಿಕ ಲೆಕ್ಕಪರಿಶೋಧನೆಗೆ ಒಳಗಾದಂತಹ ಲೆಕ್ಕಪತ್ರಗಳು ಹಾಗೂ ಪುನರ್–ಕರನಿರ್ಧಾರಣಾ ಆದೇಶಗಳ ಪರೀಕ್ಷಾ–ಪರಿಶೀಲನೆಯ ವೇಳೆಯಲ್ಲಿ, 2006–07ರಿಂದ 2013–14ರ ಅವಧಿಗೆ 75 ವರ್ತಕರುಗಳಿಂದ ₹ 62.25 ಕೋಟಿ ತೆರಿಗೆ ಮೊತ್ತವನ್ನು ಪಾವತಿಸುವಲ್ಲಿ ವಿಳಂಬವಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬಾಕಿಯಿದ್ದಂತಹ ತೆರಿಗೆಯು ಮೂಲ ಸಲ್ಲಿಕೆಗಳ ಪ್ರತಿಯಾಗಿ ಅಥವಾ ಪುನರ್–ಕರನಿರ್ಧಾರಣೆಗಳು/ಪರಿಷ್ಕೃತ ಸಲ್ಲಿಕೆಗಳು/ಮೌವತೆ–240ರಲ್ಲಿ ಸಲ್ಲಿಸಲಾದಂತಹ ವಾರ್ಷಿಕ ಲೆಕ್ಕಪರಿಶೋಧನೆಗೆ ಒಳಗಾದಂತಹ ಲೆಕ್ಕಪತ್ರಗಳ ಕಾರಣಗಳಿಂದ ಹೆಚ್ಚುವರಿ ತೆರಿಗೆ ಬಾಧ್ಯತೆಗಳಿಗೆ ಸಂಬಂಧಿಸಿದ್ದಿತು. ಈ ಎಲ್ಲಾ ಪ್ರಕರಣಗಳಲ್ಲಿಯೂ ತೆರಿಗೆ ಪಾವತಿಯಲ್ಲಿನ ವಿಳಂಬವು, ಅಧಿನಿಯಮದ ಪರಿಚ್ಛೇದ 36(2)ರ ಅಡಿಯಲ್ಲಿ ಬಡ್ಡಿಯನ್ನು ಆಕರ್ಷಿಸುತ್ತಿದ್ದಿತಾದರೂ, ಅದನ್ನು ವಿಧಿಸಿರಲಿಲ್ಲ ಅಥವಾ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು. ಏಪ್ರಿಲ್ 2006ರಿಂದ ಮಾರ್ಚ್ 2014ರ ನಡುವಿನ ತೆರಿಗೆ ಅವಧಿಗಾಗಿ ವಿಧಿಸದಿದ್ದಂತಹ/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದಂತಹ ಒಟ್ಟಾರೆ ಬಡ್ಡಿಯ ಮೊತ್ತವು ₹ 2.62 ಕೋಟಿ ಆಗಿದ್ದಿತು. ಮಾಸಿಕ ಸಲ್ಲಿಕೆಗಳು, ಅಂದರೆ ಮೌವತೆ – 100ರಲ್ಲಿ, ತೆರಿಗೆ ಪಾವತಿಯಲ್ಲಿನ ವಿಳಂಬಕ್ಕೆ ಬಡ್ಡಿ ಪಾವತಿಗಾಗಿ ಅನುವನ್ನು ಮಾಡಲಾಗಿದೆಯಾದರೂ, ಈ ಅನುವಿನ ಪಾಲನೆಯ ಮೇಲ್ವಿಚಾರಣೆಯಲ್ಲಿ ಇಲಾಖೆಯು ವಿಫಲಗೊಂಡಿದ್ದಿತು, ಇದು ಬಡ್ಡಿಯನ್ನು ಪಾವತಿಸದಿರುವಲ್ಲಿ/ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿತು.

ತೆರಿಗೆಗಳ ಪಾವತಿಯಲ್ಲಿನ ವಿಳಂಬಕ್ಕೆ ಸ್ವಯಂಚಾಲಿತವಾಗಿ ಬಡ್ಡಿಯನ್ನು ಲೆಕ್ಕಹಾಕುವ ಅನುಕೂಲತೆಯನ್ನು ಸ್ಥಾಪಿಸುವಂತೆ ಲೆಕ್ಕಪರಿಶೋಧನೆಯು, ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಆನ್‌ಲೈನ್ ವ್ಯವಸ್ಥೆಯ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ[33] ಪ್ರಕಟಿತ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಿತು ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗಿದೆ. ಮುಂದುವರೆದು, ಅದೇ ರೀತಿಯ ಕಂಡಿಕೆಗಳನ್ನು ರಾಜಸ್ವ ವಲಯದ ವಿವಿಧ ಲೆಕ್ಕಪರಿಶೋಧನಾ ವರದಿಗಳಲ್ಲಿ ಅವಿರತವಾಗಿ ಪ್ರಕಟಿಸಲಾಗಿದ್ದಿತು, ಇದು ವರ್ತಕರುಗಳಲ್ಲಿ ಬಡ್ಡಿ ಪಾವತಿಸುವುದಕ್ಕೆ ಸಂಬಂಧಿಸಿದಂತೆ ಅನುವುಗಳನ್ನು ಪಾಲಿಸದಿರುವುದು ಪ್ರಚಲಿತದಲ್ಲಿದೆ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ, ರಾಜಸ್ವ/ವರಮಾನದ ನಷ್ಟಗಳನ್ನು ತಡೆಯುವುದಕ್ಕಾಗಿ ಅಲ್ಲದೆಯೇ, ತೆರಿಗೆಗಳ ಸಮಯೋಚಿತ ಪಾವತಿಗಾಗಿ ವರ್ತಕರುಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ, ತೆರಿಗೆಯ ವಿಳಂಬ ಪಾವತಿಗಳ ಮೇಲೆ ಸ್ವಯಂಚಾಲಿತವಾಗಿ ಬಡ್ಡಿಯನ್ನು ವಿಧಿಸುವ ಒಂದು ವ್ಯವಸ್ಥೆಯನ್ನು ಆದ್ಯತೆಯ ಆಧಾರದ ಮೇರೆಗೆ ಸ್ಥಾಪಿಸಬೇಕು ಎಂಬುದಾಗಿ ಈ ಮೂಲಕ ಶಿಫಾರಸ್ಸು ಮಾಡಲಾಗುತ್ತಿದೆ.

ಈ ಪ್ರಕರಣಗಳನ್ನು ಫೆಬ್ರವರಿ ಮತ್ತು ಆಗಸ್ಟ್ 2016ರಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತರವರು ಹಾಗೂ ಸರ್ಕಾರದ ಗಮನಕ್ಕೆ ತಂದಾಗ, 19 ವರ್ತಕರಿಗೆ ಸಂಬಂಧಿಸಿದಂತೆ ₹ 28.57 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಯಿತು, ಒಂಬತ್ತು ವರ್ತಕರುಗಳಿಗೆ ಸಂಬಂಧಿಸಿದಂತೆ ಬಡ್ಡಿಯನ್ನು ವಿಧಿಸುವುದಕ್ಕಾಗಿ ಆದೇಶಗಳನ್ನು ಜಾರಿಗೊಳಿಸಲಾಗಿದೆ ಹಾಗೂ ನಾಲ್ಕು ವರ್ತಕರುಗಳಿಗೆ ಸಂಬಂಧಿಸಿದಂತೆ ನೋಟೀಸುಗಳನ್ನು ನೀಡಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು. ಉಳಿದ ವರ್ತಕರುಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

## 2.9 ತೆರಿಗೆ ಜಮೆ ಮೊತ್ತದಿಂದ ಅಧಿಕ ಪ್ರಮಾಣದ ಹೊಂದಾಣಿಕೆ

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ರ ಪರಿಚ್ಛೇದ 10ರ ಅನುಸಾರ, ಅಧಿನಿಯಮದ ಅಡಿಯಲ್ಲಿ ಓರ್ವ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು "ಮಾರಾಟಗಳ ಮೇಲಿನ ತೆರಿಗೆ" ಎಂಬುದಾಗಿ ಕರೆಯಲ್ಪಡುತ್ತದೆಯಾದಲ್ಲಿ ವರ್ತಕರು ತಾವು ಮಾಡಿದ ಖರೀದಿಗಳ ಮೇಲೆ ಪಾವತಿಸಲಾದಂತಹ ತೆರಿಗೆಯನ್ನು "ಖರೀದಿಗಳ ಮೇಲಿನ ತೆರಿಗೆ" ಎಂಬುದಾಗಿ ಕರೆಯಲ್ಪಡುತ್ತದೆ. ಓರ್ವ ವರ್ತಕರು, ತಮ್ಮ ಮಾರಾಟಗಳ ಮೇಲಿನ ತೆರಿಗೆಗೆ ಪ್ರತಿಯಾಗಿ ತಾವು ಖರೀದಿಗಳ ಮೇಲೆ ಪಾವತಿಸಲಾದಂತಹ ತೆರಿಗೆಯನ್ನು ಹೊಂದಾಣಿಕೆ ಮಾಡಿಕೊಂಡನಂತರ ನಿವ್ವಳ ತೆರಿಗೆಯನ್ನು[34] ಪಾವತಿಸಲು ಬಾಧ್ಯರಾಗಿರುತ್ತಾರೆ.

ಕರ್ನಾಟಕ ಮೌವತೆಯ ಮೇಲೆ ತಿಳಿಸಲಾದಂತಹ ಅನುವು, ಓರ್ವ ವರ್ತಕರು ಕಳೆದುಕೊಳ್ಳಬೇಕಾದಂತಹ ಖರೀದಿಗಳ ಮೇಲಿನ ತೆರಿಗೆಯ ಮೊತ್ತವು ಅವರು ಪಾವತಿಸಬೇಕಾದಂತಹ ಮಾರಾಟಗಳ ಮೇಲಿನ ತೆರಿಗೆಯ ಮೊತ್ತವನ್ನು ಮೀರಿದಲ್ಲಿ, ಅಂತಹ ಅಧಿಕ ಪ್ರಮಾಣದ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು ಅಥವಾ ನಿರ್ದಿಷ್ಟಪಡಿಸಬಹುದಾದ ಬಡ್ಡಿಯ ಜೊತೆಯಲ್ಲಿ ಮರುಪಾವತಿಸತಕ್ಕದ್ದು ಎಂಬುದಾಗಿಯೂ ನಿರ್ದಿಷ್ಟಪಡಿಸಿದೆ. ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ನಿಯಮಗಳು, 2005ರ ನಿಯಮ 127ರ ಅನುಸಾರ, ಒಂದು ವರ್ಷದಲ್ಲಿ ಯಾವುದೇ ತಿಂಗಳಿಗೆ ಅಥವಾ ತ್ರೈಮಾಸಿಕಕ್ಕೆ ಯಾರ ಕಳೆದುಕೊಳ್ಳಬೇಕಾದಂತಹ ಖರೀದಿಗಳ ಮೇಲಿನ ತೆರಿಗೆ ಮೊತ್ತವು ಪರಿಚ್ಛೇದ 10ರ ಉಪ–ಪರಿಚ್ಛೇದ (5)ರ ಅಡಿಯಲ್ಲಿ ತಾವು ಪಾವತಿಸಬೇಕಾದಂತಹ ಮಾರಾಟಗಳ ಮೇಲಿನ ತೆರಿಗೆ ಮೊತ್ತವನ್ನು ಮೀರುವುದೋ, ಅಥವಾ ಯಾರ ಪ್ರಕರಣದಲ್ಲಿ ಕಳೆದುಕೊಳ್ಳಬೇಕಾದ ಖರೀದಿಗಳ

[33] 2014ರ ವರದಿ ಸಂಖ್ಯೆ 1ರ ಕಂಡಿಕೆ ಸಂಖ್ಯೆ 2.8.18ರ ಅಡಿಯಲ್ಲಿನ ಶಿಫಾರಸ್ಸು ಸಂಖ್ಯೆ 11.

[34] ನಿವ್ವಳ ತೆರಿಗೆ = ಮಾರಾಟಗಳ ಮೇಲಿನ ತೆರಿಗೆ – ಖರೀದಿಗಳ ಮೇಲಿನ ತೆರಿಗೆ.

ಮೇಲಿನ ತೆರಿಗೆಯ ಮೊತ್ತವು ಪರಿಚ್ಛೇದ 27ರ ಉಪ–ಪರಿಚ್ಛೇದ (4)ರ ಅಡಿಯಲ್ಲಿ ಸಲ್ಲಿಸಿದಂತಹ ಯಾವುದೇ ಅಂತಿಮ ಸಲ್ಲಿಕೆಯ ಆಧಾರದ ಮೇರೆಗೆ ಅವರು ಪಾವತಿಸಬೇಕಾದಂತಹ ಮಾರಾಟಗಳ ಮೇಲಿನ ತೆರಿಗೆಯ ಮೊತ್ತವನ್ನು ಮೀರುವುದೋ ಅಂತಹ ವರ್ತಕರು ಅಂತಹ ಮೊತ್ತವನ್ನು ಈ ಅಧಿನಿಯಮದ ಅಥವಾ ಕೇಂದ್ರ ಮಾರಾಟಗಳ ಮೇಲಿನ ತೆರಿಗೆ, 1956ರ ಅಡಿಯಲ್ಲಿ ಪಾವತಿಸಬೇಕಾದ ತೆರಿಗೆಯ ಕಡೆಗೆ ಹೊಂದಾಣಿಕೆ ಮಾಡಿಕೊಳ್ಳಬಹುದು.

ಆರು[35] ಜಿಲ್ಲೆಗಳಲ್ಲಿ 14 ಕಚೇರಿಗಳಲ್ಲಿ (10 ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಚೇರಿಗಳು – ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಚೇರಿಗಳು, ಎರಡು ಮೌಲ್ಯವರ್ಧಿತ ತೆರಿಗೆ ಉಪ–ಕಚೇರಿಗಳು ಹಾಗೂ ಎರಡು ಲೆಕ್ಕಪರಿಶೋಧನಾ ಕಚೇರಿಗಳು) ಮೌವತೆ–100 ಸಲ್ಲಿಕೆಗಳು, ಮೌವತೆ 240ರಲ್ಲಿ ಸಲ್ಲಿಸಲಾಗಿದ್ದಂತಹ ವಾರ್ಷಿಕ ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಲೆಕ್ಕಪತ್ರಗಳು ಹಾಗೂ ಪುನರ್–ಕರನಿರ್ಧಾರಣಾ ಆದೇಶಗಳನ್ನು ಜನವರಿ 2015 ಮತ್ತು ಡಿಸೆಂಬರ್ 2015ರ ನಡುವೆ ಪರೀಕ್ಷಾ–ಪರಿಶೀಲನೆ ಮಾಡಲಾಯಿತು. ವರ್ತಕರುಗಳು ತಮ್ಮ ಸಲ್ಲಿಕೆಗಳಲ್ಲಿ ಮುಂದಿನ ತೆರಿಗೆ ಅವಧಿಗೆ ಮುಂದಕ್ಕೆ ತರಲಾಗಿದ್ದ ತೆರಿಗೆ ಜಮೆ ಮೊತ್ತಗಳನ್ನು ಹಾಗೂ ತಮ್ಮ ಸಲ್ಲಿಕೆಗಳಲ್ಲಿ ವರ್ತಕರುಗಳು ತಾವು ಮಾಡಿದಂತಹ ಮಾರಾಟಗಳ ಮೇಲೆ ಪಾವತಿಸಬೇಕಾದ ತೆರಿಗೆಯ ಮೊತ್ತಕ್ಕೆ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಂಡಿದ್ದ ಮೊತ್ತವನ್ನು ಅವರುಗಳು ತಮ್ಮ ಹಿಂದಿನ ತೆರಿಗೆ ಅವಧಿಗಳಿಗೆ ಸಲ್ಲಿಸಿದ್ದಂತಹ ಸಲ್ಲಿಕೆಗಳು/ಪರಿಷ್ಕೃತ ಸಲ್ಲಿಕೆಗಳು, ನಮೂನೆ–240ರಲ್ಲಿ ಲೆಕ್ಕಪರಿಶೋಧಕರು ನೀಡಿದ್ದ ಸಲಹೆಗಳು ಹಾಗೂ ನಿರ್ದಿಷ್ಟ ಅಧಿಕಾರಿಗಳು ಪೂರ್ಣಗೊಳಿಸಿದ್ದಂತಹ ಪುನರ್–ಕರನಿರ್ಧಾರಣಾ ಆದೇಶಗಳ ಜೊತೆಯಲ್ಲಿ ಲೆಕ್ಕಪರಿಶೋಧನೆಯು ಅಡ್ಡಪರಿಶೀಲನೆ ಮಾಡಿತು. 22 ವರ್ತಕರುಗಳು 2010–11ರಿಂದ 2013–14ರ ತೆರಿಗೆ ಅವಧಿಗಳಿಗೆ ₹ 3.15 ಕೋಟಿ ಮೊತ್ತದಷ್ಟು ಖರೀದಿಗಳ ಮೇಲಿನ ತೆರಿಗೆ ಜಮೆ ಮೊತ್ತಕ್ಕೆ ಅರ್ಹರಿದ್ದರು, ಆದಾಗ್ಯೂ, ಈ ವರ್ತಕರುಗಳು ₹ 4.45 ಕೋಟಿ ಮೊತ್ತದಷ್ಟು ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ಹೊಂದಾಣಿಕೆ ಮಾಡಿಕೊಂಡಿದ್ದರು, ಎಂಬುದನ್ನು ಅಡ್ಡಪರಿಶೀಲನೆಯು ತೋರಿಸಿಕೊಟ್ಟಿತು, ಇದು ₹ 1.30 ಕೋಟಿ ಮೊತ್ತದಷ್ಟು ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ಅಧಿಕ ಪ್ರಮಾಣದಲ್ಲಿ ಮಾಡಿಕೊಳ್ಳುವಲ್ಲಿ ಪರಿಣಮಿಸಿದ್ದಿತು. ಅಧಿಕ ಪ್ರಮಾಣದಲ್ಲಿ ಆಗಿದ್ದಂತಹ ಹೊಂದಾಣಿಕೆಯು ವರ್ತಕರುಗಳು ಮಾಸಿಕ ಸಲ್ಲಿಕೆಗಳು, ಪರಿಷ್ಕೃತ ಸಲ್ಲಿಕೆಗಳು, ಮೌವತೆ 240, ಪುನರ್–ಕರನಿರ್ಧಾರಣಾ ಆದೇಶಗಳು ಮುಂತಾದ ವಿವಿಧ ಸಲ್ಲಿಕೆಗಳಲ್ಲಿ/ಆದೇಶಗಳಲ್ಲಿ ಕೋರಿದ್ದಂತಹ ಜಮೆಗಳು ಮೂಲತಃ ಒಂದಕ್ಕೊಂದು ಹೊಂದಾಣಿಕೆಯಾಗದಿದ್ದಂತಹ ಕಾರಣದಿಂದ ಆಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವರ್ತಕರುಗಳು ಕೋರಿರುವಂತಹ ಖರೀದಿಗಳ ಮೇಲಿನ ತೆರಿಗೆ ಜಮೆಯ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ, ವರ್ತಕರುಗಳು ವಿವಿಧ ಸಲ್ಲಿಕೆಗಳಲ್ಲಿ ಸಲ್ಲಿಸಿರುವಂತಹ ವಿವರಗಳನ್ನು ಹಾಗೂ ಪುನರ್–ಕರನಿರ್ಧಾರಣಾ ಆದೇಶಗಳನ್ನು ಅಡ್ಡಪರಿಶೀಲನೆ ಮಾಡುವ ಸಲುವಾಗಿ ಇಲಾಖೆಯಲ್ಲಿ ಒಂದು ವ್ಯವಸ್ಥೆಯು ಇರುವುದಿಲ್ಲ.

ತಗಾದೆಗಳ ಎಲ್ಲಾ ವಿವಿಧ ಮೂಲಗಳಿಂದ (ಸಲ್ಲಿಕೆಗಳು, ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಲೆಕ್ಕಪತ್ರಗಳ ತಃಖ್ತೆಗಳು, ಪುನರ್–ಕರನಿರ್ಧಾರಣಾ ಆದೇಶಗಳು, ಇತ್ಯಾದಿ) ವರ್ತಕರುಗಳ ಬಾಧ್ಯತೆಗಳನ್ನು ಸಂಕಲನಗೊಳಿಸುವಂತಹ ಒಂದು ಆನ್‌ಲೈನ್ ಲೆಡ್ಜರನ್ನು ವರ್ತಕರುಗಳಿಗಾಗಿ ಸ್ಥಾಪಿಸುವುದರ ಬಗ್ಗೆ ಲೆಕ್ಕಪರಿಶೋಧನೆಯು ಪದೇಪದೇ ಶಿಫಾರಸ್ಸು[36] ಮಾಡಿದ್ದಿತು ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗಿರುತ್ತದೆ, ಅದು ವಿವಿಧ ಮೂಲಗಳಲ್ಲಿ ವಿಭಿನ್ನವಾಗಿ ಕೋರಲಾಗಿದ್ದಂತಹ ಜಮೆಗಳನ್ನು ಸಮನ್ವಯಗೊಳಿಸಲು ಸಾಧ್ಯವಾಗುತ್ತಿದ್ದಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅದೇ ರೀತಿಯ ಅಂಶವನ್ನು ಹಿಂದಿನ ವರದಿಯಲ್ಲಿ[37] ಸೇರಿಸಲಾಗಿದ್ದಿತು, ಜಮೆಯನ್ನು ಅಧಿಕ ಪ್ರಮಾಣದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ವರ್ತಕರುಗಳ ನಡುವೆ ಪ್ರಚಲಿತದಲ್ಲಿದ್ದಿತು/ವಾಸ್ತವವಾಗಿದ್ದಿತು ಎಂಬುದನ್ನು ಇದು ಸೂಚಿಸುತ್ತದೆ. ಆದ್ದರಿಂದ, ಮಾಸಿಕ ಸಲ್ಲಿಕೆಗಳು, ಪರಿಷ್ಕೃತ ಸಲ್ಲಿಕೆಗಳು, ಲೆಕ್ಕಪರಿಶೋಧನೆಗೆ ಒಳಪಟ್ಟಂತಃ ತಃಖ್ತೆಗಳು, ಪುನರ್–ಕರನಿರ್ಧಾರಣಾ ಆದೇಶಗಳು, ಇತ್ಯಾದಿಗಳಲ್ಲಿ ವರ್ತಕರು ಸಲ್ಲಿಸಿರುವ ವಿವರಗಳನ್ನು ಅಡ್ಡಪರಿಶೀಲನೆಗಾಗಿ ತಂತ್ರಾಂಶ ಅನ್ವಯಕ್ಕೆ ಸಾಧ್ಯಗೊಳಿಸುವುದಕ್ಕಾಗಿ ವಿದ್ಯುನ್ಮಾನ ಸಲ್ಲಿಕೆ ವ್ಯವಸ್ಥೆಯಲ್ಲಿ ಮಾರ್ಪಾಡುಗಳನ್ನು ಮಾಡಬೇಕಾಗಿ ಈ ಮೂಲಕ ಶಿಫಾರಸ್ಸು ಮಾಡಲಾಗುತ್ತಿದೆ.

ಈ ಪ್ರಕರಣಗಳನ್ನು ಜುಲೈ ಮತ್ತು ಆಗಸ್ಟ್ 2016ರಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತರವರು ಹಾಗೂ ಸರ್ಕಾರದ ಗಮನಕ್ಕೆ ತಂದಾಗ, ಇಬ್ಬರು ವರ್ತಕರಿಗೆ ಸಂಬಂಧಿಸಿದಂತೆ ₹ 2.04 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದೆ ಹಾಗೂ ಓರ್ವ ವರ್ತಕರಿಗೆ ಸಂಬಂಧಿಸಿದಂತೆ ನೋಟೀಸನ್ನು ನೀಡಲಾಗಿದೆ ಎಂಬುದಾಗಿ ಸರ್ಕಾರವು ತಿಳಿಸಿತು. ಉಳಿದ ವರ್ತಕರಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಡಿಸೆಂಬರ್ 2016).

---

[35] ಬೆಂಗಳೂರು, ಬಾಗಲಕೋಟೆ, ದಾವಣಗೆರೆ, ಧಾರವಾಡ, ಮಡಿಕೇರಿ ಹಾಗೂ ತುಮಕೂರು.

[36] 31 ಮಾರ್ಚ್ 2010ಕ್ಕೆ ಅಂತ್ಯಗೊಂಡ ಸಾಲಿನ ವರದಿ ಸಂಖ್ಯೆ 3ರ ಅಡಿಯಲ್ಲಿನ ಕಂಡಿಕೆ ಸಂಖ್ಯೆ 2.12.11ರ ಅಡಿಯಲ್ಲಿನ ಶಿಫಾರಸ್ಸು ಸಂಖ್ಯೆ 5 ಹಾಗೂ 2014ರ ವರದಿ ಸಂಖ್ಯೆ 1ರ ಕಂಡಿಕೆ ಸಂಖ್ಯೆ 2.8.18ರ ಅಡಿಯಲ್ಲಿನ ಶಿಫಾರಸ್ಸು ಸಂಖ್ಯೆ 1.

[37] 2015ರ ವರದಿ ಸಂಖ್ಯೆ 3ರ ಕಂಡಿಕೆ ಸಂಖ್ಯೆ 2.7.